ಮಂಗಳವಾರ, ಆಗಸ್ಟ್ 17, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 229 | ಪುಟ 12 ● www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕ್ಷೇಮ ಕುಶಲ**

ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ಪೋಷಕರ ಜವಾಬ್ದಾರಿ ಹೆಚ್ಚು. ಮಕ್ಕಳು ನೋಡಿ ತಿಳಿದು ಅನುಸರಿಸುವುದೇ ಹೆಚ್ಚು. ಹಾಗಾಗಿ ಪೋಷಕರು ಮನೆಯಲ್ಲಿ ಶಿಸ್ತಿನಿಂದಿರಬೇಕಾದ್ದು ಅತ್ಯಂತ ಆವಶ್ಯಕ...



‘ರಾಜಕಾರಣದ ಶುದ್ಧೀಕರಣಕ್ಕೆ ಇಚ್ಛಾಶಕ್ತಿಯೂ ಬೇಕು’ 4
ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಪತ್ರ ಬರೆದ ಸಿದ್ದರಾಮಯ್ಯ
ಎರಡನೇ ಟೆಸ್ಟ್: ಭಾರತಕ್ಕೆ ಅಮೋಘ ಜಯ 10
‘ಬಿಜೆಪಿ ಸುಳ್ಳಿನ ಕಾರ್ಖಾನೆ, ಅರಿವು ಮೂಡಿಸಿ’ 8

| ಸೆನ್ಸೆಕ್ಸ್ | ನಿಫ್ಟಿ |
|---|---|
| 55,582 ▲ | 16,563 ▲ |



### ರಾಜ್ಯ ಕೋವಿಡ್ ಅಂಕಿ–ಅಂಶ

| | |
|---|---|
| 29,30,529 ▲ | ಒಟ್ಟು ಸೋಂಕಿತರು (29,29,464 ನಿನ್ನೆಯ ವಿವರ) |
| 22,048 ▼ | ಸಕ್ರಿಯ ಪ್ರಕರಣಗಳು |
| 28,71,448 ▲ | ಗುಣಮುಖರಾದವರು |
| 37,007 ▲ | ಒಟ್ಟು ಸಾವು |

ದಿನದ ಏರಿಕೆ

| | | |
|---|---|---|
| ಹೊಸ ಪ್ರಕರಣ | 1,065 | ▼ |
| ಗುಣಮುಖ | 1,486 | ▼ |
| ಸಾವು | 28 | ▲ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇದೇ 23 ರಿಂದ 9–10 ನೇ ತರಗತಿ ಆರಂಭ ● ಕಠಿಣ ಮಾರ್ಗಸೂಚಿ

# ಅರ್ಧ ದಿನವಷ್ಟೇ ಭೌತಿಕ ತರಗತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಇದೇ 23 ರಿಂದ 9 ಮತ್ತು 10 ನೇ ತರಗತಿಗಳ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ಬೋಧನಾ ತರಗತಿಗಳು ಆರಂಭವಾಗಲಿದ್ದು, ಈ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಬಿಡುಗಡೆ ಮಾಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಈ ಸಂಬಂಧ ತೀರ್ಮಾನ ತೆಗೆದುಕೊಳ್ಳಲಾಗಿತ್ತು.

ಕೋವಿಡ್ ಸೋಂಕಿನ ಪ್ರಮಾಣ ಶೇ 2 ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ 9 ಮತ್ತು 10 ನೇ ತರಗತಿಗಳನ್ನು (ಆ. 23 ರಿಂದ) ಪ್ರಾರಂಭದಲ್ಲಿ ಬೆಳಗಿನ ಅವಧಿಯಲ್ಲಿ ಅರ್ಧ ದಿನ ತೆರೆಯಲು ತೀರ್ಮಾನಿಸಲಾಗಿದೆ.

ದೈಹಿಕ ಅಂತರ ಕಾಪಾಡಿಕೊಂಡು ಭೌತಿಕ ತರಗತಿಗಳನ್ನು ನಡೆಸಲು ಶಾಲಾ ಕೊಠಡಿಗಳ ಲಭ್ಯತೆ, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು 15 ರಿಂದ 20 ಸಂಖ್ಯೆಯಲ್ಲಿ ತಂಡಗಳಾಗಿ ಮಾಡಿ ತರಗತಿ ನಡೆಸಲಾಗುತ್ತದೆ.


ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30 ರವರೆಗೆ, ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 12.30 ರವರೆಗೆ ತರಗತಿಗಳು ನಡೆಯುತ್ತವೆ. ಪ್ರತಿ ಶಾಲೆಯಲ್ಲಿ 1 ರಿಂದ 8 ತಂಡಗಳನ್ನು ರಚಿಸಲು ಅವಕಾಶ ಇರುತ್ತದೆ.

### ‘ಶುಲ್ಕ ಕಟ್ಟಲು ಬಲವಂತ ಸಲ್ಲ’

‘ಶುಲ್ಕ ಕಟ್ಟುವಂತೆ ಖಾಸಗಿ ಶಾಲೆಗಳು ಬಲವಂತ ಮಾಡುವಂತೆ ಇಲ್ಲ. ಕೋವಿಡ್‌ನಿಂದ ಪೋಷಕರು ಸಂಕಷ್ಟದಲ್ಲಿದ್ದಾರೆ. ಹೀಗಾಗಿ, ಶುಲ್ಕ ಸಂಬಂಧ ಹೆಚ್ಚು ಬಲವಂತ ಮಾಡಬೇಡಿ ಎಂದು ಖಾಸಗಿ ಶಾಲಾ ಸಂಘಟನೆಗಳ ಜೊತೆ ಮಾತನಾಡಿದ್ದೇನೆ. ಸಂಘಟನೆಗಳು ಒಪ್ಪಿವೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು. ‘ಸಂಪೂರ್ಣ ಶುಲ್ಕ ಕಟ್ಟಿ ಎನ್ನುವುದೂ ಸರಿಯಲ್ಲ. ಪೋಷಕರನ್ನು ಗ್ರಾಹಕರ ರೀತಿ ನೋಡಬೇಡಿ ಎಂದಿದ್ದೇನೆ. ಪೋಷಕರ ಹಿತವನ್ನೂ ಗಮನಿಸಿ, ಶಾಲೆಯವರು ಇತಿಮಿತಿಯಲ್ಲಿ ಶುಲ್ಕ ತೆಗೆದುಕೊಳ್ಳಬೇಕು. ಶುಲ್ಕ ವಿಚಾರ ನ್ಯಾಯಾಲಯದಲ್ಲಿದೆ. ಹೀಗಾಗಿ, ನೇರವಾಗಿ ಹಿಡಿತ ಸಾಧಿಸುವುದೂ ಕಷ್ಟ’ ಎಂದೂ ಅಸಹಾಯಕತೆ ವ್ಯಕ್ತಪಡಿಸಿದರು.

**ಎಸ್‌ಒಪಿ ಪ್ರಮುಖ ಅಂಶಗಳು:**

- ಮಕ್ಕಳು ಶಾಲೆಗೆ ಹಾಜರಾಗುವಾಗ ಪೋಷಕರ ಅನುಮತಿ ತರುವುದು ಕಡ್ಡಾಯ. ಅನುಮತಿ ಪತ್ರದಲ್ಲಿ ಮಗುವಿಗೆ ಕೋವಿಡ್–19 ರ ಸೋಂಕಿನ ಲಕ್ಷಣಗಳು ಇಲ್ಲ ಎಂಬುದನ್ನು ದೃಢೀಕರಿಸಬೇಕು
- ವಿದ್ಯಾರ್ಥಿಗಳು ಮನೆಯಿಂದಲೇ ಕುಡಿಯುವ ನೀರು ಮತ್ತು ಉಪಹಾರವನ್ನು ತರುವಂತೆ ಸೂಚಿಸಬೇಕು
- ಅವಶ್ಯಕತೆ ಅನುಸಾರ ಶಾಲೆಗಳಲ್ಲಿ ಮಕ್ಕಳಿಗೆ ಕುಡಿಯಲು ಶುದ್ಧ ಬಿಸಿ ನೀರಿನ ವ್ಯವಸ್ಥೆ ಮಾಡಬೇಕು
- ಶಾಲೆಗಳಲ್ಲಿ ವಿದ್ಯಾರ್ಥಿಗಳ ಭೌತಿಕ ಹಾಜರಾತಿ ಕಡ್ಡಾಯವಲ್ಲ. ಆನ್‌ಲೈನ್ ಅಥವಾ ಪರ್ಯಾಯ ವಿಧಾನದ ಮೂಲಕವೂ ಹಾಜರಾಗಬಹುದು



**ಮಕ್ಕಳು ಶಾಲೆಗೆ ಹಾಜರಾಗುವುದು ಕಡ್ಡಾಯ ಅಲ್ಲ. ಆನ್‌ಲೈನ್ ಮೂಲಕ ಬೇಕಾದರೂ ಶಿಕ್ಷಣ ಪಡೆಯಬಹುದು. ಈ ಆಯ್ಕೆಯನ್ನು ಪೋಷಕರಿಗೆ ಬಿಟ್ಟಿದ್ದೇವೆ**

**ಬಿ.ಸಿ. ನಾಗೇಶ್**
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

9ನೇ ಪುಟ ನೋಡಿ



ಕಾಬೂಲ್ ವಿಮಾನ ನಿಲ್ದಾಣಕ್ಕೆ ಜನರು ನುಗ್ಗಿದ ದೃಶ್ಯ ಸೋಮವಾರ ಕಂಡು ಬಂತು –ಎಎಫ್‌ಪಿ ಚಿತ್ರ

ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಳ್ವಿಕೆ: ಜನರಲ್ಲಿ ಭೀತಿ

# ದೇಶ ಬಿಡಲು ನೂಕುನುಗ್ಗಲು

**ಕಾಬೂಲ್ (ಎಎಫ್‌ಪಿ):** ತಾಲಿಬಾನ್ ಕೈವಶವಾಗಿರುವ ಅಫ್ಗಾನಿಸ್ತಾನದಿಂದ ಹೇಗಾದರೂ ಪರಾರಿಯಾಗಬೇಕು ಎಂದು ಜನರು ಕಾಬೂಲ್ ವಿಮಾನ ನಿಲ್ದಾಣಕ್ಕೆ ಸೋಮವಾರ ಅಕ್ಷರಶಃ ಮುತ್ತಿಗೆಯನ್ನೇ ಹಾಕಿದ್ದರು. ನಿಲ್ದಾಣದಿಂದ ಹೊರಡಲು ಸಜ್ಜಾಗಿದ್ದ ಅಮೆರಿಕದ ವಿಮಾನಕ್ಕೆ ಏರಿಕೊಳ್ಳಲು ಎಲ್ಲರೂ ಯತ್ನಿಸಿದ್ದರಿಂದ ಗೊಂದಲ ಪರಿಸ್ಥಿತಿ ನಿರ್ಮಾಣ ಆಗಿತ್ತು. ದೇಶದಿಂದ ಹೊರಗೆ ಹೋಗಲು ಜನರು ಹತಾಶರಾಗಿ ವಿಮಾನಗಳನ್ನು ಹುಡುಕುತ್ತಿದ್ದ ದೃಶ್ಯ ಕಂಡು ಬಂತು.

ವಿಮಾನ ನಿಲ್ದಾಣದ ರನ್‌ವೇಗೆ ಜನರು ನುಗ್ಗಿದ್ದರು. ಈ ಗೊಂದಲ ಪರಿಹಾರಕ್ಕೆ ಅಮೆರಿಕದ ಯೋಧರು ಗಾಳಿಯಲ್ಲಿ ಗುಂಡು ಹಾರಿಸಿದರು. ಇದಾದ ಬಳಿಕ, ಎಲ್ಲ ನಾಗರಿಕ ವಿಮಾನಗಳನ್ನು ರದ್ದುಪಡಿಸಲಾಗಿದೆ.

ಅಮೆರಿಕ ವಾಯುಪಡೆಯ ವಿಮಾನವು ಚಲಿಸಲು ಆರಂಭಿಸುತ್ತಿದ್ದಂತೆಯೇ ನೂರಾರು ಮಂದಿ ವಿಮಾನದ ಜತೆಗೇ ಓಡಿಕೊಂಡು ವಿಮಾನವನ್ನು ಏರಲು ಯತ್ನಿಸಿದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಆಗಲೇ ಕಿಕ್ಕಿರಿದು ತುಂಬಿದ್ದ ವಿಮಾನದ ಮೆಟ್ಟಿಲುಗಳನ್ನು ಏರಲು ನಾಗರಿಕರು ಯತ್ನಿಸುತ್ತಿರುವ ವಿಡಿಯೊಗಳು ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಇವೆ.

ಮೆಟ್ಟಿಲು ಹತ್ತಿದವರು ಇತರರು ಹತ್ತಲು ನೆರವು ನೀಡಿದ್ದಾರೆ. ಕೆಲವರು ಮೆಟ್ಟಿಲುಗಳನ್ನುಹಿಡಿದು ನೇತಾಡಿದ್ದಾರೆ.

ತಾಲಿಬಾನ್‌ನ ದಮನಕಾರಿ ಆಳ್ವಿಕೆಯನ್ನು ಅಮೆರಿಕದ ನೇತೃತ್ವದ ಪಡೆಯು ಹೊರದಬ್ಬಿದ ಎರಡು ದಶಕಗಳ ಬಳಿಕ ಅದೇ ತಾಲಿಬಾನ್, ದೇಶದ ಆಳ್ವಿಕೆಯನ್ನು ಮರಳಿ ಪಡೆದುಕೊಂಡಿದೆ. ಭಯಭೀತರಾಗಿರುವ ಜನರು, ಮಕ್ಕಳು ಮತ್ತು ಸರಂಜಾಮುಗಳೊಂದಿಗೆ ದೇಶ ತೊರೆಯಲು ಹಾತೊರೆಯುತ್ತಿದ್ದಾರೆ.

‘ನನಗೆ ಭಯವಾಗಿದೆ. ಅವರು ಗಾಳಿಯಲ್ಲಿ ಆಗಾಗ ಗುಂಡು ಹಾರಿಸುತ್ತಿದ್ದಾರೆ’ ಎಂದು ವ್ಯಕ್ತಿಯೊಬ್ಬರು ಹೇಳಿದ್ದಾರೆ.

9ನೇ ಪುಟ ನೋಡಿ

### ಚಿನಕುರಳಿ

ಪ್ರಕಾಶ್ ಶೆಟ್ಟಿ




ಕೋವಿಡ್ ಸಂದರ್ಭದಲ್ಲಿ ಘೋಷಿತ ಸಾವಿಗಿಂತ 2.8 ಲಕ್ಷ ಹೆಚ್ಚು ಸಾವು ಸಾಧ್ಯತೆ

# ಗುಜರಾತ್: ಸತ್ಯ ನುಡಿವ ಮರಣ ನೋಂದಣಿ

● ಶ್ರೀಗಿರೀಶ್ ಜಾಲಿಹಾಳ್, ತಪಸ್ಯ, ನಿತಿನ್ ಸೇಠಿ

ಆಳ–ಅಗಲ

**ಗುಜರಾತ್‌ನ** ಅಮ್ರೇಲಿ ಪಟ್ಟಣದಲ್ಲಿರುವ ಎರಡು ಚಿತಾಗಾರಗಳಲ್ಲಿ ಒಂದು ಕೈಲಾಸ ಮುಕ್ತಿಧಾಮ. ಅದರಲ್ಲಿ ನಾಲ್ಕು ಕುಂಡಗಳಿವೆ. ಆ ನಾಲ್ಕರ ಶಿಥಿಲಾವಸ್ಥೆಯು ವಿವಿಧ ಹಂತಗಳಲ್ಲಿವೆ. ಮೃತದೇಹವನ್ನು ಸುಡುವುದಕ್ಕಾಗಿ ಇರಿಸುವ ಕಬ್ಬಿಣದ ಚೌಕಟ್ಟು ನಿರಂತರ ಬೆಂಕಿಯಿಂದಾಗಿ ಕರಗಿ ಹೋಗಿದೆ.

‘ಒಂದು ತಿಂಗಳ ಕಾಲ ದಿನದ 24 ಗಂಟೆಯೂ ಚಿತೆ ಉರಿಯುತ್ತಲೇ ಇತ್ತು’ ಎಂದವರು ಚಿತಾಗಾರದಲ್ಲಿ ಸ್ವಯಂಪ್ರೇರಿತರಾಗಿ ಕೆಲಸ ಮಾಡುವ ಸ್ಥಳೀಯ ರೈತ ಮಗನ್‌ಭಾಯ್. ಕೋವಿಡ್–19ರಿಂದಾಗಿ 2021ರ ಏಪ್ರಿಲ್ ಮತ್ತು ಮೇಯಲ್ಲಿ ತರಗುಟ್ಟಿದ್ದ ನಗರದ ಚಿತ್ರಣವನ್ನು ಅವರು ಕಟ್ಟಿಕೊಟ್ಟರು. ಚಿತಾಗಾರದಲ್ಲಿ ಕಟ್ಟಿಗೆ ಮುಗಿದಿದೆ ಎಂದು ಸ್ಥಳೀಯ ಪತ್ರಿಕೆಗಳಲ್ಲಿ ಜಾಹೀರಾತು ಕೊಡಲಾಗಿತ್ತು. ಚಿತಾಗಾರದ ನಿರ್ವಹಣೆಯಲ್ಲಿದ್ದ 20 ಜನರ ತಂಡದಲ್ಲಿ ಮೂವರು ಕೋವಿಡ್‌ಗೆ ಬಲಿಯಾಗಿದ್ದಾರೆ.

ಎರಡು ತಿಂಗಳಲ್ಲಿ 1,161 ಅಂತ್ಯಸಂಸ್ಕಾರಗಳು ಇಲ್ಲಿನ ಎರಡು ಚಿತಾಗಾರಗಳಲ್ಲಿ ನಡೆದಿವೆ. ಈ ಚಿತಾಗಾರಗಳಲ್ಲಿ ನಡೆಸಬಹುದಾಗಿದ್ದ ಅಂತ್ಯಸಂಸ್ಕಾರದ ಗರಿಷ್ಠ ಸಂಖ್ಯೆ ಅದು. ಹಾಗಾಗಿ ಉಳಿದ ದೇಹಗಳನ್ನು ಹತ್ತಿರದ ಗ್ರಾಮಗಳ ಚಿತಾಗಾರಗಳಿಗೆ ಕಳುಹಿಸಲಾಗಿದೆ. ಹಾಗೆಯೇ ಇಲ್ಲಿನ ಮುಸ್ಲಿಂ ಸಮಾಧಿಸ್ಥಳದಲ್ಲಿ ನೂರು ಮಂದಿಯನ್ನು ದಫನ ಮಾಡಲಾಗಿದೆ. ಹಲವು ದೇಹಗಳು ಇದ್ದುದರಿಂದ ಜೆಸಿಬಿಗಳನ್ನು ತಂದು ಗುಂಡಿ ತೋಡಲಾಗಿತ್ತು.

ಭಾರತದ ಇತರ ಭಾಗಗಳ ರೀತಿಯಲ್ಲಿಯೇ ಗುಜರಾತ್‌ನ ಎಲ್ಲ ಪಟ್ಟಣಗಳಲ್ಲಿಯೂ ಕೋವಿಡ್–19ರ ಎರಡನೇ ಅಲೆ ತೀವ್ರವಾಗಿತ್ತು. ಸಾವಿನ ಸಂಖ್ಯೆಯೂ ಗರಿಷ್ಠ ಮಟ್ಟದಲ್ಲಿಯೇ ಇತ್ತು.

7ನೇ ಪುಟ ನೋಡಿ



ಅಮ್ರೇಲಿಯ ಒಂದು ಚಿತಾಗಾರದಲ್ಲಿ ಏಪ್ರಿಲ್ ಮೇ ತಿಂಗಳಲ್ಲಿ ಮರಣ ನೋಂದಣಿಯ ಏಳೂವರೆ ರಿಜಿಸ್ಟರ್‌ಗಳು ತುಂಬಿ ಹೋಗಿವೆ. ಪ್ರತಿ ರಿಜಿಸ್ಟರ್‌ನಲ್ಲಿ 100 ಪುಟಗಳಿವೆ. ಚಿತ್ರ: ಶ್ರೀಗಿರೀಶ್ ಜಾಲಿಹಾಳ್

# 1,500 ಕೆ.ಜಿ.ಗೂ ಅಧಿಕ ಸ್ಫೋಟಕ ವಶ

ಪ್ರಜಾವಾಣಿ ವಾರ್ತೆ

**ಮಂಗಳೂರು:** ನಗರದ ಬಂದರ್‌ನ ಗಾಂಧಿ ಸನ್ಸ್ ಕಟ್ಟಡದ ಕೊಠಡಿಯೊಂದರಲ್ಲಿ ಅಕ್ರಮವಾಗಿ ದಾಸ್ತಾನು ಇಟ್ಟಿದ್ದ 1,500 ಕೆ.ಜಿ.ಗೂ ಅಧಿಕ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಂಡಿರುವ ಪೊಲೀಸರು, ಒಬ್ಬ ಆರೋಪಿಯನ್ನು ಬಂಧಿಸಿದ್ದಾರೆ.

ಬಂಟ್ವಾಳ ತಾಲ್ಲೂಕು ಮುಡಿಪು ಕೈರಂಗಳ ನಿವಾಸಿ ಆನಂದ ಗಟ್ಟಿ (50) ಬಂಧಿತ ಆರೋಪಿ. ಈತನಿಂದ 400 ಕೆ.ಜಿ. ಸಲ್ಫರ್ ಪೌಡರ್, 200 ಕೆ.ಜಿ. ಪೊಟ್ಯಾಷಿಯಂ ನೈಟ್ರೇಟ್, 50 ಕೆ.ಜಿ. ಬೇರಿಯಂ ನೈಟ್ರೇಟ್, 395 ಕೆ.ಜಿ. ಪೊಟ್ಯಾಷಿಯಂ ಕ್ಲೋರೈಟ್, 260 ಕೆ.ಜಿ. ತೂಕದ ವಿವಿಧ ಬಗೆಯ ಅಲ್ಯುಮಿನಿಯಂ ಪೌಡರ್ ವಶಪಡಿಸಿಕೊಳ್ಳಲಾಗಿದೆ.

4B ಪುಟ ನೋಡಿ

ಮಂಗಳವಾರದ ಉಷ್ಣಾಂಶ 28° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಆಗಾಗ್ಗೆ ತುಂತುರು ಮಳೆಯಾಗುವ ಸಾಧ್ಯತೆ ಇದೆ.

ಮುನ್ಸೂಚನೆ: ಬುಧವಾರ 30° 20° | ಗುರುವಾರ 30° 18° | ಶುಕ್ರವಾರ 30° 20°

ಸೂರ್ಯೋದಯ: 6:07 ಸೂರ್ಯಾಸ್ತ: 6:41 ಚಂದ್ರೋದಯ: ರಾ. 11:06 ಚಂದ್ರಾಸ್ತ: ಬೆ. 11:08 | ಸೋಮವಾರದ ಹವಾಮಾನ : ಗರಿಷ್ಠ 30° ಕನಿಷ್ಠ 20°

ಪ್ರಜಾವಾಣಿ



## ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ನೇತೃತ್ವದಲ್ಲಿ ಮೊದಲ ಸಭೆ

# ಸ್ವಚ್ಛತೆಗೆ ಆದ್ಯತೆ: ಆಯುಕ್ತರಿಗೆ ಸೂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಎಲ್ಲ ಮಹಾನಗರಪಾಲಿಕೆಗಳ ಆಯುಕ್ತರು ಪ್ರತಿ ದಿನ ಒಂದು ಗಂಟೆ ತಮ್ಮ ನಗರದಲ್ಲಿ ಸಂಚರಿಸಿ, ಸ್ವಚ್ಛತಾ ಕಾರ್ಯಗಳ ಪರಿಶೀಲನೆ ನಡೆಸಬೇಕು. ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕು' ಎಂದು ಮಹಾನಗರಪಾಲಿಕೆಗಳ ಆಯುಕ್ತರಿಗೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಸೂಚಿಸಿದರು.

### 'ಸ್ಮಾರ್ಟ್ ಸಿಟಿ: 6ನೇ ಸ್ಥಾನದಲ್ಲಿ ರಾಜ್ಯ'

'ಸ್ಮಾರ್ಟ್ ಸಿಟಿ ಯೋಜನೆ ಅನುಷ್ಠಾನದಲ್ಲಿ ದೇಶದಲ್ಲಿ 6ನೇ ಸ್ಥಾನದಲ್ಲಿರುವ ಕರ್ನಾಟಕ, ಮುಂದಿನ ದಿನಗಳಲ್ಲಿ ಮೊದಲ ಸ್ಥಾನ ಪಡೆಯಬೇಕು. ಬಾಕಿ ಉಳಿದಿರುವ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು' ಎಂದು ಸ್ಮಾರ್ಟ್ ಸಿಟಿ ಯೋಜನೆ ಅನುಷ್ಠಾನದ ಉಸ್ತುವಾರಿ ವಹಿಸಿರುವ ವ್ಯವಸ್ಥಾಪಕ ನಿರ್ದೇಶಕರಿಗೆ ಬೈರತಿ ಬಸವರಾಜ ಸೂಚಿಸಿದರು. ಸ್ಮಾರ್ಟ್ ಸಿಟಿ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿ ಪರಿಶೀಲನೆಯನ್ನು ಇಂದಿರಾ ನಗರದಲ್ಲಿರುವ ಕೆಯುಐಡಿಎಫ್‌ಸಿ ಕಚೇರಿಯ ಸಭಾಂಗಣದಲ್ಲಿ ಸೋಮವಾರ ಅವರು ನಡೆಸಿದರು.

ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ 2019-20ನೇ ಸಾಲಿನಲ್ಲಿ ₹ 700 ಕೋಟಿ, 2020-21ನೇ ಸಾಲಿನಲ್ಲಿ ₹ 1,300 ಕೋಟಿ ಮತ್ತು 2021-2ನೇ ಸಾಲಿನಲ್ಲಿ ಈವರೆಗೆ ₹ 537 ಕೋಟಿ ವೆಚ್ಚ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ದಾವಣಗೆರೆ, ಶಿವಮೊಗ್ಗ, ತುಮಕೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರು ಸಭೆಯಲ್ಲಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ನಗರಾಭಿವೃದ್ಧಿ ಸಚಿವರಾಗಿ ಮತ್ತೆ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಆಯುಕ್ತರ ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಸೋಮವಾರ ಅವರು ಸಭೆ ನಡೆಸಿದರು.

'ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ ಅನುಷ್ಠಾನಕ್ಕೆ ಸರ್ಕಾರದ ಅನುಮೋದನೆ ದೊರೆತಿದೆ. ಈ ಯೋಜನೆಯಡಿ ಆದಷ್ಟು ಬೇಗ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ಬೀದಿದೀಪಗಳ ದುರಸ್ತಿ ಮತ್ತು ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸಬೇಕು. ಪಾಲಿಕೆ ವ್ಯಾಪ್ತಿಯ ಖಾಸಗಿ ಸ್ವತ್ತುಗಳ ಆಸ್ತಿ ತೆರಿಗೆ ಸರಿಯಾಗಿ ಸಂದಾಯ ಆಗುವ ರೀತಿಯಲ್ಲಿ ನೋಡಿಕೊಳ್ಳಬೇಕು. ತೆರಿಗೆ ಬಾಕಿ ಉಳಿಸಿಕೊಂಡವರಿಗೆ ನೋಟಿಸ್ ನೀಡಿ ವಸೂಲಿಗೆ ಮುಂದಾಗಬೇಕು. ಯಾವುದೇ ರೀತಿಯ ಒತ್ತಡಕ್ಕೆ ಮಣಿಯಬಾರದು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಸಾರ್ವಜನಿಕರಿಂದ ಬರುವ ದೂರುಗಳು, ಕುಂದುಕೊರತೆಗಳನ್ನು ಸ್ಥಳೀಯ ಮಟ್ಟದಲ್ಲಿಯೇ ಪರಿಹರಿಸಬೇಕು. ದೂರುಗಳು ವಿಧಾನಸೌಧದ ಸಚಿವರ ಕಚೇರಿಯವರೆಗೆ ಬರದಂತೆ ನೋಡಿಕೊಳ್ಳಬೇಕು. ಸಾರ್ವಜನಿಕರಿಗೆ ಸ್ಪಂದಿಸದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಬೇಕು' ಎಂದರು.

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಎಂ.ಎನ್. ಅಜಯ್ ನಾಗಭೂಷ್, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕಿ ಬಿ.ಬಿ. ಕಾವೇರಿ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಅಭಿವೃದ್ಧಿ ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕ ಎಂ.ಟಿ. ರೇಜು ಸಭೆಯಲ್ಲಿ ಇದ್ದರು.

## ಸುದ್ದಿ 2 ನಿಮಿಷ

### ಆಸ್ತಿ ಮಾಲೀಕರಿಗೆ ವಿನಾಯಿತಿ: ಅಶ್ವತ್ಥನಾರಾಯಣ ಭರವಸೆ


ಬೆಂಗಳೂರು: ನಗರದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯ ವಲಯ ವರ್ಗೀಕರಣವನ್ನು ತಪ್ಪಾಗಿ ನಮೂದಿಸಿ ದಂಡ ಮತ್ತು ದಂಡದ ಬಡ್ಡಿ ಸುಳಿಗೆ ಸಿಲುಕಿರುವ ಆಸ್ತಿ ಮಾಲೀಕರಿಗೆ ವಿನಾಯಿತಿ ನೀಡುವ ಬಗ್ಗೆ ಮುಖ್ಯಮಂತ್ರಿಯವರ ಜತೆ ಚರ್ಚಿಸುವುದಾಗಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಬಿಬಿಎಂಪಿ ಅಧಿಕಾರಿಗಳ ಜತೆ ಸೋಮವಾರ ಅವರು ಈ ಸಂಬಂಧ ಚರ್ಚೆ ನಡೆಸಿದರು.

ಕೋವಿಡ್ ಮತ್ತು ಲಾಕ್‌ಡೌನ್ ಕಾರಣಕ್ಕೆ ಆಸ್ತಿ ಮಾಲೀಕರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದು, ಇದೇ ವೇಳೆ ದಂಡ ಮತ್ತು ಬಡ್ಡಿಗೆ ಗುರಿಯಾಗಿದ್ದಾರೆ. ಹೀಗಾಗಿ ಕಷ್ಟದಲ್ಲಿರುವ ಆಸ್ತಿ ಮಾಲೀಕರಿಗೆ ರಿಯಾಯಿತಿ ನೀಡುವ ಬಗ್ಗೆ ಪರಿಶೀಲನೆ ಮಾಡುವಂತೆ ಈ ಹಿಂದೆಯೇ ಅಧಿಕಾರಿಗಳಿಗೆ ಸೂಚಿಸಿದ್ದೆ. ಇದಕ್ಕೆ ಮುಖ್ಯಮಂತ್ರಿಯವರ ಒಪ್ಪಿಗೆ ಅಗತ್ಯವಿದೆ ಎಂದರು.

ಈ ವಿಚಾರವಾಗಿ ಮಲ್ಲೇಶ್ವರ ಅಲ್ಲದೆ, ನಗರದ ವಿವಿಧ ಭಾಗಗಳ ಜನರು ತಮಗೆ ಮನವಿ ನೀಡಿದ್ದಾರೆ. ಇವರು ಸಮಸ್ಯೆಗೆ ಸಿಲುಕಿದ್ದು, ಸಂಕಷ್ಟದಿಂದ ಪಾರು ಮಾಡುವಂತೆ ಕೋರಿಕೆ ಸಲ್ಲಿಸಿದ್ದಾರೆ ಎಂದು ಅವರು ಹೇಳಿದರು.

ಬಿಬಿಎಂಪಿಯು ಅವರ ವರ್ಗೀಕರಣದ ಸಮರ್ಪಕವಾಗಿ ತೆರಿಗೆ ವಸೂಲಿ ಮಾಡದೇ ಬಿಟ್ಟಿದ್ದು ಲೋಪ. ಈಗ ಏಕಾಏಕಿ ದಂಡ-ಬಡ್ಡಿ ಒಟ್ಟಿಗೆ ವಿಧಿಸಿದರೆ ಜನರಿಗೆ ಕಷ್ಟವಾಗುತ್ತದೆ ಎಂದರು.



ಸಭೆಯಲ್ಲಿ ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಬಸವರಾಜ ಹಾಗೂ ಕಂದಾಯ ವಿಭಾಗದ ಜಂಟಿ ಆಯುಕ್ತ ವೆಂಕಟಾಚಲಪತಿ ಮುಂತಾದವರು ಹಾಜರಿದ್ದರು.

### ಅಂಧ ವಿದ್ಯಾರ್ಥಿಗಳಿಗೆ 'ಟಾಕಿಂಗ್ ಲ್ಯಾಪ್‌ಟಾಪ್' ವಿತರಿಸಲು ಯೋಜನೆ

ಬೆಂಗಳೂರು: ಅಂಧ ವಿದ್ಯಾರ್ಥಿಗಳಿಗೆ ಉಚಿತವಾಗಿ 'ಟಾಕಿಂಗ್ ಲ್ಯಾಪ್‌ಟಾಪ್' ವಿತರಿಸಲು ಸಮಗ್ರ ಯೋಜನೆ ರೂಪಿಸಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ನಗರದ ವಕೀಲ ಎಸ್. ಉಮಾಪತಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ಲ್ಯಾಪ್‌ಟಾಪ್ ವಿತರಣೆಗೆ ಪೀಠ ಆದೇಶ ನೀಡಿತ್ತು. ನ್ಯಾಯಾಲಯದ ಆದೇಶಗಳನ್ನು ಪಾಲಿಸಲು ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಅವರು ನ್ಯಾಯಾಂಗ ನಿಂದನೆ ಅರ್ಜಿಯನ್ನು ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಸರ್ಕಾರದಿಂದ ವಿವರಣೆ ಕೇಳಿತ್ತು.

'ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ವಿತರಿಸುವ ಯೋಜನೆಗೆ ಅನುದಾನವನ್ನು ಕ್ರಮೇಣ ಕಡಿಮೆ ಮಾಡಲಾಗುತ್ತಿದೆ. 2014-15ರಲ್ಲಿ ₹4 ಕೋಟಿ ನೀಡಲಾಗಿತ್ತು. 2015-16ರಲ್ಲಿ ಅದನ್ನು ₹3.5 ಕೋಟಿಗೆ ಇಳಿಸಲಾಗಿತ್ತು. 2019-20ರಲ್ಲಿ ₹2.4 ಕೋಟಿಗೆ ಇಳಿಸಲಾಗಿದೆ' ಎಂದು ಅರ್ಜಿದಾರರು ವಿವರಿಸಿದ್ದಾರೆ.





# ಸಾರ್ವಜನಿಕರ ಆರೋಗ್ಯದ ಸಮಗ್ರ ಮಾಹಿತಿಗೆ ಸಮೀಕ್ಷೆ
# ಮನೆ ಬಾಗಿಲಿಗೆ ಪಾಲಿಕೆಯ ವೈದ್ಯರು

ಪ್ರಜಾವಾಣಿ ವಾರ್ತೆ



ಮನೆ ಮನೆಗೆ ಭೇಟಿ ನೀಡುವ ಪಾಲಿಕೆ ವೈದ್ಯರ ತಂಡಗಳಿಗೆ ಸಚಿವ.ಆರ್‌.ಅಶೋಕ ಅವರು ಟ್ಯಾಬ್‌ಗಳನ್ನು ವಿತರಿಸಿದರು. ಶಾಸಕ ರಿಜ್ವಾನ್ ಹರ್ಷದ್, ಗೌರವ್ ಗುಪ್ತ, ರಾಕೇಶ್ ಸಿಂಗ್ ಹಾಗೂ ಇತರ ಅಧಿಕಾರಿಗಳು ಇದ್ದಾರೆ

ಬೆಂಗಳೂರು: ಜನರ ಆರೋಗ್ಯದ ಸಮಗ್ರ ಮಾಹಿತಿ ಕಲೆ ಹಾಕಲು ಬಿಬಿಎಂಪಿ ವೈದ್ಯರ ತಂಡ ಮನೆ ಬಾಗಿಲಿಗೇ ಬರಲಿದೆ. 27 ವಿಧಾನಸಭಾ ಕ್ಷೇತ್ರಗಳ 54 ವಾರ್ಡ್‌ಗಳಲ್ಲಿ ಅನುಷ್ಠಾನಗೊಳ್ಳುವ ಈ ಸಮೀಕ್ಷೆಗೆ ಕಂದಾಯ ಸಚಿವ ಆರ್.ಅಶೋಕ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಸೋಮವಾರ ಚಾಲನೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ, 'ನಗರದಲ್ಲಿ ಕೋವಿಡ್ ಸೋಂಕನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ದೃಷ್ಟಿಯಿಂದ ಈ ಆರೋಗ್ಯ ಸಮೀಕ್ಷೆ ಹಮ್ಮಿಕೊಳ್ಳಲಾಗಿದೆ.' ಎಂದರು.

'ಪಾಲಿಕೆ ವೈದ್ಯರ ತಂಡವು ನಗರದ 29 ಲಕ್ಷ ಮನೆಗಳಿಗೂ ಹಂತ ಹಂತವಾಗಿ ಭೇಟಿ ನೀಡಿ, ಆರೋಗ್ಯ ತಪಾಸಣೆ ನಡೆಸಲಿದೆ' ಎಂದರು.

**ಸೋಂಕು ಲಕ್ಷಣವಿದ್ದರೆ ಪರೀಕ್ಷೆ:** 'ಕೋವಿಡ್ ನಿಯಂತ್ರಣದ ಕುರಿತು ಜಾಗೃತಿ ಮೂಡಿಸುವುದೂ ಈ ಕಾರ್ಯಕ್ರಮದ ಉದ್ದೇಶ. ಕೊರೊನಾ ಸೋಂಕಿನ ಲಕ್ಷಣ ಹೊಂದಿರುವವರನ್ನು ವೈದ್ಯರ ತಂಡವು ಪರೀಕ್ಷೆಗೂ ಒಳಪಡಿಸಲಿದೆ. ಸೋಂಕು ದೃಢಪಟ್ಟರೆ ಅಂತಹವರನ್ನು ಕೋವಿಡ್ ಸೋಂಕಿತರ ಆರೈಕೆ ಕೇಂದ್ರಕ್ಕೆ ಅಥವಾ ಆಸ್ಪತ್ರೆಗೆ ದಾಖಲಿಸಲು ಕ್ರಮ ಕೈಗೊಳ್ಳಲಿದೆ.' ಎಂದರು.

ಶಾಸಕ ರಿಜ್ವಾನ್ ಹರ್ಷದ್, 'ನೇರವಾಗಿ ಜನರ ಮನೆಗೇ ಭೇಟಿ ನೀಡಿ ಕಲೆ ಹಾಕುವ ಆರೋಗ್ಯ ಮಾಹಿತಿಯು ಕೋವಿಡ್ ನಿಯಂತ್ರಿಸಲು ಸಹಕಾರಿಯಾಗಲಿದೆ. ಇಡೀ ನಗರದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನಗೊಂಡರೆ ಅದೊಂದು ಮೈಲಿಗಲ್ಲಾಗಲಿದೆ' ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ವಿಶೇಷ ಆಯುಕ್ತರುಗಳಾದ ಡಿ.ರಂದೀಪ್, ತುಳಸಿ ಮದ್ದಿನೇನಿ, ಡಾ.ಕೆ.ಹರೀಶ್ ಕುಮಾರ್, ಮನೋಜ್ ಜೈನ್, ಕೆ.ಎ. ದಯಾನಂದ್, ರವೀಂದ್ರ ಇದ್ದರು.


### ನಿತ್ಯ 50 ಮನೆ ಸಮೀಕ್ಷೆ

'ಪ್ರತೀ ತಂಡವು ನಿತ್ಯ ಕನಿಷ್ಠ 100 ಮನೆಗಳ ಸಮೀಕ್ಷೆ ನಡೆಸಬೇಕು ಎಂದು ಹಿಂದೆ ನಿರ್ಧರಿಸಲಾಗಿತ್ತು. ಆದರೆ, ಅಷ್ಟು ಗುರಿ ಸಾಧನೆ ಕಷ್ಟ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ ನಿತ್ಯ 50 ಮನೆಗಳನ್ನು ತಲುಪುವ ಗುರಿ ನಿಗದಿಪಡಿಸಲಾಗಿದೆ' ಎಂದು ಅಶೋಕ ತಿಳಿಸಿದರು.

'ವಾರ್ಡ್ ಒಂದರಲ್ಲಿ ವೈದ್ಯರ ಐದು ತಂಡಗಳು ಇರಲಿವೆ. ಒಬ್ಬ ವೈದ್ಯಾಧಿಕಾರಿ, ಅರೆವೈದ್ಯಕೀಯ ಸಿಬ್ಬಂದಿ ಪ್ರತಿ ತಂಡದಲ್ಲಿ ಇರುತ್ತಾರೆ. ಎಂಬಿಬಿಎಸ್, ಬಿಡಿಎಸ್ ಅಥವಾ ಆಯುಷ್ ವೈದ್ಯರನ್ನು ವೈದ್ಯಾಧಿಕಾರಿಯಾಗಿ ನಿಯೋಜಿಸಲಾಗುತ್ತದೆ. ಮನೆ ಮನೆ ಭೇಟಿ ವೇಳೆ 'ನಿಮ್ಮ ಮನೆ ಬಾಗಿಲಿಗೆ, ನಿಮ್ಮ ಆರೋಗ್ಯವೇ ನಮ್ಮ ಧ್ಯೇಯ' ಎಂದು ಮುದ್ರಿಸಿರುವ ಬಿಳಿ ಬಣ್ಣದ ನಿಲುವಂಗಿಯನ್ನು ವೈದ್ಯಾಧಿಕಾರಿಗಳು ಧರಿಸಬೇಕು' ಎಂದರು.

### ನಗರದಲ್ಲಿ ಇಂದು

**ರಾಜ್ಯ ಮಟ್ಟದ ಮಕ್ಕಳ ವಿಜ್ಞಾನ ಸಮಾವೇಶ ಮತ್ತು ಬಾಲ ವಿಜ್ಞಾನಿಗಳಿಗೆ ಪ್ರಶಸ್ತಿ ಪ್ರದಾನ:** ಸಾನ್ನಿಧ್ಯ- ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು-ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಹಿರಿಯ ವಿಜ್ಞಾನಿ ವಿ.ಕೆ.ಅತ್ರೆ, ಅದಮ್ಯ ಚೇತನದ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ಅಧ್ಯಕ್ಷತೆ-ಗಿರೀಶ್ ಕಡ್ಲೇವಾಡ, ಆಯೋಜನೆ-ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಸ್ಥಳ- ಪರಿಷತ್ತಿನ ಆವರಣ, ಸೇತುರಾವ್ ಸಭಾಂಗಣ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 10.30



ನಿರ್ಮಲಾ ನಂದನಾಥ ಸ್ವಾಮೀಜಿ

**'ಕನ್ನಡದ ಸಾಹಿತ್ಯದಲ್ಲಿ ಪರಂಪರೆ ಮತ್ತು ಪ್ರತಿಭಟನೆ'** **ಉಪನ್ಯಾಸ:** ಎಚ್.ದಂಡಪ್ಪ, ಆಯೋಜನೆ-ಬಿಎಂಶ್ರೀ ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

## ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಆ.17 ಮತ್ತು 18ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: 17ರಂದು ಸಹಕಾರನಗರ, ಶಬರಿ ನಗರ, ಬ್ಯಾಟರಾಯನಪುರ, ಅಮೃತಹಳ್ಳಿ, ತಲಕಾವೇರಿ ಬಡಾವಣೆ, ಜಕ್ಕೂರು, ಅಮೃತನಗರ, ಜಿಕೆವಿಕೆ ಬಡಾವಣೆ, ದಾಸರಹಳ್ಳಿ ಮುಖ್ಯರಸ್ತೆ, ಭುವನೇಶ್ವರಿ ನಗರ, ಕೊಡಿಗೇಹಳ್ಳಿ, ತಿಂಡ್ಲು ಮುಖ್ಯರಸ್ತೆ, ಸಂಜೀವಿನಿ ನಗರ, ಗಣೇಶನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು (ಬೆ.10ರಿಂದ ಮ.3). ಬಿಇಎಂಎಲ್ ಬಡಾವಣೆ, ಮಾಗಡಿ ಮುಖ್ಯರಸ್ತೆ, ದುಬಾಸಿ ಪಾಳ್ಯ, ಟಿ.ಜಿ.ಪಾಳ್ಯ ಮುಖ್ಯರಸ್ತೆ (ಬೆ.10ರಿಂದ ಸಂಜೆ 5)

18ರಂದು ಕಾಮರಾಜ ರಸ್ತೆ, ಡಿಕನ್ಸನ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್, ಡಿಸ್ಪೆನ್ಸರಿ ರಸ್ತೆ, ರಸೆಲ್ ಮಾರುಕಟ್ಟೆ, ಇನ್ಫೆಂಟ್ರಿ ರಸ್ತೆ, ಸಫೀನಾ ಪ್ಲಾಜಾ, ಕಬ್ಬನ್ ರಸ್ತೆ, ಚರ್ಚ್ ಸ್ಟ್ರೀಟ್, ಎಂ.ಜಿ.ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಲ್ಯಾವೆಲ್ಲೆ ರಸ್ತೆ, ರಿಚ್‌ಮಂಡ್ ರಸ್ತೆ, ಕಸ್ತೂರಬಾ ರಸ್ತೆ, ಅಶೋಕ ನಗರ, ರೆಸಿಡೆನ್ಸಿ ರಸ್ತೆ, ಟ್ರಿನಿಟಿ ವೃತ್ತ, ಹಲಸೂರು ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಇರಲಿದೆ. ಪಟ್ಟಣಗೆರೆ ವಾಟರ್ ಟ್ಯಾಂಕ್, ಅನ್ನಪೂರ್ಣೇಶ್ವರಿ ಬಡಾವಣೆ, ದೊಡ್ಡಬಸ್ತಿ (ಬೆ.10ರಿಂದ ಸಂಜೆ 5)

# 'ಪರಭಾಷಿಕರಿಗೆ ಕನ್ನಡ ಕಲಿಸಿ'



ಗೌರಿಸುಂದರ್ ವಾರ್ಷಿಕ ಪ್ರಶಸ್ತಿ ಸಮಿತಿಯಿಂದ (ಕುಳಿತವರು ಎಡದಿಂದ) ಹಿರಿಯ ನಟರಾದ ಬಿ.ಆರ್‌.ಜಯರಾಂ ಹಾಗೂ ಹಿರಿಯ ನಟ ಎಂ.ಕೆ.ಸುಂದರರಾಜ್ ಅವರಿಗೆ 'ಗೌರಿಸುಂದರ್ ವಾರ್ಷಿಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಟಿ.ಎಸ್‌. ನಾಗಾಭರಣ, ಶಿಕ್ಷಣ ತಜ್ಞ ಕೆ.ಇ.ರಾಧಾಕೃಷ್ಣ, ಸಮಿತಿಯ ಪ್ರಧಾನ ಕಾರ್ಯದರ್ಶಿ ಇಂದಿರಾ ಸುಂದರ್, ಚಿತ್ರಶ್ರೀ, ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ ಇದ್ದಾರೆ

ಬೆಂಗಳೂರು:'ಜೀವಂತ ಕಲೆಯಾಗಿರುವ ರಂಗಭೂಮಿ ಹಿಂದಿನಿಂದಲೂ ಕನ್ನಡ ಭಾಷೆ ಕಟ್ಟುವ ಕೆಲಸ ಮಾಡಿಕೊಂಡು ಬಂದಿದೆ. ಇಲ್ಲಿನ ಪರಭಾಷಿಕರಿಗೆ ಕನ್ನಡ ಕಲಿಸುವ ಕೆಲಸವನ್ನು ನಾವೆಲ್ಲ ಮಾಡಬೇಕಾಗಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದರು.

ಗೌರಿಸುಂದರ್ ವಾರ್ಷಿಕ ಪ್ರಶಸ್ತಿ ಸಮಿತಿಯು ಸಿ.ಅಶ್ವತ್ಥ್ ಕಲಾ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ' ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಹೆಚ್ಚು ಕನ್ನಡ ಶಬ್ದಗಳನ್ನು ರಂಗಭೂಮಿಯಲ್ಲಿ ಬಳಸಲಾಗುತ್ತದೆ. ಅಲ್ಲಿಂದಲೇ ಹೆಚ್ಚು ಪದಗಳನ್ನು ಕಲಿಯಬಹುದಾಗಿದೆ. ಪರಭಾಷಿಕರಿಗೆ ಕನ್ನಡ ಕಲಿಸುವುದರಿಂದ ಭಾಷೆ ಕಟ್ಟುವ ಕೆಲಸಕ್ಕೆ ಮುಂದಾಗಬೇಕು. ಈ ವಿಚಾರದಲ್ಲಿ ಜನರ ಪರ ಪ್ರಾಧಿಕಾರ ಇರುತ್ತದೆ' ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ನಟರಾದ ಬಿ.ಆರ್.ಜಯರಾಂ ಹಾಗೂ ಎಂ.ಕೆ.ಸುಂದರರಾಜ್ ಅವರಿಗೆ 'ಗೌರಿಸುಂದರ್ ವಾರ್ಷಿಕ ಪ್ರಶಸ್ತಿ' ಪ್ರದಾನ ಮಾಡಲಾಯಿತು.

# 'ಶಾಹೀನ್ ಶಾಲೆ: ಮಕ್ಕಳ ಹಕ್ಕು ಉಲ್ಲಂಘಿಸಿದ ಪೊಲೀಸರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದರ್‌ನ ಶಾಹೀನ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಮಕ್ಕಳ ಹಕ್ಕುಗಳ ಉಲ್ಲಂಘನೆ ಆಗಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಈ ರೀತಿಯ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಆದೇಶಿಸಿದೆ.

ಪೌರತ್ವ ತಿದ್ದುಪಡಿ ಕಾಯ್ದೆ -2019ರ ವಿರುದ್ಧ ವಿದ್ಯಾರ್ಥಿಗಳು ನಡೆಸಿದ ನಾಟಕವೊಂದಕ್ಕೆ ಸಂಬಂಧಿಸಿದಂತೆ ಪೊಲೀಸರು ನಡೆಸಿದ ವಿಚಾರಣೆಯನ್ನು ಪ್ರಶ್ನಿಸಿ ವಕೀಲರಾದ ನಯನಾ ಜ್ಯೋತಿ ಮತ್ತು ದಕ್ಷಿಣ ಭಾರತ ಮಾನವ ಹಕ್ಕುಗಳ ಶಿಕ್ಷಣ ಮತ್ತು ಮೇಲ್ವಿಚಾರಣಾ ಸಂಸ್ಥೆ ಅರ್ಜಿ ಸಲ್ಲಿಸಿತ್ತು. ಮಕ್ಕಳನ್ನು ವಿಚಾರಣೆಗೆ ಒಳಪಡಿಸಿದ ಪೊಲೀಸರ ವಿರುದ್ಧ ತನಿಖೆ ನಡೆಸಬೇಕು ಮತ್ತು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅರ್ಜಿದಾರರು ಕೋರಿದ್ದರು.

'ವಿಚಾರಣೆ ನಡೆಸಿದ ಛಾಯಾಚಿತ್ರಗಳನ್ನು ನೋಡಿದರೆ ನಾಲ್ವರು ಸಮವಸ್ತ್ರದಲ್ಲಿರುವ ಪೊಲೀಸ್ ಅಧಿಕಾರಿಗಳಲ್ಲಿ ಇಬ್ಬರು ಬಂದೂಕುಗಳನ್ನು ಹೊಂದಿದ್ದು, ಮೂವರು ಮಕ್ಕಳನ್ನು ಕೂರಿಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ. ಪೊಲೀಸರು ಈ ರೀತಿ ನಡೆಸಿರುವ ವಿಚಾರಣೆಯು ಬಾಲ ನ್ಯಾಯ ಕಾಯ್ದೆಯ ಉಲ್ಲಂಘನೆ' ಎಂದು ಪೀಠ ಅಭಿಪ್ರಾಯಪಟ್ಟಿತು.

'ಮಕ್ಕಳ ಹಕ್ಕುಗಳು ಮತ್ತು ಬಾಲ ನ್ಯಾಯ ಕಾಯ್ದೆಯ ಉಲ್ಲಂಘನೆ ಆಗಿರುವ ಗಂಭೀರ ಪ್ರಕರಣ ಎಂಬುದು ಮೇಲ್ನೋಟಕ್ಕೇ ಕಾಣಿಸುತ್ತಿದೆ. ಬಂದೂಕು ಸಹಿತ ಸಮವಸ್ತ್ರ ಧರಿಸಿ ಮಕ್ಕಳನ್ನು ವಿಚಾರಣೆ ನಡೆಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬುದರ ಕುರಿತ ವಿವರ ಸಲ್ಲಿಸಬೇಕು' ಎಂದು ಪೀಠ ನಿರ್ದೇಶನ ನೀಡಿತು.

ಮಕ್ಕಳ ಹಕ್ಕುಗಳ ಉಲ್ಲಂಘನೆಗಳು ಮರುಕಳಿಸದಂತೆ ನೋಡಿಕೊಳ್ಳಲು ರಾಜ್ಯದಾದ್ಯಂತ ಪೊಲೀಸರಿಗೆ ಸರ್ಕಾರ ನಿರ್ದೇಶನ ನೀಡಬೇಕು. ಈ ಸಂಬಂಧ ಅಫಿಡವಿಟ್ ಸಲ್ಲಿಸಲು ಡಿಸಿಪಿ ಶ್ರೇಣಿಗಿಂತ ಹಿರಿಯ ಅಧಿಕಾರಿಯನ್ನು ನೇಮಿಸುವಂತೆ ಪೀಠ ತಿಳಿಸಿತು.

2020 ಜ.21ರಂದು ಶಾಲಾ ಆವರಣದಲ್ಲಿ ನಾಟಕ ಪ್ರದರ್ಶನ ಮಾಡಲಾಗಿತ್ತು. ಈ ಸಂಬಂಧ ಸಲ್ಲಿಕೆಯಾದ ದೂರು ಆಧರಿಸಿ ಆಡಳಿತ ಮಂಡಳಿ ವಿರುದ್ಧ ಎಫ್‌ಐಆರ್ ದಾಖಲಾದ ಬಳಿಕ ಪೊಲೀಸರು ವಿದ್ಯಾರ್ಥಿಗಳನ್ನು ವಿಚಾರಣೆಗೆ ಒಳಪಡಿಸಿದ್ದರು.

ಹವಾಮಾನ ಬದಲಾವಣೆ, ಕೃಷಿಯಲ್ಲಿ ಹೆಚ್ಚಿನ ಸಂಶೋಧನೆ ವಿಜ್ಞಾನಿಗಳಿಗೆ ವೆಂಕಯ್ಯನಾಯ್ಡು ಸಲಹೆ

# ‘ಮನುಕುಲದ ಸಮಸ್ಯೆ ನಿವಾರಣೆಗೆ ಶ್ರಮಿಸಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮನುಕುಲ ಎದುರಿಸುತ್ತಿರುವ ಹವಾಮಾನ ಬದಲಾವಣೆ, ಕೃಷಿ, ಆರೋಗ್ಯ ಮತ್ತು ಔಷಧ ಕ್ಷೇತ್ರಗಳಲ್ಲಿನ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಹೆಚ್ಚಿನ ಸಂಶೋಧನೆಗಳನ್ನು ನಡೆಸಬೇಕು ಎಂದು ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಅವರು ವಿಜ್ಞಾನಿಗಳಿಗೆ ಸಲಹೆ ನೀಡಿದರು.

ನಗರದ ಜವಾಹರಲಾಲ್ ನೆಹರು ಮುಂದುವರಿದ ವೈಜ್ಞಾನಿಕ ಸಂಶೋಧನಾ ಕೇಂದ್ರದಲ್ಲಿ (ಜೆಎನ್‌ಸಿಎಎಸ್‌ಆರ್) ನಾವೀನ್ಯತೆ ಮತ್ತು ಅಭಿವೃದ್ಧಿ ಕೇಂದ್ರದ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ವಿಜ್ಞಾನಿಗಳು ತಮ್ಮ ಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಸಾಧಿಸುವುದರ ಜತೆಗೆ ಜನರ ಜೀವನ ಸುಧಾರಣೆ ಮಾಡುವ ನಿಟ್ಟಿನಲ್ಲಿ ಹೊಸ ಆವಿಷ್ಕಾರಗಳಲ್ಲಿ ತೊಡಗಿಸಿಕೊಳ್ಳಬೇಕು. ಜನರ ಜೀವನವು ಸಂತಸ, ಆರೋಗ್ಯ ಮತ್ತು ಸುಗಮಗೊಳಿಸುವುದು ವಿಜ್ಞಾನದ ಪರಮ ಉದ್ದೇಶವಾಗಿದೆ ಎಂದು ಹೇಳಿದರು.

ವೈಜ್ಞಾನಿಕ ಸಂಶೋಧನೆಗಳು ಅಂತಿಮವಾಗಿ ಸಮಾಜ ಅಗತ್ಯಕ್ಕೆ ಪೂರಕವಾಗಿರಬೇಕು. ಈ ನಿಟ್ಟಿನಲ್ಲಿ ಸಂಶೋಧನೆಗಳು ಜನೋಪಯೋಗಿ ಬಳಕೆಗಾಗಿ ಪರಿವರ್ತನೆಗೊಳ್ಳುವುದು ಅವಶ್ಯ. ಜೆಎನ್‌ಸಿಎಎಸ್‌ಆರ್ ದೇಶಿ ಸಂಶೋಧನೆಯನ್ನು ಆಧರಿಸಿ ಹಲವು ನವೋದ್ಯಮಗಳ ಸ್ಥಾಪನೆಗೆ ಕಾರಣವಾಗಿರುವುದು ಮತ್ತು 300 ಪೇಟೆಂಟ್‌ಗಳನ್ನು ಪಡೆದಿರುವುದು ಹೆಮ್ಮೆಪಡುವ ವಿಚಾರ ಎಂದು ಅವರು ಶ್ಲಾಘಿಸಿದರು.

ವಿಜ್ಞಾನದಲ್ಲಿನ ಹೊಸ ಕ್ಷೇತ್ರಗಳಾದ ಸಿಂಥೆಟಿಕ್ ಬಯಾಲಜಿ, ಕಂಪ್ಯೂಟೇಷನಲ್ ಬಯಾಲಜಿ, ಹೈ ಪರ್ಫಾಮೆನ್ಸ್ ಎಂಜಿನಿಯರಿಂಗ್ ಮೆಟಿರಿಯಲ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ಗಳ ಮೇಲೆ ಹೆಚ್ಚಿನ ಸಂಶೋಧನೆ ನಡೆಸಬೇಕು ಎಂದು ಅವರು ಜೆಎನ್‌ಸಿಎಎಸ್‌ಆರ್ ವಿಜ್ಞಾನಿಗಳಿಗೆ ಸಲಹೆ ನೀಡಿದರು.

ದೇಶದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಶೇ 65 ರಷ್ಟು ಮಂದಿ 25 ವರ್ಷ ವಯಸ್ಸಿಗಿಂತ ಕಡಿಮೆ ಪ್ರಾಯದವರಿದ್ದಾರೆ. ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದರ ಜತೆಗೆ, ಅವರಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಗೆ ತರುವ ಪ್ರಯತ್ನ ಮಾಡಬೇಕು ಎಂದು ನಾಯ್ಡು ಹೇಳಿದರು.

ಬೆಂಗಳೂರು ಒಂದು ಕಾಲಕ್ಕೆ ಅತಿ ಹೆಚ್ಚು ಕೆರೆ- ಕುಂಟೆಗಳನ್ನು ಹೊಂದಿದ್ದ ನಗರವಾಗಿತ್ತು. ಒತ್ತುವರಿ ಮತ್ತು ಇತರ ಕಾರಣಗಳಿಂದ ಸಾಕಷ್ಟು ಕೆರೆಗಳು ಕಣ್ಮರೆಯಾಗಿವೆ. ಈಗ ಉಳಿದಿರುವ ಕೆರೆಗಳನ್ನು ಸ್ವಚ್ಛವಾಗಿ ಮತ್ತು ಶುದ್ಧವಾಗಿ ಇಟ್ಟುಕೊಳ್ಳುವ ಕೆಲಸ ಆಗಬೇಕು. ಕ್ರಿಯಾಶೀಲರಾಗಿರುವ ಹೊಸ ಮುಖ್ಯಮಂತ್ರಿಯವರು ಈ ಬಗ್ಗೆ ಗಮನಹರಿಸುತ್ತಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಜ್ಞಾನಿ ಸಿ.ಎನ್.ಆರ್. ರಾವ್ ಇದ್ದರು.

**ಮುಖ್ಯಾಂಶಗಳು**

- ಕೃಷಿ ಸಮಸ್ಯೆಗಳಿಗೆ ಪರಿಹಾರ ಹುಡುಕಿ
- ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಪ್ರಗತಿಯ ಬೆನ್ನೆಲುಬು
- ಹೊಸ ಕ್ಷೇತ್ರಗಳ ಸಂಶೋಧನೆಗೆ ಆದ್ಯತೆ ಕೊಡಿ

**ರಾಷ್ಟ್ರೀಯ ಶಿಕ್ಷಣ ನೀತಿ 2020 ವಿದ್ಯಾರ್ಥಿಗಳ ಪ್ರಗತಿಗೆ ಪೂರಕ. ಹೊಸ ರೀತಿಯ ಬೋಧನೆ ಮತ್ತು ಕಲಿಕೆಯ ವಿಧಾನ ಅವರ ಭವಿಷ್ಯ ಉಜ್ವಲವಾಗಲಿದೆ**

**ವೆಂಕಯ್ಯನಾಯ್ಡು,** ಉಪರಾಷ್ಟ್ರಪತಿ



ಜವಾಹರಲಾಲ್ ನೆಹರು ಮುಂದುವರಿದ ವೈಜ್ಞಾನಿಕ ಸಂಶೋಧನಾ ಕೇಂದ್ರದಲ್ಲಿ ನಾವೀನ್ಯತೆ ಮತ್ತು ಅಭಿವೃದ್ಧಿ ಕೇಂದ್ರದ ಶಿಲಾನ್ಯಾಸ ನೆರವೇರಿಸಿದ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಜ್ಞಾನಿ ಸಿ.ಎನ್‌.ಆರ್‌.ರಾವ್ ಹಾಗೂ ಸಂಸ್ಥೆಯ ಅಧ್ಯಕ್ಷ ಜಿ.ಯು. ಕುಲಕರ್ಣಿ ಇದ್ದರು

### ಕನ್ನಡದಲ್ಲಿ ಮಾತನಾಡಿದ ವೆಂಕಯ್ಯನಾಯ್ಡು

ವೆಂಕಯ್ಯನಾಯ್ಡು ಅವರು ಕಾರ್ಯಕ್ರಮದ ಮೊದಲ ಐದು ನಿಮಿಷಗಳು ಕನ್ನಡದಲ್ಲಿ ಮಾತನಾಡಿದರು. ನೆರೆದಿದ್ದ ಗಣ್ಯರು ಮತ್ತು ಸಂಸ್ಥೆಯ ಬಗ್ಗೆ ಕನ್ನಡದಲ್ಲಿ ತಮ್ಮ ಭಾವನೆ ವ್ಯಕ್ತಪಡಿಸಿದರು.

## ‘3 ಸಾವಿರ ವೈದ್ಯರ ನೇಮಕ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೋವಿಡ್ ಮೂರನೇ ಅಲೆ ಹಾಗೂ ಭವಿಷ್ಯದಲ್ಲಿ ಎದುರಾಗಬಹುದಾದ ಆರೋಗ್ಯ ತುರ್ತು ಪರಿಸ್ಥಿತಿ ಎದುರಿಸಲು ನಾವು ಸಶಕ್ತರಾಗಿದ್ದೇವೆ. ಈ ದಿಶೆಯಲ್ಲಿ 3 ಸಾವಿರ ವೈದ್ಯರು, ತಲಾ 7 ಸಾವಿರ ಶುಶ್ರೂಷಕಿಯರು ಹಾಗೂ ‘ಡಿ’ ದರ್ಜೆ ನೌಕರರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ವಿಜಯನಗರದ ಶ್ರೀ ಆದಿಚುಂಚನಗಿರಿ ಮಠದಲ್ಲಿ ಸೋಮವಾರ ನಡೆದ ‘ನಿಮ್ಮ ಸ್ಪಂದನೆ, ನಮ್ಮ ವಂದನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

‘3 ಸಾವಿರ ವೈದ್ಯರ ಪೈಕಿ 2 ಸಾವಿರ ಮಂದಿ ತಜ್ಞರಾಗಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲಾ, ತಾಲ್ಲೂಕು ಆಸ್ಪತ್ರೆ, ಸಮುದಾಯ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಪಡಿಸಲಾಗುತ್ತಿದೆ’ ಎಂದರು.

‘ಕೊರೊನಾ ಸೋಂಕಿತರಿಗೆ ಪ್ರತ್ಯೇಕ ಐಸಿಯು ಹಾಗೂ ಮಕ್ಕಳಿಗಾಗಿಯೇ ಪ್ರತ್ಯೇಕ ವಿಭಾಗ ಸ್ಥಾಪಿಸಲಾಗುತ್ತಿದೆ. ಆಮ್ಲಜನಕ ಸೌಲಭ್ಯ, ವೆಂಟಿಲೇಟರ್ ಒದಗಿಸುವ ಜೊತೆಗೆ ಸಿಬ್ಬಂದಿಯನ್ನೂ ನೇಮಿಸಲಾಗುತ್ತಿದೆ. ಸರ್ಕಾರಿ ಮತ್ತು ಖಾಸಗಿ ವೈದ್ಯ ಕಾಲೇಜುಗಳಲ್ಲಿ 50 ಸಾವಿರ ಕೆಎಲ್ ಸಾಮರ್ಥ್ಯದ ಆಮ್ಲಜನಕ ಸಂಗ್ರಹಕ್ಕೆ ಅಗತ್ಯವಿರುವ ಸೌಕರ್ಯ ಕಲ್ಪಿಸಲಾಗುತ್ತಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿ 20 ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ 6 ರಿಂದ 7 ಸಾವಿರ ಕೆಎಲ್ ಆಮ್ಲಜನಕ ಸಂಗ್ರಹ ಸಾಮರ್ಥ್ಯದ ಟ್ಯಾಂಕ್‌ಗಳನ್ನು ಅಳವಡಿಸಲಾಗುತ್ತಿದೆ’ ಎಂದು ತಿಳಿಸಿದರು.

ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ವಿಜಯನಗರ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ, ಅಭಿಮಾನಿ ಸಮೂಹ ಸಂಸ್ಥೆಗಳ ಮುಖ್ಯಸ್ಥ ಟಿ.ವೆಂಕಟೇಶ್, ಶಾಸಕ ಎನ್.ಎ.ಹ್ಯಾರಿಸ್, ಡಾ.ವಿಜಯಲಕ್ಷ್ಮೀ ಬಾಳೇಕುಂದ್ರಿ, ಡಾ.ಸಿ.ಎನ್.ಮಂಜುನಾಥ್, ಡಾ.ಪ್ರಸನ್ನ, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಇದ್ದರು.

## ‘ಟಿಸಿಎಸ್ ಐಟಿ ವಿಜ್’ಗೆ ನೋಂದಣಿ ಆರಂಭ

**ಬೆಂಗಳೂರು:** ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ನಡೆಸುವ ಅಂತರ ಶಾಲಾ ಕ್ವಿಜ್ ಸ್ಪರ್ಧೆ ‘ಟಿಸಿಎಸ್ ಐಟಿ ವಿಜ್’ನ 23ನೇ ಆವೃತ್ತಿಗೆ ನೋಂದಣಿ ಆರಂಭವಾಗಿದೆ.

ಆಸಕ್ತರು ಇದೇ 30ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

‘ಅಖಿಲ ಭಾರತ ಮಟ್ಟದ ಈ ಕ್ವಿಜ್‌ನ ನೋಂದಣಿಗೆ ಯಾವುದೇ ಶುಲ್ಕ ಇರುವುದಿಲ್ಲ. ಕ್ವಿಜ್ ಆರಂಭಕ್ಕೆ ಮುನ್ನ ಎರಡು ಪ್ರತ್ಯೇಕ ಪ್ರಾಥಮಿಕ ಸುತ್ತುಗಳು ನಡೆಯಲಿವೆ. ಇವುಗಳನ್ನು ಟಿಸಿಎಸ್‌ನ ಐ ಆನ್ ಪ್ಲಾಟ್‌ಫಾರ್ಮ್‌ನಲ್ಲಿ ಆಯೋಜಿಸಲಾಗುತ್ತದೆ. ನಂತರ ಕ್ವಾರ್ಟರ್ ಫೈನಲ್ ನಿಗದಿಯಾಗಿದೆ. ಈ ಹಂತದಲ್ಲಿ 96 ವಿದ್ಯಾರ್ಥಿಗಳು ಇರಲಿದ್ದಾರೆ. ಈ ಪೈಕಿ ಉತ್ತಮ ಸಾಮರ್ಥ್ಯ ತೋರುವ 6 ಜನ ರಾಷ್ಟ್ರಮಟ್ಟದಲ್ಲಿ ನಡೆಯುವ ಫೈನಲ್‌ಗೆ ಅರ್ಹತೆ ಗಳಿಸಲಿದ್ದಾರೆ’ ಎಂದು ವಿವರಿಸಲಾಗಿದೆ.


‘ವಿಜೇತರಿಗೆ ‘ಐಟಿ ವಿಜಾರ್ಡ್ ಆಫ್ ದ ನೇಷನ್’ ಕಿರೀಟ, ಟ್ರೋಫಿ ಮತ್ತು ಚಿನ್ನದ ಪದಕ ನೀಡಲಾಗುತ್ತದೆ. ಇದರ ಜೊತೆಗೆ ಪ್ರಮಾಣಪತ್ರ ಹಾಗೂ ಉಡುಗೊರೆಯೂ ಸಿಗಲಿವೆ’ ಎಂದು ಹೇಳಲಾಗಿದೆ.

## ‘ಸೋಂಕು ಹೆಚ್ಚಾದರೆ ಮಾತ್ರ ಕಠಿಣ ಕ್ರಮ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿಗೆ ತರುವ ಪರಿಸ್ಥಿತಿ ನಗರದಲ್ಲಿ ಸದ್ಯಕ್ಕೆ ಇಲ್ಲ. ಲಾಕ್‌ಡೌನ್ ಜಾರಿಯಾಗುತ್ತದೆ ಎಂದು ತಲೆಯಲ್ಲಿ ಇಟ್ಟುಕೊಳ್ಳುವುದು ಬೇಡ. ಕೋವಿಡ್ ಪ್ರಕರಣಗಳು ಎಷ್ಟು ಜಾಸ್ತಿ ಆಗುತ್ತವೆಯೋ ಅದರ ಆಧಾರದಲ್ಲಿ ನಿಯಂತ್ರಣ ಕ್ರಮ ಕೈಗೊಳ್ಳಬೇಕಾಗುತ್ತದೆ’ ಎಂದು ಕಂದಾಯ ಸಚಿವ ಆರ್.ಅಶೋಕ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ನಗರದಲ್ಲಿ 50 ದಿನಗಳಿಂದ ಕೋವಿಡ್ ಪ್ರಕರಣಗಳ ಸಂಖ್ಯೆ 300 ರಿಂದ 400 ನಡುವೆ ಇದೆ. ಇದು ಸಹಜ ಮಟ್ಟ. ಈ ಸಂಖ್ಯೆ ಏನಾದರೂ ಹೆಚ್ಚಾದರೆ ಕಠಿಣ ಕ್ರಮ ಕೈಗೊಳ್ಳುವತ್ತ ಸರ್ಕಾರ ಮುಂದಿನ ಹೆಜ್ಜೆ ಇಡುವುದು ಶೇ 100ರಷ್ಟು ನಿಶ್ಚಿತ. ಆಗ ವಾರಾಂತ್ಯ ಕರ್ಫ್ಯೂ ಜಾರಿಗೊಳಿಸುವ ಕುರಿತು ಹಾಗೂ ರಾತ್ರಿ ಕರ್ಫ್ಯೂವನ್ನು ಇನ್ನಷ್ಟು ಬಿಗುಗೊಳಿಸುವ ಬಗ್ಗೆ ಯೋಚನೆ ಮಾಡುತ್ತೇವೆ. ಕೋವಿಡ್ ಹರಡುವುದನ್ನು ತಡೆಯಲು ಇಂತಹ ಕ್ರಮ ಕೈಗೊಳ್ಳುವುದು ಅನಿವಾರ್ಯ’ ಎಂದು ಅವರು ಹೇಳಿದರು.




ಮೂರನೇ ಅಲೆ ಎದುರಿಸಲು ಆರೋಗ್ಯ ಇಲಾಖೆ ಕ್ರಮ

## ಕೋವಿಡ್: ಜಿಲ್ಲೆಯಲ್ಲೂ ತಜ್ಞರ ಸಮಿತಿ

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ಸಂಭಾವ್ಯ ಕೋವಿಡ್ ಮೂರನೇ ಅಲೆ ಎದುರಿಸಲು ಸಲಹೆ, ಮಾರ್ಗದರ್ಶನ ನೀಡುವುದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ತಾಂತ್ರಿಕ ತಜ್ಞರ ಸಮಿತಿಗಳನ್ನು ರಚಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಕೋವಿಡ್ ಮೂರನೇ ಅಲೆಯು ಅಕ್ಟೋಬರ್– ನವೆಂಬರ್ ತಿಂಗಳ ಅವಧಿಯಲ್ಲಿ ಬರಬಹುದು ಎಂಬ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಅಂದಾಜು ಆಧರಿಸಿ ಈ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ನಿಯಮಿತವಾಗಿ ಸಭೆ ನಡೆಸಿ ಪರಿಸ್ಥಿತಿ ಅವಲೋಕಿಸಿ ಜಿಲ್ಲಾಡಳಿತಕ್ಕೆ ಸಲಹೆ ನೀಡಬೇಕು. ಸಮಿತಿಯ ನಡಾವಳಿಗಳ ಪ್ರತಿಯನ್ನು ಆರೋಗ್ಯ ಇಲಾಖೆಯ ಆಯುಕ್ತರ ಕಚೇರಿಗೆ ಸಲ್ಲಿಸಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ನೀಡಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ತಾಂತ್ರಿಕ ತಜ್ಞರ ಸಮಿತಿಗಳಲ್ಲಿ ಸಾರ್ವಜನಿಕ ಆರೋಗ್ಯ ಅಥವಾ ಸಮುದಾಯ ಆರೋಗ್ಯ ಸೇವೆಯಲ್ಲಿ ಅನುಭವ ಹೊಂದಿರುವ ಹಿರಿಯ ತಜ್ಞ ವೈದ್ಯರು, ಹಿರಿಯ ಶ್ವಾಸಕೋಶ ತಜ್ಞರು, ಹಿರಿಯ ಫಿಜಿಷಿಯನ್ ಅಥವಾ ತೀವ್ರ ನಿಗಾ ಘಟಕದ ತಜ್ಞರು, ಹಿರಿಯ ಮಕ್ಕಳ ತಜ್ಞರು, ಹಿರಿಯ ಸ್ತ್ರೀರೋಗ ತಜ್ಞರು, ಹಿರಿಯ ವೈರಾಣು ತಜ್ಞರು, ವಿಶ್ವ ಆರೋಗ್ಯ ಸಂಸ್ಥೆಯ ಸರ್ವೇಕ್ಷಣಾ ಅಧಿಕಾರಿ, ಆಯುಷ್ ವಿಭಾಗದ ಹಿರಿಯ ಫಿಜಿಷಿಯನ್ ಸಮಿತಿಯ ಸದಸ್ಯರಾಗಿರುತ್ತಾರೆ. ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ವಿಶೇಷ ಆಹ್ವಾನಿತರಾಗಿರುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಸಮಿತಿಯು ನಿರಂತರವಾಗಿ ರಾಜ್ಯಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಜತೆ ಸಮಾಲೋಚನೆ ನಡೆಸುತ್ತಿರಬೇಕು. ಆಯಾ ಜಿಲ್ಲೆಯ ಸ್ಥಿತಿಗತಿಯನ್ನು ಇತರ ಜಿಲ್ಲೆಗಳು, ರಾಜ್ಯ ಮತ್ತು ರಾಷ್ಟ್ರಮಟ್ಟದ ಪರಿಸ್ಥಿತಿ ಜತೆ ಹೋಲಿಕೆ ಮಾಡಿ ಪರಿಶೀಲಿಸಿ ವರದಿ ನೀಡಬೇಕು ಎಂದು ಸೂಚಿಸಲಾಗಿದೆ.

ಲಭ್ಯವಾಗುವ ಮಾಹಿತಿಯನ್ನು ಬಳಸಿಕೊಂಡು ಈ ಸಮಿತಿಗಳು, ಕೋವಿಡ್ ನಿಯಂತ್ರಿಸಲು ಜಿಲ್ಲಾಡಳಿತಗಳಿಗೆ ಸಹಕಾರ ನೀಡಬೇಕು ಎಂದು ನಿರ್ದೇಶನ ನೀಡಲಾಗಿದೆ.




### 7 ಜಿಲ್ಲೆಗಳಲ್ಲಿ ವಿಶೇಷ ಕ್ರಮಕ್ಕೆ ಸೂಚನೆ

ಕೋವಿಡ್ ಪ್ರಕರಣಗಳ ದೃಢಪ್ರಮಾಣ ದರ ಹೆಚ್ಚಿರುವ ಮತ್ತು ಮರಣ ಪ್ರಕರಣಗಳು ಜಾಸ್ತಿಯಾಗುತ್ತಿರುವ ಏಳು ಜಿಲ್ಲೆಗಳಲ್ಲಿ ಕೋವಿಡ್ ಪರೀಕ್ಷೆ ಹೆಚ್ಚಳ, ಲಸಿಕೆ ನೀಡುವುದನ್ನು ಹೆಚ್ಚಿಸುವುದು, ಹಾಸಿಗೆಗಳನ್ನು ಕಾಯ್ದಿರಿಸುವುದು ಸೇರಿದಂತೆ ವಿಶೇಷ ಕ್ರಮಗಳನ್ನು ಕೈಗೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕಚಂದ್ರ ಸೋಮವಾರ ಆದೇಶ ಹೊರಡಿಸಿದ್ದಾರೆ.

‘ದಕ್ಷಿಣ ಕನ್ನಡ, ಉಡುಪಿ, ಹಾಸನ, ಮೈಸೂರು, ಕೊಡಗು, ಚಿಕ್ಕಮಗಳೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕೋವಿಡ್ ದೃಢಪ್ರಮಾಣ ದರ ಶೇಕಡ 3ರಿಂದ 4ರವರೆಗೂ ವರದಿಯಾಗುತ್ತಿದೆ. ಈ ಜಿಲ್ಲೆಗಳಲ್ಲಿ ಪ್ರತಿ ಸೋಂಕಿತರಿಗೆ ತಲಾ 20 ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆಹಚ್ಚಿ ಕೋವಿಡ್ ಪರೀಕ್ಷೆ ನಡೆಸಬೇಕು. ಲಸಿಕೆ ನೀಡುವುದನ್ನೂ ಹೆಚ್ಚಿಸಬೇಕು’ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಕೋವಿಡ್ ದೃಢಪ್ರಮಾಣ ದರ ಶೇ 2ಕ್ಕಿಂತ ಹೆಚ್ಚಿರುವ ಜಿಲ್ಲೆಗಳಲ್ಲಿ ಪ್ರತಿದಿನ ಆಸ್ಪತ್ರೆಗಳಿಗೆ ದಾಖಲಾಗುತ್ತಿರುವವರ ಸಂಖ್ಯೆಯ ಆಧಾರದಲ್ಲಿ ಅಗತ್ಯ ಪ್ರಮಾಣದ ಸಾಮಾನ್ಯ ಹಾಸಿಗೆ, ಆಮ್ಲಜನಕ ಪೂರೈಕೆ ಇರುವ ಹಾಸಿಗೆ, ತೀವ್ರನಿಗಾ ಘಟಕದ ಹಾಸಿಕೆ ಮತ್ತು ಮಕ್ಕಳ ವಿಭಾಗದಲ್ಲಿನ ಹಾಸಿಗೆಗಳನ್ನು ಕಾಯ್ದಿರಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

## ‘ಕಟ್ಟಡ ಮಾಲೀಕರಿಗೆ ಲಿಂಬಾವಳಿ ಬೆದರಿಕೆ’

ಪ್ರಜಾವಾಣಿ ವಾರ್ತೆ



ಮೋಹನ್ ದಾಸರಿ

**ಬೆಂಗಳೂರು:** ‘ಆಮ್ ಆದ್ಮಿ ಪಕ್ಷದ ಕಚೇರಿಗೆ ಕಟ್ಟಡ ಬಾಡಿಗೆ ನೀಡಿದ್ದಕ್ಕಾಗಿ ಮಹದೇವಪುರ ಕ್ಷೇತ್ರದ ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ಅವರು ಕಟ್ಟಡದ ಮಾಲೀಕರಿಗೆ ಬೆದರಿಕೆ ಒಡ್ಡಿದ್ದಾರೆ’ ಎಂದು ಎಎಪಿ ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ ಸೋಮವಾರ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಹದೇವಪುರ ಕ್ಷೇತ್ರದ ಎಎಪಿ ಅಧ್ಯಕ್ಷ ಅಶೋಕ್ ಮೃತ್ಯುಂಜಯ, ಕಸವನಹಳ್ಳಿ ವೃತ್ತದಲ್ಲಿ ಕಟ್ಟಡವೊಂದನ್ನು ಲೀಸ್‌ಗೆ ಪಡೆದು, ಅಲ್ಲಿ ಬೆಳ್ಳಂದೂರು ವಾರ್ಡ್ ಕಚೇರಿಯನ್ನು ಭಾನುವಾರ ಆರಂಭಿಸಿದ್ದರು. ವಿಷಯ ತಿಳಿದೊಡನೆಯೇ ಸ್ಥಳೀಯ ಶಾಸಕ ಅರವಿಂದ ಲಿಂಬಾವಳಿ, ಮಾಲೀಕರಿಗೆ ಬೆದರಿಕೆ ಹಾಕಿದ್ದಾರೆ. ಕಚೇರಿ ಖಾಲಿ ಮಾಡಿಸದಿದ್ದರೆ ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ನಾವು ಕಚೇರಿ ಶುರುಮಾಡಿದರೆ ಶಾಸಕರಿಗೇಕೆ ಭಯ. ಅವರೇಕೆ ಹತಾಶರಾಗಿದ್ದಾರೆ. ಅವರ ನಡವಳಿಕೆ ಖಂಡನಾರ್ಹ. ಈ ಸಂಬಂಧ ಪೊಲೀಸರಿಗೆ ದೂರು ನೀಡಲಾಗಿದೆ’ ಎಂದರು.

‘ನಮಗೆ ಜನರ ಹಿತ ಮುಖ್ಯ. ಅದೇ ನಮ್ಮ ಪಕ್ಷದ ಧ್ಯೇಯ. ನಾವು ದ್ವೇಷ ರಾಜಕಾರಣಕ್ಕೆ ಮುಂದಾಗುವುದಿಲ್ಲ. ಅದರಲ್ಲಿ ಆಸಕ್ತಿಯೂ ಇಲ್ಲ. ನಮ್ಮ ಸಹನೆಯನ್ನು ದೌರ್ಬಲ್ಯವೆಂದು ಬಿಜೆಪಿಯವರು ಭಾವಿಸಬಾರದು. ಗೂಂಡಾಗಿರಿ, ಬಿಜೆಪಿಯ ಸಂಸ್ಕೃತಿ. ಶಾಸಕರು ಅಧಿಕಾರ ದುರ್ಬಳಕೆ ಮಾಡಿಕೊಂಡು ನಮಗೆ ಕಿರುಕುಳ ನೀಡುತ್ತಿದ್ದಾರೆ. ಅವರ ಪ್ರಜಾಪ್ರಭುತ್ವ ವಿರೋಧಿ ನಡೆಗೆ ಪ್ರಜಾಪ್ರಭುತ್ವದ ಮಾರ್ಗದಲ್ಲಿಯೇ ತಕ್ಕ ಪಾಠ ಕಲಿಸುವುದು ನಮಗೆ ತಿಳಿದಿದೆ’ ಎಂದು ಹೇಳಿದರು.

ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ, ‘ಕ್ಷೇತ್ರದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಕೆರೆ ಒತ್ತುವರಿ ವಿರುದ್ಧ ನಾವು ದನಿ ಎತ್ತುತ್ತಿದ್ದೇವೆ. ಇದರಿಂದ ಕಂಗೆಟ್ಟಿರುವ ಶಾಸಕರು ತಾವು ಮಾಡಿರುವ ಅಕ್ರಮಗಳೆಲ್ಲಾ ಬಯಲಾಗಬಹುದು ಎಂಬ ಭಯದಿಂದ ಬೆದರಿಕೆ ಹಾಕಿದ್ದಾರೆ. ಅವರ ಗೂಂಡಾಗಿರಿ ಮುಂದುವರಿದರೆ ಅದನ್ನು ಖಂಡಿಸಿ ರಾಜ್ಯಾದ್ಯಂತ ಹೋರಾಟ ಮಾಡುತ್ತೇವೆ. ಕಚೇರಿ ಆರಂಭಿಸುವುದು ಪ್ರಜಾಪ್ರಭುತ್ವ ನಮಗೆ ನೀಡಿರುವ ಹಕ್ಕು. ಇದನ್ನು ಕಿತ್ತುಕೊಳ್ಳುವ ದುಸ್ಸಾಹಸದಿಂದ ಅವರು ಹಿಂದೆ ಸರಿಯಬೇಕು’ ಎಂದು ತಿಳಿಸಿದರು.

ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ಶಾಸಕರನ್ನು ಸಂಪರ್ಕಿಸಲಾಯಿತು. ಕರೆ ಸ್ವೀಕರಿಸಿದ ಅವರ ಆಪ್ತ ಸಹಾಯಕ, ‘ಸಾಹೇಬರು ಇಲ್ಲ. ಈ ಬಗ್ಗೆ ಏನೂ ಗೊತ್ತಿಲ್ಲ’ ಎಂದಷ್ಟೇ ಹೇಳಿದರು.

## ಲಂಚ ಪ್ರಕರಣ: ಬಿಬಿಎಂಪಿ ಆರೋಗ್ಯಾಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶೌಚಾಲಯ ಮತ್ತು ಮೂತ್ರಾಲಯಗಳ ಸ್ವಚ್ಛತಾ ಕಾಮಗಾರಿ ನಿರ್ವಹಿಸಿದ್ದ ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿಗೆ ಅನುಮೋದನೆ ನೀಡಲು ₹ 15,000 ಲಂಚ ಪಡೆಯುತ್ತಿದ್ದ ಬಿಬಿಎಂಪಿ ವಾರ್ಡ್ ಸಂಖ್ಯೆ 120–ಸಿ ಕಿರಿಯ ಆರೋಗ್ಯಾಧಿಕಾರಿ ಕೃಷ್ಣ ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಂಧಿಸಿದೆ.

ಗುತ್ತಿಗೆದಾರರೊಬ್ಬರು ವಾರ್ಡ್ 120–ಸಿ ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯ ಮತ್ತು ಮೂತ್ರಾಲಯಗಳ ಸ್ವಚ್ಛತಾ ಕೆಲಸ ನಿರ್ವಹಿಸಿದ್ದರು. ಆರು ತಿಂಗಳಿನಿಂದ ಬಿಲ್ ಪಾವತಿ ಮಾಡಿರಲಿಲ್ಲ. ಬಿಲ್ ಪಾವತಿಸುವಂತೆ ಅವರು ಬಿಬಿಎಂಪಿಗೆ ಅರ್ಜಿ ಸಲ್ಲಿಸಿದ್ದರು. ಕಡತವು ಕಿರಿಯ ಆರೋಗ್ಯಾಧಿಕಾರಿ ಬಳಿ ಬಾಕಿ ಇತ್ತು. ಅವರನ್ನು ಭೇಟಿಮಾಡಿದಾಗ, ₹ 50,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಇಬ್ಬರ ನಡುವೆ ಈ ಕುರಿತು ಮಾತುಕತೆ ನಡೆದಿತ್ತು. ₹ 50,000 ನೀಡಿದರೆ ಬಿಲ್ ಪಾವತಿಗೆ ಶಿಫಾರಸು ಮಾಡುವುದಾಗಿ ತಿಳಿಸಿದ್ದ ಆರೋಪಿ ಅಧಿಕಾರಿ, ₹ 15,000 ಮುಂಗಡ ನೀಡುವಂತೆ ಬೇಡಿಕೆ ಇಟ್ಟಿದ್ದರು. ಈ ಕುರಿತು ಗುತ್ತಿಗೆದಾರ ಭ್ರಷ್ಟಾಚಾರ ನಿಗ್ರಹ ದಳದ ಬೆಂಗಳೂರು ನಗರ ಘಟಕದ ಕಚೇರಿಗೆ ದೂರು ನೀಡಿದ್ದರು.

ಕಾಟನ್‌ಪೇಟೆಯ ತುಳಸಿ ತೋಟದಲ್ಲಿರುವ ವಾರ್ಡ್ ಕಚೇರಿಯಲ್ಲೇ ಸೋಮವಾರ ಲಂಚ ಪಡೆಯುತ್ತಿದ್ದಾಗ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳು, ಕೃಷ್ಣ ಅವರನ್ನು ಬಂಧಿಸಿದರು. ಪ್ರಕರಣದ ತನಿಖೆ ಮುಂದುವರಿದಿದೆ ಎಂದು ಎಸಿಬಿ ಮೂಲಗಳು ತಿಳಿಸಿವೆ.

## ‘ಇಂದಿರಾ ಕ್ಯಾಂಟೀನ್ : ಸಂಪುಟದಲ್ಲಿ ಚರ್ಚೆಯೇ ಆಗಿಲ್ಲ’



ಆರ್.ಅಶೋಕ

**ಬೆಂಗಳೂರು:** ಇಂದಿರಾ ಕ್ಯಾಂಟೀನ್‌ಗಳ ಹೆಸರುಗಳನ್ನು ಬದಲಾಯಿಸುವ ಬಗ್ಗೆ ಸಚಿವ ಸಂಪುಟ ಸಭೆಯಲ್ಲಾಗಲೀ, ಮಂತ್ರಿ ಮಂಡಲದ ಸದಸ್ಯರ ಜೊತೆಗಾಗಲೀ, ಯಾವುದೇ ಚರ್ಚೆ ನಡೆದಿಲ್ಲ ಎಂದು ಕಂದಾಯ ಸಚಿವ ಆರ್.ಅಶೋಕ ಸ್ಪಷ್ಟಪಡಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಇಂದಿರಾ ಕ್ಯಾಂಟೀನ್‌ಗಳಿಗೆ ಅನ್ನಪೂರ್ಣೇಶ್ವರಿ ಹೆಸರು ಇಡುವಂತೆ ಬಿಜೆಪಿಯ ಹಲವು ಮುಖಂಡರು ಒತ್ತಾಯ ಮಾಡಿದ್ದಾರೆ. ಒಂದೊಂದು ಸರ್ಕಾರ ಅಧಿಕಾರಕ್ಕೆ ಬಂದಾಗ ಒಬ್ಬೊಬ್ಬರ ಹೆಸರು ಇಡುತ್ತಾ ಹೋಗುವುದು ಸರಿಯಲ್ಲ. ಶಾಶ್ವತವಾಗಿ ಒಂದು ಹೆಸರು ಇಡಬೇಕು ಎಂದು ಹೇಳಿದ್ದಾರೆ. ಆದರೆ, ಮುಖ್ಯಮಂತ್ರಿಯವರು ಈ ಬಗ್ಗೆ ನಮ್ಮೊಂದಿಗೆ ಚರ್ಚೆ ಮಾಡಿಲ್ಲ’ ಎಂದು ಹೇಳಿದರು.

‘ಚರ್ಚೆಯೇ ಆಗದ ವಿಚಾರದ ಬಗ್ಗೆ ಹೇಳಿಕೆಗಳು ಬರುತ್ತಿರುವುದನ್ನು ನಾನು ನೋಡಿದ್ದೇನೆ. ಈ ವಿಚಾರದಲ್ಲಿ ವಾದ ವಿವಾದಗಳು ನಡೆಯುತ್ತಿರುವುದು ಒಳ್ಳೆಯದಲ್ಲ. ಇಂದಿರಾ ಕ್ಯಾಂಟೀನ್ ಬಗ್ಗೆಯಾಗಲೀ ಅಥವಾ ಅನ್ನಪೂರ್ಣೇಶ್ವರಿ ಹೆಸರಿಡುವ ಬಗ್ಗೆಯಾಗಲೀ ಸದ್ಯಕ್ಕೆ ಯಾವುದೇ ತೀರ್ಮಾನವನ್ನೂ ಸರ್ಕಾರ ತೆಗೆದುಕೊಂಡಿಲ್ಲ’ ಎಂದು ಅವರು ತಿಳಿಸಿದರು.

## ಸರ್ಕಾರಿ ವಕೀಲರ ಹುದ್ದೆಗೆ ಅರ್ಜಿ ಆಹ್ವಾನ

**ಬೆಂಗಳೂರು:** ಬೆಂಗಳೂರು ನಗರ ಜಿಲ್ಲೆಯ 2ನೇ ಹೆಚ್ಚುವರಿ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಅರ್ಹ ವಕೀಲರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕನಿಷ್ಠ 10 ವರ್ಷಗಳ ಕಾಲ ವಕೀಲ ವೃತ್ತಿಯನ್ನು ಪೂರೈಸಿರುವವರು ಆ.25ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ, ಕೆಂಪೇಗೌಡ ರಸ್ತೆ.

ಸಂಪರ್ಕ:080-22211292, 22211106

# ‘ರಾಜಕಾರಣದ ಶುದ್ಧೀಕರಣಕ್ಕೆ ಇಚ್ಛಾಶಕ್ತಿಯೂ ಬೇಕು’

**ಬೆಂಗಳೂರು:** ರಾಜಕಾರಣದ ಅಪರಾಧೀಕರಣ ತಡೆಗೆ ಕಠಿಣ ಕಾನೂನು ಅಗತ್ಯ ಎಂದು ಪ್ರತಿಪಾದಿಸಿರುವ ಸುಪ್ರೀಂ ಕೋರ್ಟ್, ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ವಿರುದ್ಧ ಬಾಕಿ ಇರುವ ಕ್ರಿಮಿನಲ್ ಮೊಕದ್ದಮೆಗಳ ವಿವರಗಳನ್ನು ಬಹಿರಂಗಪಡಿಸಲು ಇನ್ನಷ್ಟು ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಿದೆ.

‘ರಾಜಕೀಯದಲ್ಲಿ ಅಪರಾಧೀಕರಣ: ಸುಪ್ರೀಂ ಕೋರ್ಟ್ ತೀರ್ಪಿನ ಬಳಿಕ’ ಎಂಬ ವಿಷಯ ಕುರಿತು ‘ಪ್ರಜಾವಾಣಿ’ ಆಯೋಜಿಸಿದ್ದ ಫೇಸ್‌ಬುಕ್ ಲೈವ್ ಸಂವಾದದಲ್ಲಿ ಪಾಲ್ಗೊಂಡಿದ್ದ ಮೂರು ರಾಜಕೀಯ ಪಕ್ಷಗಳ ಮುಖಂಡರು ಹಂಚಿಕೊಂಡಿರುವ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಪ್ರಜಾವಾಣಿ facebook LIVE

**ಸಂಪೂರ್ಣ ಚರ್ಚೆ ವೀಕ್ಷಿಸಲು**-https://www.facebook.com/prajavani.net

## ಅಪರಾಧೀಕರಣದಲ್ಲಿ ಎಲ್ಲ ಪಕ್ಷಗಳು ಶಾಮೀಲು



ಸಂಸತ್ತು ಮತ್ತು ವಿಧಾನಮಂಡಲಗಳು ಕಾನೂನು ರಚಿಸುವ ಸ್ಥಳಗಳು. ಅಲ್ಲಿ ಅಪರಾಧ ಹಿನ್ನೆಲೆಯವರು ಇರಬಾರದು ಎಂಬುದನ್ನು ಒಪ್ಪಲೇಬೇಕು. ಸಂವಿಧಾನ ರಚನೆ ಸಂದರ್ಭದಲ್ಲಿ ಅಪರಾಧಿ ಹಿನ್ನೆಲೆಯವರು ರಾಜಕೀಯದಲ್ಲಿ ಇರಲಿಲ್ಲ. ಹಾಗಾಗಿ ಈ ಬಗ್ಗೆ ಅಲ್ಲಿ ಉಲ್ಲೇಖ ಮಾಡಿರಲಿಲ್ಲ.

ನಾನು ಪ್ರತಿನಿಧಿಸುವ ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳೂ ಅಂತಹವರಿಗೆ ಟಿಕೆಟ್ ನೀಡುತ್ತಿವೆ. ಹಣ ಮತ್ತು ಜಾತಿಬಲದ ಆಧಾರದಲ್ಲಿ ಗೆಲ್ಲುತ್ತಾರೆ ಎಂದು ಅಪರಾಧ ಹಿನ್ನೆಲೆಯವರಿಗೆ ಮಣೆ ಹಾಕುತ್ತಿವೆ. ಬಿಜೆಪಿ ಅತಿ ಹೆಚ್ಚು ರಾಜಿಯಾಗಿರುವ ಪಕ್ಷ ಅದು. ಕಾನೂನುಗಳ ವ್ಯಾಪ್ತಿಯಲ್ಲೇ ಚುನಾವಣಾ ಆಯೋಗ ಕೆಲಸ ಮಾಡಬೇಕು. ಕಾನೂನು ಮತ್ತು ಸಂವಿಧಾನದ ತಿದ್ದುಪಡಿ ಆಗಲೇಬೇಕಿದೆ. ಆನುವಂಶಿಕವಾಗಿ ಅಧಿಕಾರದಲ್ಲಿ ಮುಂದುವರಿಯುವುದನ್ನು ನಿರ್ಬಂಧಿಸಬೇಕು. ಸರ್ಕಾರವೇ ಚುನಾವಣೆಯ ವೆಚ್ಚ ಭರಿಸುವ ವ್ಯವಸ್ಥೆ ತರುವುದು ಅತಿ ಅಗತ್ಯ.

**ಬಸವರಾಜ ರಾಯರಡ್ಡಿ,** ಕಾಂಗ್ರೆಸ್ ಮುಖಂಡ

## ಹಣ ಬಳಕೆಯಲ್ಲಿ ಕರ್ನಾಟಕವೇ ಮುಂದು



130 ಕೋಟಿ ಜನರಿರುವ ದೇಶದಲ್ಲಿ 540 ಒಳ್ಳೆಯ ವ್ಯಕ್ತಿಗಳು ಸಿಗುವುದಿಲ್ಲ ಎನ್ನುವ ಸ್ಥಿತಿ ಇದೆಯೇ ಎಂಬುದನ್ನು ಯೋಚಿಸಬೇಕಿದೆ. ಕ್ರಿಮಿನಲ್ ಅಪರಾಧ ಮಾಡಿದವರೇ ಕಾನೂನು ರಚಿಸುವುದು ಬೇಲಿಯೇ ಎದ್ದು ಹೊಲ ಮೇಯ್ದಂತೆ.

ಅಪರಾಧ ಹಿನ್ನೆಲೆಯವರೇ ದೊಡ್ಡ ಪ್ರಮಾಣದಲ್ಲಿ ರಾಜಕಾರಣ ಪ್ರವೇಶಿಸುತ್ತಿದ್ದಾರೆ. 159 ಸಂಸದರ ವಿರುದ್ಧ ಗಂಭೀರ ಅಪರಾಧ ಪ್ರಕರಣಗಳಿವೆ. ದೇಶದಲ್ಲಿ ಚುನಾವಣೆಗೆ ಅತ್ಯಧಿಕ ಹಣ ಬಳಕೆ ಆಗುತ್ತಿರುವುದು ಕರ್ನಾಟಕದಲ್ಲಿ. ಭ್ರಷ್ಟಾಚಾರ ಪ್ರಕರಣಗಳಿರುವುದು ನಮ್ಮಲ್ಲೇ ಹೆಚ್ಚು. ಬಿಹಾರ ಮತ್ತಿತರ ರಾಜ್ಯಗಳಲ್ಲಿ ಕೊಲೆ, ಅತ್ಯಾಚಾರದಂತಹ ಆರೋಪದ ಕ್ರಿಮಿನಲ್ ಪ್ರಕರಣಗಳು ಹೆಚ್ಚಿವೆ.

ಕಾನೂನಿಗಾಗಿ ಕಾಯಬೇಕಿಲ್ಲ. ರಾಜಕೀಯ ಪಕ್ಷಗಳೇ ಮುಂದಾದರೆ ಎಲ್ಲವನ್ನೂ ಪರಿಹರಿಸಬಹುದು. ಕ್ರಿಮಿನಲ್ ಹಿನ್ನೆಲೆಯವರು ಚುನಾವಣೆಗೆ ಸ್ಪರ್ಧಿಸದಂತೆ ತಡೆಯಲು ಕಾನೂನು ಮತ್ತು ಜನಜಾಗೃತಿ ಎರಡೂ ಅಗತ್ಯ.

**ಪೃಥ್ವಿ ರೆಡ್ಡಿ,** ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಸಂಚಾಲಕ

## ಅಪರಾಧೀಕರಣ ನೋಡುವ ದೃಷ್ಟಿ ಬದಲಾಗಲಿ

ರಾಜಕೀಯದ ಅಪರಾಧೀಕರಣವನ್ನು ನೋಡುವ ದೃಷ್ಟಿಕೋನವನ್ನು ನ್ಯಾಯಾಲಯ ಮತ್ತು ಸಮಾಜ ಬದಲಿಸಿಕೊಳ್ಳಬೇಕಿದೆ. ಕ್ರಿಮಿನಲ್ ಚಟುವಟಿಕೆ ನಡೆಸಿದವರನ್ನು ಚುನಾವಣಾ ರಾಜಕಾರಣದಿಂದ ಹೊರಗಿಡುವುದು ಸ್ವಾಗತಾರ್ಹ. ಆದರೆ, ಜನಪರ ಹೋರಾಟ ನಡೆಸಿದ್ದಕ್ಕಾಗಿ ದಾಖಲಾದ ಮೊಕದ್ದಮೆಗಳ ಕಾರಣಕ್ಕಾಗಿ ಅವರನ್ನೂ ಕ್ರಿಮಿನಲ್‌ಗಳು ಎಂದು ಗುರುತಿಸುವುದು ತಪ್ಪು. ಇದರಿಂದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಾಯವೇ ಹೆಚ್ಚು.



ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗಕ್ಕೆ ನೀಡಿರುವ ಸೂಚನೆಯಿಂದ ಹೆಚ್ಚೇನೂ ಬದಲಾವಣೆ ಆಗುವಂತೆ ಕಾಣುತ್ತಿಲ್ಲ. ಜನರ ಮಧ್ಯೆ ಚರ್ಚೆ ನಡೆದರೆ, ರಾಜಕೀಯ ಪಕ್ಷಗಳಲ್ಲಿ ಸಾರ್ವಜನಿಕ ಲಜ್ಜೆ ಮೂಡೀತು. ಚುನಾವಣೆಗೆ ಸ್ಪರ್ಧಿಸಬೇಕಾದರೆ ಇರಬೇಕಾದ ಅರ್ಹತೆಗಳ ಕುರಿತು ಸಂವಿಧಾನ ತಿದ್ದುಪಡಿ ಆಗಬೇಕು. ಹಣಬಲದ ರಾಜಕೀಯ ಕೊನೆಯಾದರೆ ಸಮಸ್ಯೆಗೆ ಪರಿಹಾರ ಸಾಧ್ಯವಾಗುತ್ತದೆ. ಕಾನೂನು ಮತ್ತು ಸಂಘಟಿತ ಪ್ರಯತ್ನವೇ ಇದಕ್ಕೆ ಮದ್ದು.

**ಮುನೀರ್ ಕಾಟಿಪಳ್ಳ,** ಡಿವೈಎಫ್ಐ ರಾಜ್ಯ ಘಟಕದ ಅಧ್ಯಕ್ಷ

## ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

**ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ**

**ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್** ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald-Prajavani Relief Trust’** ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

**‘Deccan Herald-Prajavani Relief Trust’**
*Canara Bank, Cantonment Branch*
*A/c no.* - **0404101200385**
*IFSC code* - **CNRB0000404**
*MICR Code* - **560015009**

**ಸೂಚನೆ:** ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

**ವಿಳಾಸ:** ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

### ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

## ವಿದ್ಯಾರ್ಥಿಗಳ ಅನಿಸಿಕೆ

### ಕಾಲೇಜು ಶುಲ್ಕ ಭರಿಸಿದೆ



ಕೋವಿಡ್‌ನಿಂದಾಗಿ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತು. ಇದರಿಂದ ಎಸ್ಸೆಸ್ಸೆಲ್ಸಿ ನಂತರ ಕಾಲೇಜು ಪ್ರವೇಶಾತಿಗೆ ಹಣದ ಸಮಸ್ಯೆ ಎದುರಾಗಿತ್ತು. ‘ಪ್ರಜಾವಾಣಿ’ಯ ಶೈಕ್ಷಣಿಕ ನೆರವಿನಿಂದ ಕಾಲೇಜು ಶುಲ್ಕ ಭರಿಸಲು ಅನುಕೂಲವಾಯಿತು. ಪ್ರಸ್ತುತ ವಿಜ್ಞಾನ ವಿಷಯದಲ್ಲಿ ಶಿಕ್ಷಣ ಮುಂದುವರಿಸಿದ್ದು, ಎಂಜಿನಿಯರ್ ಆಗುವ ಕನಸು ಹೊತ್ತಿದ್ದೇನೆ. ವಿದ್ಯಾರ್ಥಿವೇತನ ಸಂಕಷ್ಟದಲ್ಲಿ ನನ್ನನ್ನು ಪಾರು ಮಾಡಿತು. ಸಂಸ್ಥೆಗೆ ಧನ್ಯವಾದ.

**ಆರ್.ನವ್ಯಶ್ರೀ,** ಕೆ.ಆರ್.ಪುರ, ಬೆಂಗಳೂರು


### ವಿಜ್ಞಾನ ಪುಸ್ತಕಗಳನ್ನು ಖರೀದಿಸಿದೆ



ಶೈಕ್ಷಣಿಕ ನೆರವಿನ ಮೂಲಕ ಬಡ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿರುವ ‘ಪ್ರಜಾವಾಣಿ’ಗೆ ಧನ್ಯವಾದಗಳು. ಎಸ್ಸೆಸ್ಸೆಲ್ಸಿ ನಂತರ ವಿಜ್ಞಾನ ವಿಭಾಗಕ್ಕೆ ಸೇರಿದೆ. ಆದರೆ, ಪುಸ್ತಕಗಳನ್ನು ಖರೀದಿಸಲು ಹಣದ ಕೊರತೆ ಇತ್ತು. ನೆರವಿನ ಹಣದಿಂದ ಅಗತ್ಯ ಪುಸ್ತಕಗಳನ್ನು ಖರೀದಿಸಿದೆ. ಭವಿಷ್ಯದಲ್ಲಿ ಉತ್ತಮ ವೈದ್ಯನಾಗಬೇಕೆಂಬ ಗುರಿ ಇದೆ.

**ಎಚ್.ಎಸ್.ಚಂದು,** ನಂದಿನಿ ಬಡಾವಣೆ, ಬೆಂಗಳೂರು

## ವೀರೇಂದ್ರ ಹೆಗ್ಗಡೆ ಅವರಿಗೆ ಪ್ರಶಸ್ತಿ



**ಉಜಿರೆ:** ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೀಡುವ ‘ಶ್ರೀ ಭಗವಾನ್ ಮಹಾವೀರ ಶಾಂತಿ ರಾಷ್ಟ್ರೀಯ ಪ್ರಶಸ್ತಿ’ಗೆ ಆಯ್ಕೆ ಮಾಡಲಾಗಿದೆ.

ಇದೇ 18ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.


## 22ರಂದು ಶಿಕ್ಷಕರ ಅರ್ಹತಾ ಪರೀಕ್ಷೆ

**ಬೆಂಗಳೂರು:** ಈಗಾಗಲೇ ನಿಗದಿಪಡಿಸಿದಂತೆ ರಾಜ್ಯದಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಇದೇ 22ರಂದು ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ-2021) ನಡೆಯಲಿದ್ದು, ಕೋವಿಡ್ ಕಾರಣ ಕಂದಾಯ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಅನುಮತಿಯ ಜತೆಗೆ ಅಗತ್ಯ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ತಿಳಿಸಿದೆ.

ವಾರಾಂತ್ಯದ ಕರ್ಫ್ಯೂ ಹಾಗೂ ಸ್ಥಳೀಯ ನಿರ್ಬಂಧಗಳು ಜಾರಿಯಲ್ಲಿರುವ ಜಿಲ್ಲೆಗಳ ಪರೀಕ್ಷಾರ್ಥಿಗಳು ತಮ್ಮ ಅಧಿಕೃತ ಗುರುತಿನ ಚೀಟಿ ಹಾಗೂ ಟಿಇಟಿ ಪ್ರವೇಶ ಪತ್ರ ತೋರಿಸಿ, ಸ್ವಂತ ಅಥವಾ ಸಾರ್ವಜನಿಕ ವಾಹನಗಳಲ್ಲಿ ಪರೀಕ್ಷೆಗೆ ಹಾಜರಾಗಲು ಅವಕಾಶ ಕಲ್ಪಿಸಲಾಗಿದೆ.

ಪರೀಕ್ಷೆಯ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇಲ್ಲ. ಈ ಬಗ್ಗೆ ಪರೀಕ್ಷಾರ್ಥಿಗಳು ಯಾವುದೇ ಆತಂಕ, ಗೊಂದಲಕ್ಕೆ ಒಳಗಾಗದೆ, ಸೂಕ್ತ ಸಿದ್ಧತೆಗಳೊಂದಿಗೆ ಪರೀಕ್ಷೆಗೆ ಹಾಜರಾಗಲು ಇಲಾಖೆ ತಿಳಿಸಿದೆ.

## ನಿರ್ಮಾಪಕ ವಿಜಯ್ ಕುಮಾರ್ ನಿಧನ



**ಬೆಂಗಳೂರು:** ಚಂದನವನದ ಹಿರಿಯ ನಿರ್ಮಾಪಕ ಬಿ.ವಿಜಯ್ ಕುಮಾರ್ (63) ಅವರು ಭಾನುವಾರ ರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ದಿವಂಗತ ನಟ ವಿಷ್ಣುವರ್ಧನ್ ಅವರಿಗೆ ಆಪ್ತರಾಗಿದ್ದ ವಿಜಯ್ ಕುಮಾರ್, ‘ಲಯನ್ ಜಗಪತಿ ರಾವ್’, ‘ಸಿಂಹಾದ್ರಿಯ ಸಿಂಹ’, ‘ಅವತಾರ ಪುರುಷ’, ‘ಜಗದೇಕ ವೀರ’ ಸೇರಿದಂತೆ 15ಕ್ಕೂ ಅಧಿಕ ಸಿನಿಮಾಗಳನ್ನು ನಿರ್ಮಾಣ ಮಾಡಿದ್ದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿಯೂ ಇವರು ಕಾರ್ಯನಿರ್ವಹಿಸಿದ್ದರು. ಚಿತ್ರರಂಗದ ಜೊತೆಗೆ ರಾಜಕೀಯದಲ್ಲೂ ಸಕ್ರಿಯರಾಗಿದ್ದ ವಿಜಯ್‌ಕುಮಾರ್ ಅವರು ಕರ್ನಾಟಕ ರೇಷ್ಮೆ ಮಂಡಳಿಯ ಅಧ್ಯಕ್ಷರಾಗಿಯೂ ಆಯ್ಕೆಯಾಗಿದ್ದರು.

‘ವಿಜಯ್ ಕುಮಾರ್ ಅವರ ನಿಧನ ಚಿತ್ರರಂಗಕ್ಕೆ ದೊಡ್ಡ ನಷ್ಟ. ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಳಿಯ ಉಪಾಧ್ಯಕ್ಷರೂ ಆಗಿದ್ದರು. ರಾಜಕೀಯದಲ್ಲೂ ತೊಡಗಿಸಿಕೊಂಡಿದ್ದ ಅವರು ಜನಾನುರಾಗಿ’ ಎಂದು ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್.ಜೈರಾಜ್ ಸ್ಮರಿಸಿದರು.

# ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ: ವೃದ್ಧ ದಂಪತಿಗೆ ಗಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಜಯನಗರ ಠಾಣೆ ವ್ಯಾಪ್ತಿಯ ಹಂಪಿನಗರದಲ್ಲಿರುವ ಮನೆಯೊಂದರಲ್ಲಿ ಭಾನುವಾರ ತಡರಾತ್ರಿ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿ ಬೆಂಕಿ ಹೊತ್ತಿಕೊಂಡಿದ್ದು, ವೃದ್ಧ ದಂಪತಿ ಗಾಯಗೊಂಡಿದ್ದಾರೆ.

'ಎರಡು ಅಂತಸ್ತಿನ ಕಟ್ಟಡದ ಮೊದಲ ಮಹಡಿಯಲ್ಲಿರುವ ಮನೆಯಲ್ಲಿ ಈ ಅವಘಡ ಸಂಭವಿಸಿದೆ. ಗಾಯಗೊಂಡಿರುವ ನಿವಾಸಿ ಸೂರ್ಯನಾರಾಯಣ ಶೆಟ್ಟಿ (74) ಹಾಗೂ ಪತ್ನಿ ಪುಷ್ಪಾ (70) ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರಿಬ್ಬರ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೂರ್ಯನಾರಾಯಣ ದಂಪತಿ ಹಲವು ವರ್ಷಗಳಿಂದ ಮನೆಯಲ್ಲಿ ವಾಸವಿದ್ದರು. ಭಾನುವಾರ ತಡರಾತ್ರಿ 12.45ರ ಸುಮಾರಿಗೆ ಸ್ಫೋಟ ಸಂಭವಿಸಿ, ಬೆಂಕಿ ಹೊತ್ತಿಕೊಂಡಿತ್ತು. ಕೆಲ ನಿಮಿಷಗಳಲ್ಲೇ ಬೆಂಕಿ ಕೆನ್ನಾಲಗೆ ಇಡೀ ಮನೆ ಆವರಿಸಿತ್ತು. ವೃದ್ಧ ದಂಪತಿ ಮನೆಯಿಂದ ಹೊರಗೆ ಬರಲಾರದೇ ಕೂಗಾಡುತ್ತಿದ್ದರು.'

'ಸ್ಫೋಟದ ಸದ್ದು 2 ಕಿ.ಮೀ ಸುತ್ತಮುತ್ತ ಮನೆಗಳಿಗೂ ಕೇಳಿಸಿತ್ತು. ಆತಂಕಗೊಂಡ ಜನ, ಮನೆಯಿಂದ ಹೊರಗೆ ಬಂದಿದ್ದರು. ಸ್ಫೋಟ ಸಂಭವಿಸಿದ್ದ ಮನೆ ಬಳಿ ಬಂದಿದ್ದ ಕೆಲ ಸ್ಥಳೀಯರು, ವೃದ್ಧ ದಂಪತಿಯನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ದರು. ಸ್ಥಳಕ್ಕೆ ಬಂದ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ, ಬೆಂಕಿ ನಂದಿಸಿದರು' ಎಂದೂ ಮೂಲಗಳು ತಿಳಿಸಿವೆ.

'ಸ್ಫೋಟದಿಂದಾಗಿ ಮನೆಯಲ್ಲಿದ್ದ ಪೀಠೋಪಕರಣ, ಎಲೆಕ್ಟ್ರಾನಿಕ್ ವಸ್ತುಗಳು, ಬಟ್ಟೆಗಳು ಸುಟ್ಟಿವೆ. ಗೋಡೆಗಳಿಗೂ ಹಾನಿಯಾಗಿದೆ' ಎಂದೂ ಹೇಳಿವೆ.

**ಅಕ್ಕ–ಪಕ್ಕದ ಮನೆಗಳಿಗೂ ಹಾನಿ:** 'ಸ್ಫೋಟದಿಂದಾಗಿ ಅಕ್ಕ–ಪಕ್ಕದ ಮನೆಗಳ ಗೋಡೆಗಳಿಗೂ ಹಾನಿಯಾಗಿದೆ. ಮನೆ ಬಳಿ ಹಾದು ಹೋಗಿರುವ ವಿದ್ಯುತ್ ತಂತಿ ತುಂಡರಿಸಿದೆ. ಈ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ, ಸ್ಥಳೀಯರ ಹೇಳಿಕೆ ಪಡೆಯಲಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

## 'ಕಿಡಿಯಿಂದ ಬೆಂಕಿ'

'ಸೂರ್ಯನಾರಾಯಣ ಅವರ ಮನೆಯಲ್ಲಿ ವಿದ್ಯುತ್ ಚಾಲಿತ ದ್ವಿಚಕ್ರ ವಾಹನ, ಫ್ರಿಡ್ಜ್, ಫ್ಯಾನ್, ಅಡುಗೆ ಅನಿಲ ಸಿಲಿಂಡರ್ ಹಾಗೂ ಗ್ಯಾಸ್ ಗೀಸರ್ ಇದೆ. ಸ್ಫೋಟಕ್ಕೆ ಯಾವ ವಸ್ತು ಕಾರಣವೆಂಬುದನ್ನು ಪರಿಶೀಲಿಸಿದಾಗ, ಅಡುಗೆ ಅನಿಲ ಸೋರಿಕೆ ಕಾರಣ ಎಂಬುದು ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.


'ಅಡುಗೆ ಮನೆಯಲ್ಲಿದ್ದ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿತ್ತು. ಮನೆಯ ಹಲವು ಕೊಠಡಿಗಳಿಗೆ ಅನಿಲ ಆವರಿಸಿತ್ತು. ಫ್ರಿಡ್ಜ್ ಹಾಗೂ ಫ್ಯಾನ್‌ಗಳು ಆನ್ ಇದ್ದವು. ಸ್ವಿಚ್ ಬೋರ್ಡ್‌ನಲ್ಲಿ ಕಾಣಿಸಿಕೊಂಡ ಕಿಡಿಯಿಂದ ಬೆಂಕಿ ಹೊತ್ತಿಕೊಂಡು ಸ್ಫೋಟ ಸಂಭವಿಸಿರುವುದು ಮೇಲ್ನೋಟಕ್ಕೆ ತಿಳಿದುಬಂದಿದೆ' ಎಂದೂ ತಿಳಿಸಿದರು.

# ಕದ್ದ ವಾಹನಗಳಲ್ಲಿ ಸುತ್ತಾಡಿ ಸುಲಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾರ್ವಜನಿಕರ ವಾಹನಗಳನ್ನು ಕದ್ದು, ಅದರಲ್ಲೇ ನಗರದಲ್ಲಿ ಸುತ್ತಾಡಿ ಮೊಬೈಲ್ ಸುಲಿಗೆ ಮಾಡುತ್ತಿದ್ದ ಆರೋಪದಡಿ ನಾಲ್ವರನ್ನು ಅನ್ನಪೂರ್ಣೇಶ್ವರಿನಗರ ಪೊಲೀಸರು ಬಂಧಿಸಿದ್ದಾರೆ.

'ಆಕಾಶ್, ದೀಪಕ್, ವಿಜಯ್ ಹಾಗೂ ಮದನ್‌ಕುಮಾರ್ ಬಂಧಿತರು. ಅವರಿಂದ ₹ 3 ಲಕ್ಷ ಮೌಲ್ಯದ ನಾಲ್ಕು ದ್ವಿಚಕ್ರ ವಾಹನ ಹಾಗೂ 13 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.




ಆರೋಪಿಗಳಿಂದ ಜಪ್ತಿ ಮಾಡಲಾದ ದ್ವಿಚಕ್ರ ವಾಹನ ಹಾಗೂ ಮೊಬೈಲ್‌ಗಳು

'ಇದೇ 4ರಂದು ಠಾಣೆ ವ್ಯಾಪ್ತಿಯಲ್ಲಿ ಸಾರ್ವಜನಿಕರೊಬ್ಬರ ಮೊಬೈಲ್ ಸುಲಿಗೆ ಮಾಡಲಾಗಿತ್ತು. ನಾಲ್ವರು ಆರೋಪಿಗಳು, ಎರಡು ದ್ವಿಚಕ್ರ ವಾಹನದಲ್ಲಿ ಬಂದು ಕೃತ್ಯ ಎಸಗಿ ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣವೂ ದಾಖಲಾಗಿತ್ತು. ತನಿಖೆ ಕೈಗೊಂಡಾಗ ಸಿಕ್ಕ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

'ಠಾಣೆ ವ್ಯಾಪ್ತಿಯಲ್ಲಿ ಈ ಹಿಂದೆಯೂ ಆರೋಪಿಗಳು ಎರಡು ಕಡೆ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿವೆ.

## ₹ 15.50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

**ಬೆಂಗಳೂರು:** ಮಾದಕ ವಸ್ತು (ಡ್ರಗ್ಸ್) ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆ ಥಾಮಸ್ ಕಾಲು (47) ಎಂಬಾತನನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿ, ಡ್ರಗ್ಸ್ ಮಾರಾಟದಲ್ಲಿ ತೊಡಗಿಸಿಕೊಂಡಿದ್ದ. ಆತನಿಂದ ₹15.50 ಲಕ್ಷ ಮೌಲ್ಯದ ಎಕ್ಸ್‌ಟೆಸಿ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲ ಉದ್ಯಮಿಗಳು ಹಾಗೂ ಕೆಲ ಕಾಲೇಜು ವಿದ್ಯಾರ್ಥಿಗಳಿಗೆ ಆರೋಪಿ ಡ್ರಗ್ಸ್ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ' ಎಂದೂ ತಿಳಿಸಿವೆ.

### ವೃದ್ಧಾಶ್ರಮದ ಮುಖ್ಯಸ್ಥ ಸೇರಿ ಐವರ ಬಂಧನ

# ವೃದ್ಧೆಗೆ ಚಿತ್ರಹಿಂಸೆ, ಕತ್ತಲು ಕೋಣೆಯಲ್ಲಿ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಆರ್‌.ಎಂ.ಸಿ ಯಾರ್ಡ್ ಠಾಣೆ ವ್ಯಾಪ್ತಿಯಲ್ಲಿರುವ 'ಉಸಿರು ಫೌಂಡೇಷನ್' ವೃದ್ಧಾಶ್ರಮದ ಶಾಖೆಯಲ್ಲಿ ನಡೆದಿದ್ದ ವೃದ್ಧೆ ಕಮಲಮ್ಮ (82) ಕೊಲೆ ಪ್ರಕರಣ ಸಂಬಂಧ, ವೃದ್ಧಾಶ್ರಮದ ಮುಖ್ಯಸ್ಥ ಸೇರಿ ಐವರನ್ನು ಆರ್‌.ಎಂ.ಸಿ ಯಾರ್ಡ್ ಪೊಲೀಸರು ಬಂಧಿಸಿದ್ದಾರೆ.

'ಕಮಲಮ್ಮ ಅವರನ್ನು ಕತ್ತಲ ಕೋಣೆಯಲ್ಲಿ ಅಕ್ರಮ ಬಂಧನದಲ್ಲಿರಿಸಿ ಊಟ ನೀಡದೇ ಚಿತ್ರಹಿಂಸೆ ಕೊಡಲಾಗಿತ್ತು. ಕತ್ತಲು ಕೋಣೆಯಲ್ಲೇ ವೃದ್ಧೆ ಕೊಲೆಯಾಗಿತ್ತು. ಸಾಕ್ಷ್ಯ ನಾಶ ಮಾಡಲು ಯತ್ನಿಸಲಾಗಿತ್ತು. ಕಮಲಮ್ಮ ಅವರ ಮಗ ಜಿ.ಕೆ. ರಾಮಚಂದ್ರ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವೃದ್ಧೆಗೆ ಚಿತ್ರಹಿಂಸೆ ನೀಡಿದ್ದ ಆರೋಪದಡಿ 'ಉಸಿರು ಫೌಂಡೇಷನ್' ಮುಖ್ಯಸ್ಥ ಯೋಗೇಶ್, ನೌಕರರಾದ ಭಾಸ್ಕರ್, ಪ್ರೇಮಾ, ಮಂಜುನಾಥ್ ಹಾಗೂ ವೃದ್ಧೆಯನ್ನು ಕೊಲೆ ಮಾಡಿದ್ದ ಆರೋಪದಡಿ ವಸಂತಮ್ಮ ಎಂಬುವರನ್ನು ಬಂಧಿಸಲಾಗಿದೆ' ಎಂದೂ ಮೂಲಗಳು ಹೇಳಿವೆ.

**ವೃದ್ಧಾಶ್ರಮಕ್ಕೆ ಸೇರಿಸಿದ್ದ ಮಗ:** 'ಹಳೇ ಮದ್ರಾಸ್ ರಸ್ತೆ ಭಟ್ಟರಹಳ್ಳಿ ನಿವಾಸಿ ಜಿ.ಕೆ. ರಾಮಚಂದ್ರ, ತಮ್ಮ ತಾಯಿ ಕಮಲಮ್ಮ ಅವರನ್ನು ನಾಗರಬಾವಿಯಲ್ಲಿರುವ 'ಉಸಿರು ಫೌಂಡೇಷನ್' ವೃದ್ಧಾಶ್ರಮಕ್ಕೆ ಮಾರ್ಚ್‌ನಲ್ಲಿ ಸೇರಿಸಿದ್ದರು. ತಿಂಗಳಿಗೆ ₹ 10 ಸಾವಿರ ಪಾವತಿಸುತ್ತಿದ್ದರು. ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದ ಕಮಲಮ್ಮ, ಹೆಚ್ಚು ಕೂಗಾಡುತ್ತಿದ್ದರು. ಹೀಗಾಗಿ, ಅವರನ್ನು ಇತ್ತೀಚೆಗೆ ಆರ್‌.ಎಂ.ಸಿ ಯಾರ್ಡ್ ಠಾಣೆ ವ್ಯಾಪ್ತಿಯಲ್ಲಿರುವ ವೃದ್ಧಾಶ್ರಮದ ಮತ್ತೊಂದು ಶಾಖೆಗೆ ಸ್ಥಳಾಂತರಿಸಲಾಗಿತ್ತು.'

'ಕತ್ತಲು ಕೋಣೆಯಲ್ಲಿ ಕಮಲಮ್ಮ ಅವರನ್ನು ಅಕ್ರಮ ಬಂಧನದಲ್ಲಿರಿಸಿದ್ದ ಸಿಬ್ಬಂದಿ, ಎರಡು ದಿನಕೊಮ್ಮೆ ಊಟ ನೀಡುತ್ತಿದ್ದರು. ಮಾನಸಿಕ ಕಾಯಿಲೆ ಇದೆಯೆಂಬ ಕಾರಣಕ್ಕೆ ಚಿತ್ರಹಿಂಸೆ ಕೊಡುತ್ತಿದ್ದರು. ಅದೇ ಕತ್ತಲು ಕೋಣೆಯಲ್ಲೇ ಆರೋಪಿ ವಸಂತಮ್ಮ ಅವರನ್ನೂ ಇರಿಸಲಾಗಿತ್ತು. ಆಗಸ್ಟ್ 7ರಂದು ಊಟದ ವಿಚಾರಕ್ಕಾಗಿ ಇಬ್ಬರ ನಡುವೆ ಗಲಾಟೆ ಆಗಿತ್ತು. ಅದೇ ಸಂದರ್ಭದಲ್ಲೇ ವಸಂತಮ್ಮ, ಕಮಲಮ್ಮ ತಲೆಗೆ ಹೊಡೆದಿದ್ದರು. ಗಾಯಗೊಂಡು ತೀವ್ರ ರಕ್ತಸ್ರಾವವಾಗಿದ್ದರಿಂದ ಕಮಲಮ್ಮ ಕೋಣೆಯಲ್ಲಿ ಮೃತಪಟ್ಟಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಮೃತದೇಹವನ್ನು ಕೋಣೆಯಿಂದ ಬೇರೆಡೆ ಸಾಗಿಸಿದ್ದ ಸಿಬ್ಬಂದಿ, ಬಟ್ಟೆ ಬದಲಿಸಿದ್ದರು. ಕೋಣೆಯಲ್ಲಿದ್ದ ರಕ್ತದ ಕಲೆಗಳನ್ನು ಸ್ವಚ್ಛಗೊಳಿಸಿದ್ದರು. ಮಗ ರಾಮಚಂದ್ರ ಅವರಿಗೆ ಕರೆ ಮಾಡಿ, ಉಸಿರಾಟ ತೊಂದರೆಯಿಂದಾಗಿ ತಾಯಿ ತೀರಿಕೊಂಡಿರುವುದಾಗಿ ಸುಳ್ಳು ಹೇಳಿದ್ದರು.'

'ವೃದ್ಧಾಶ್ರಮಕ್ಕೆ ಬಂದಿದ್ದ ರಾಮಚಂದ್ರ, ತಾಯಿ ಮೃತದೇಹ ನೋಡಿದ್ದರು. ದೇಹದ ಮೇಲೆ ಗಾಯದ ಗುರುತುಗಳು ಕಂಡಿದ್ದವು. ಅನುಮಾನಗೊಂಡು ಠಾಣೆಗೆ ದೂರು ನೀಡಿದ್ದರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

## ವಿದ್ಯಾರ್ಥಿಗಳ ಉಚಿತ ಪ್ರಯಾಣಕ್ಕೆ ಅವಕಾಶ

**ಬೆಂಗಳೂರು:** ಆ.19ರಿಂದ ಸೆ.3ರವರೆಗೆ ನಡೆಯಲಿರುವ 2020–21ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಉಚಿತ ಪ್ರಯಾಣಕ್ಕೆ ಬಿಎಂಟಿಸಿ ಅವಕಾಶ ಕಲ್ಪಿಸಿವೆ.

'ಮನೆಯಿಂದ ಪರೀಕ್ಷಾ ಕೇಂದ್ರಕ್ಕೆ ಹೋಗುವಾಗ ಮತ್ತು ಹಿಂದಿರುಗುವಾಗ ಪ್ರವೇಶ ಪತ್ರಗಳನ್ನು ನಿರ್ವಾಹಕರಿಗೆ ತೋರಿಸಿ ಪ್ರಯಾಣಿಸಬಹುದು' ಎಂದು ಬಿಎಂಟಿಸಿ ಪ್ರಕಟಣೆ ತಿಳಿಸಿದೆ.

# ಅಫೀಮು ಮಾರಾಟ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉಪ್ಪಾರಪೇಟೆ ಠಾಣೆ ವ್ಯಾಪ್ತಿಯಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪದಡಿ ಪ್ರಕಾಶನಾಥ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಮಾದಕ ವಸ್ತು ಅಫೀಮನ್ನು ಸಂಗ್ರಹಿಸಿಟ್ಟುಕೊಂಡಿದ್ದ ಆರೋಪಿ ಮಾರಾಟ ಮಾಡಲು ಯತ್ನಿಸುತ್ತಿದ್ದ. ಆತನನ್ನು ಬಂಧಿಸಿ 430 ಗ್ರಾಂ ಅಫೀಮು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



ಆರೋಪಿ ಬಳಿ ಸಿಕ್ಕ ಅಫೀಮು ತುಂಬಿದ್ದ ಚೀಲ

'ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಅಫೀಮು ತಂದಿದ್ದ ಆರೋಪಿ, ಠಾಣೆ ವ್ಯಾಪ್ತಿಯಲ್ಲಿ ಗ್ರಾಹಕರಿಗಾಗಿ ಕಾಯುತ್ತ ನಿಂತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಯಿತು. ಹೊರ ರಾಜ್ಯದಿಂದ ಅಫೀಮು ತಂದು ನಗರದಲ್ಲಿ ಮಾರುತ್ತಿದ್ದ ಬಗ್ಗೆ ಆತ ಹೇಳಿಕೆ ನೀಡಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

### ಡಾ.ರಾಜ್‌ಕುಮಾರ್ ಕಲಿಕಾ ಆ್ಯಪ್ ಬಿಡುಗಡೆಗೊಳಿಸಿದ ಸಿ.ಎಂ

# 'ಮಕ್ಕಳಲ್ಲಿ ತಾರ್ಕಿಕ ಚಿಂತನೆ ಬೆಳೆಸಬೇಕು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮಕ್ಕಳಿಗೆ ಬೋಧನೆ ಮಾಡಿದರೆ ಪ್ರಯೋಜನವಿಲ್ಲ. ಅವರನ್ನು ಚಿಂತನೆಗೆ ಒಳಪಡಿಸಬೇಕು. ಆಗ ಕಲಿತದ್ದು ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತದೆ. ಸ್ಮರಣಶಕ್ತಿ ಹೆಚ್ಚುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಜ್‌ಕುಮಾರ್ ಅಕಾಡೆಮಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಜ್‌ಕುಮಾರ್ ಕಲಿಕಾ ಆ್ಯಪ್ ಬಿಡುಗಡೆಗೊಳಿಸಿ ಮಾತನಾಡಿದರು.

'ಯಾಕೆ, ಏನು, ಎಲ್ಲಿ, ಎಂತು, ಎಷ್ಟು? ಈ ಐದು ಮಂತ್ರಗಳನ್ನು ಇಟ್ಟುಕೊಂಡು ಮಕ್ಕಳಿಗೆ ಬೋಧನೆ ಮಾಡಬೇಕು. ಮಕ್ಕಳಲ್ಲಿ ತರ್ಕಬದ್ಧ ಚಿಂತನೆಯನ್ನು ಬೆಳೆಸಲು ಪ್ರಯತ್ನಿಸಬೇಕು. ಈ ಆ್ಯಪ್ ಮೂಲಕ ಇಡಿ ಭಾರತಕ್ಕೆ ಜ್ಞಾನ ಪಸರಿಸುವ ಕೆಲಸ ಆಗಲಿ' ಎಂದು ಹಾರೈಸಿದರು.

'ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದ್ದಾರೆ. ಕಲಾ ವಿದ್ಯಾರ್ಥಿಗಳು, ವಿಜ್ಞಾನವನ್ನು ಅಭ್ಯಸಿಸುವ, ವಿಜ್ಞಾನದ ವಿದ್ಯಾರ್ಥಿಗಳು ಕಲಾ ವಿಭಾಗದಲ್ಲಿ ಕಲಿಯುವ ಅವಕಾಶ ಈ ನೀತಿಯಲ್ಲಿದೆ. ಇದನ್ನು ಅಳವಡಿಸಿಕೊಂಡಿರುವ ಮೊದಲ ರಾಜ್ಯ ನಮ್ಮದು. ಈ ಆ್ಯಪ್ ನೂತನ ಶಿಕ್ಷಣ ನೀತಿಗೆ ಹೆಚ್ಚು ಉಪಯುಕ್ತವಾಗಲಿದೆ. ನಮ್ಮ ಸರ್ಕಾರದ ಸಂಪೂರ್ಣ ಬೆಂಬಲ ನಿಮಗಿರುತ್ತದೆ' ಎಂದು ತಿಳಿಸಿದರು.

**ಮುಖ್ಯಾಂಶಗಳು**

- 'ನೂತನ ಶಿಕ್ಷಣ ನೀತಿಗೆ ಈ ಆ್ಯಪ್ ಹೆಚ್ಚು ಉಪಯುಕ್ತ'
- 'ರಾಜ್‌ಕುಮಾರ್ ಅವರು ಸರಳತೆಯ ಪ್ರತಿರೂಪ'

'ಸರಸ್ವತಿಯ ವಾಹನ ಪರಮಹಂಸ. ಅಂತಹ ಪರಮಹಂಸವನ್ನು (ಆ್ಯಪ್) ನೀವು ಸೃಷ್ಟಿಮಾಡಿದ್ದೀರಿ. ಈ ಪರಮಹಂಸ ಮಾನಸ ಸರೋವರದಷ್ಟು ಎತ್ತರಕ್ಕೆ ಹೋಗಲಿ. ಮನಸ್ಸು ಮತ್ತು ಹೃದಯ ಪರಿಶುದ್ಧವಾಗಿರಬೇಕು. ಅಂತಹ ವಿದ್ಯಾರ್ಥಿಗಳೇ ಎತ್ತರದ ಸಾಧನೆ ಮಾಡಲು ಸಾಧ್ಯ. ಮಕ್ಕಳಲ್ಲಿ ನಾವು ಈ ಗುಣಗಳನ್ನೂ ಬೆಳೆಸಬೇಕು' ಎಂದು ಕಿವಿಮಾತು ಹೇಳಿದರು.

'ರಾಜ್‌ಕುಮಾರ್ ಅವರು ಧ್ರುವತಾರೆ ಇದ್ದಂತೆ. ಅವರು ಸರಳತೆಯ ಪ್ರತಿರೂಪ. ಮಗುವಿನಂತಹ ಮನಸ್ಸುಳ್ಳವರಾಗಿದ್ದರು. ನಟನಾಗಿಯಷ್ಟೇ ಅಲ್ಲ, ಸಹೃದಯಿಯಾಗಿ ಅವರು ಜನರ ಮನಸ್ಸಿನಲ್ಲಿ ಶಾಶ್ವತ ನೆಲೆ ಕಂಡುಕೊಂಡಿದ್ದಾರೆ' ಎಂದು ತಿಳಿಸಿದರು.

ನಟ ಪುನೀತ್ ರಾಜ್‌ಕುಮಾರ್ ,'ಯುವರಾಜ್‌ಕುಮಾರ್ ಹಾಗೂ ಅವರ ತಂಡದವರು ಸೇರಿ ಈ ಆ್ಯಪ್ ಆರಂಭಿಸಿದ್ದಾರೆ. ಇದು ಎಲ್ಲರಿಗೂ ತಲುಪಲಿ. ಎಲ್ಲರೂ ಇದರ ಪ್ರಯೋಜನ ಪಡೆದುಕೊಳ್ಳಲಿ. ಕೋವಿಡ್ ಪಿಡುಗು ಬೇಗನೆ ದೂರವಾಗಿ ಜನ ಜೀವನ ಸಹಜ ಸ್ಥಿತಿಗೆ ಮರಳಲಿ' ಎಂದರು.



ನಟ ರಾಘವೇಂದ್ರ ರಾಜ್‌ಕುಮಾರ್ ಮತ್ತು ಯುವ ರಾಜ್‌ಕುಮಾರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ರಾಜ್‌ಕುಮಾರ್ ಕುರಿತಾದ ಪುಸ್ತಕ ನೀಡಿ ಗೌರವಿಸಿದರು. ಪುನೀತ್ ರಾಜ್‌ಕುಮಾರ್ ಇದ್ದಾರೆ ಪ್ರಜಾವಾಣಿ ಚಿತ್ರ

## 'ಶಿಕ್ಷಣದ ತೇರನ್ನು ಜೊತೆಯಾಗಿ ಎಳೆಯೋಣ'

'ವಿದ್ಯೆಯೆಂಬುದು ಒಂದು ತೇರಾಗಿ ಬೆಳೆದಿದೆ. ಅದರ ಮೇಲೆ ಈ ಆ್ಯಪ್ ಕುಳಿತಿದೆ. ಈ ತೇರನ್ನು ಎಳೆದುಕೊಂಡು ವಿದ್ಯಾರ್ಥಿಗಳಿಗೆ ಮುಟ್ಟಿಸಬೇಕು. ಅದು ನಮ್ಮಿಂದಷ್ಟೆ ಸಾಧ್ಯವಿಲ್ಲ. ಇದಕ್ಕೆ ಎಲ್ಲರೂ ಕೈಜೋಡಿಸಬೇಕು. ಈ ತೇರಿಗೆ ಎಲ್ಲರೂ ಹೆಗಲು ನೀಡಬೇಕು' ಎಂದು ರಾಘವೇಂದ್ರ ರಾಜ್‌ಕುಮಾರ್ ತಿಳಿಸಿದರು.

'ಶಾಲೆಗೇ ಹೋಗದ ನನಗೆ ಡಾಕ್ಟರೇಟ್ ಪದವಿ ಏತಕ್ಕಾಗಿ ಕೊಟ್ಟರೊ ಗೊತ್ತಿಲ್ಲ ಎಂದು ತಂದೆಯವರು ಆಗಾಗ ಹೇಳುತ್ತಿದ್ದರು. ಮಕ್ಕಳ ಪೈಕಿ ಯಾರಾದರೊಬ್ಬರೂ ವೈದ್ಯರಾಗಬೇಕೆಂಬುದು ಅವರ ಬಯಕೆಯಾಗಿತ್ತು. ಆದರೆ ನಾವೆಲ್ಲ ನಟನಾ ಕ್ಷೇತ್ರಕ್ಕೆ ಕಾಲಿಟ್ಟೆವು. ನಮ್ಮೆಲ್ಲರ ಕನಸನ್ನು ಅಣ್ಣನ ಮಗಳು ನನಸಾಗಿಸಿದ್ದಾಳೆ' ಎಂದರು.

### ಮೈಸೂರು ರಸ್ತೆ ಕೆಂಗೇರಿ ಮೆಟ್ರೊ ಮಾರ್ಗಕ್ಕೆ ಸಿಆರ್‌ಎಸ್ ಅನುಮತಿ

# ಕೆಂಗೇರಿಗೆ ಸದ್ಯದಲ್ಲೇ ಮೆಟ್ರೊ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಮ್ಮ ಮೆಟ್ರೊ ರೀಚ್ –2 ವಿಸ್ತರಣೆ ಯೋಜನೆಯಲ್ಲಿ ಮೈಸೂರು ರಸ್ತೆ- ಕೆಂಗೇರಿ ನಡುವಿನ ಎತ್ತರಿಸಿದ ಮಾರ್ಗದಲ್ಲಿ ವಾಣಿಜ್ಯ ಕಾರ್ಯಾಚರಣೆ ಆರಂಭಿಸಲು ರೈಲ್ವೇ ಸುರಕ್ಷತಾ ಆಯುಕ್ತರಾದ ಅಭಯ್ ಕುಮಾರ್ ರೈ ಅನುಮತಿ ನೀಡಿದ್ದಾರೆ. ಈ ಮಾರ್ಗದಲ್ಲಿ ಈ ಮಾಸಾಂತ್ಯದೊಳಗೆ ಮೆಟ್ರೊ ಸೇವೆ ಆರಂಭವಾಗುವ ನಿರೀಕ್ಷೆ ಇದೆ.

ಈ ಮಾರ್ಗದಲ್ಲಿ ಪ್ರಯಾಣಿಕ ರೈಲು ಸಂಚಾರಕ್ಕೆ ರೈಲ್ವೆ ಸುರಕ್ಷತಾ ಆಯುಕ್ತರಿಂದ ಅನುಮತಿ ಸಿಗುತ್ತಿದ್ದಂತೆಯೇ ಈ ಮಾರ್ಗದ ಲೋಕಾರ್ಪಣೆಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯುವ ಪ್ರಕ್ರಿಯೆಯನ್ನು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಅಧಿಕಾರಿಗಳು ಆರಂಭಿಸಿದ್ದಾರೆ.

‘ಈ ಮಾರ್ಗದಲ್ಲಿ ಪ್ರಯಾಣಿಕರ ರೈಲು ಸಂಚಾರಕ್ಕೆ ರೈಲ್ವೆ ಸುರಕ್ಷತಾ ಆಯುಕ್ತರಿಂದ ಷರತ್ತುಬದ್ಧ ಅನುಮತಿ ಸೋಮವಾರ ಸಿಕ್ಕಿದೆ. ಕೆಲವೊಂದು ಸಲಹೆಗಳನ್ನೂ ಅವರು ನೀಡಿದ್ದಾರೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ ತಿಳಿಸಿದರು.

ಈ ಮಾರ್ಗದ ಲೋಕಾರ್ಪಣೆಗೆ ದಿನಾಂಕ ನಿಗದಿ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಈ ಕುರಿತು ಕೇಂದ್ರ ಹಾಗೂ ರಾಜ್ಯ ಸಚಿವಾಲಯಗಳನ್ನು ಸಂಪರ್ಕಿಸಬೇಕಿದೆ. ಶೀಘ್ರವೇ ದಿನಾಂಕ ನಿಗದಿಯಾಗುವ ನಿರೀಕ್ಷೆ ಇದೆ’ ಎಂದರು.

ವರಮಹಾಲಕ್ಷ್ಮಿ ಹಬ್ಬದ ಸಂದರ್ಭದಲ್ಲಿ ಈ ಮಾರ್ಗದ ಉದ್ಘಾಟನಾ ಸಮಾರಂಭ ಏರ್ಪಡಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿತ್ತು. ಆದರೆ, ಇನ್ನು ಉಳಿದಿರುವ ಅಲ್ಪಾವಧಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಗಣ್ಯರ ದಿನಾಂಕ ಹೊಂದಾಣಿಕೆ ಮಾಡುವುದು ಕಷ್ಟ. ಆದರೆ, ಆಗಸ್ಟ್ ಅಂತ್ಯದೊಳಗೆ ಈ ಮಾರ್ಗ ಲೋಕಾರ್ಪಣೆಯಾಗುವ ನಿರೀಕ್ಷೆ ಇದೆ ಎಂದು ನಿಗಮದ ಮೂಲಗಳು ತಿಳಿಸಿವೆ.

ಪೂರ್ವ– ಪಶ್ಚಿಮ ಕಾರಿಡಾರ್‌ನ ಈ ವಿಸ್ತರಿತ ಮಾರ್ಗದ ಒಟ್ಟು ಉದ್ದ 7.3 ಕಿ.ಮೀ. ಕೆಂಗೇರಿಯಿಂದ ಚಲ್ಲಘಟ್ಟ ಡಿಪೋವರೆಗಿನ 1.5 ಕಿ.ಮೀ ಉದ್ದದ ಎತ್ತರಿಸಿದ ಮಾರ್ಗದ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ನೇರಳೆ ಮಾರ್ಗದ ಮೈಸೂರು ರಸ್ತೆಯಿಂದ ಕೆಂಗೇರಿವರೆಗಿನ 6.2 ಕಿ.ಮೀ ಉದ್ದದ ಈ ವಿಸ್ತರಿತ ಮಾರ್ಗ ಆರು ನಿಲ್ದಾಣಗಳನ್ನು ಒಳಗೊಂಡಿದೆ. ಇದರ ಕಾಮಗಾರಿ ಎರಡು ವರ್ಷಗಳಿಗೆ ಮುನ್ನವೇ ಪೂರ್ಣಗೊಳ್ಳಬೇಕಿತ್ತು. ಕೋವಿಡ್ ಹಾಗೂ ಇತರ ಕಾರಣಗಳಿಂದಾಗಿ ಕಾಮಗಾರಿ ವಿಳಂಬವಾಗಿತ್ತು.

**ಅಂಕಿ-ಅಂಶಗಳು**

**₹1,560 ಕೋಟಿ**
ನಮ್ಮ ಮೆಟ್ರೊ ರೀಚ್–2 ಮಾರ್ಗದ ವಿಸ್ತರಣೆ ಯೋಜನೆಯ ಅಂದಾಜು ವೆಚ್ಚ

**₹360 ಕೋಟಿ**
ಈ ಯೋಜನೆಯ ಭೂಸ್ವಾಧೀನಕ್ಕೆ ತಗಲುವ ವೆಚ್ಚ

# ಮೆಕ್ಕೆಜೋಳ ಖರೀದಿಸಿ ವಂಚನೆ: ವ್ಯಕ್ತಿ ಸೆರೆ

ಪ್ರಜಾವಾಣಿ ವಾರ್ತೆ

**ದಾವಣಗೆರೆ:** ಮೆಕ್ಕೆಜೋಳ ಖರೀದಿಸಿ ನೀಡಿರುವ ₹10.63 ಕೋಟಿ ಮೊತ್ತದ ಚೆಕ್ ಬೌನ್ಸ್ ಆಗಿರುವ ಪ್ರಕರಣ ಸಂಬಂಧ ಪಯನಿಯರ್ ಫೀಡ್ಸ್ ಆ್ಯಂಡ್ ಪೌಲ್ಟ್ರಿ ಪ್ರಾಡಕ್ಟ್ ಪ್ರೈವೇಟ್ ಲಿಮಿಟೆಡ್‌ನ ಪಾಲುದಾರ ನಂದ ಕುಮಾರ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

2008ರಲ್ಲಿ ಹರಿಹರದ ದೋಸ್ತಾನಾ ಟ್ರೇಡರ್ಸ್ ಮಾಲೀಕ ಖಲೀಲ್ ದೋಸ್ತಾನಾ ಅವರ ಬಳಿ ₹ 1 ಕೋಟಿ ಮೌಲ್ಯದ ಮೆಕ್ಕೆಜೋಳವನ್ನು ನಂದಕುಮಾರ ಖರೀದಿಸಿದ್ದು, ಈ ಹಣಕ್ಕಾಗಿ ನೀಡಿದ ಚೆಕ್‌ಗಳು ಬೌನ್ಸ್ ಆಗಿವೆ. ಹಲವು ದಿನಗಳು ಕಳೆದರೂ ಹಣ ನೀಡಲಿಲ್ಲ. ಖಲೀಲ್ ಅವರು ನಂದಕುಮಾರ ವಿರುದ್ಧ ಹರಿಹರದ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಚೆಕ್ ಅಮಾನ್ಯ ಪ್ರಕರಣ ದಾಖಲಿಸಿದ್ದರು.

ನಂದಕುಮಾರಗೆ ಕೋರ್ಟ್ 33 ಬಾರಿ ವಾರೆಂಟ್ ಜಾರಿ ಮಾಡಿದ್ದರೂ ಹಾಜರಾಗದ ಕಾರಣ ಜುಲೈ 17ರಂದು ಮತ್ತೆ ಬಂಧನ ವಾರೆಂಟ್ ಜಾರಿ ಮಾಡಿತು. ಹರಿಹರ ನಗರ ಪೊಲೀಸ್ ಠಾಣೆಯ ಪಿಎಸ್‌ಐ ಸುನೀಲ್ ತೇಲಿ ಹಾಗೂ ಸಿಬ್ಬಂದಿ ಎಎಸ್‌ಐ ಮೈಕಲ್ ಆಂಥೋನಿ, ಸತೀಶ್, ಶಿವರಾಜ್ ಅವರನ್ನೊಳಗೊಂಡ ತಂಡ ನಂದಕುಮಾರನನ್ನು ತಮಿಳುನಾಡಿನ ತಿರುಪುರದಲ್ಲಿ ಬಂಧಿಸಿದೆ.

**ವಿವಿಧೆಡೆ ಪ್ರಕರಣ ದಾಖಲು**

ನಂದಕುಮಾರನು ಹರಿಹರ ಅಲ್ಲದೆ ದಾವಣಗೆರೆ, ಹೊನ್ನಾಳಿ, ರಾಣೆಬೆನ್ನೂರು, ಹಾವೇರಿ, ಬೆಂಗಳೂರು, ಶಿವಮೊಗ್ಗ, ಕೊಟ್ಟೂರು ವರ್ತಕರಿಂದ ₹ 10.63 ಕೋಟಿಗೂ ಹೆಚ್ಚು ಮೊತ್ತದ ಮೆಕ್ಕೆಜೋಳ ಖರೀದಿಸಿ, ನೀಡಿದ ಚೆಕ್‌ಗಳು ಬೌನ್ಸ್ ಆಗಿವೆ.

‘ರಾಜ್ಯದಾದ್ಯಂತ ಈತನ ಮೇಲೆ ಹಲವು ಪ್ರಕರಣಗಳು ದಾಖಲಾಗಿದ್ದು, ಈ ಬಗ್ಗೆ ಪರಿಶೀಲಿಸಲಾಗುವುದು. ಹೊರ ರಾಜ್ಯಗಳಲ್ಲೂ ಇದೇ ರೀತಿ ವಂಚನೆ ಮಾಡಿದ್ದು, ತನಿಖೆ ಪ್ರಗತಿಯಲ್ಲಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ.

# ವೈಟ್ ಟಾಪಿಂಗ್ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

**ರಾಜರಾಜೇಶ್ವರಿ ನಗರ:** ‘ಕಾಮಗಾರಿಗಳು ಉತ್ತಮ ಗುಣಮಟ್ಟದಿಂದ ಕೂಡಿರಬೇಕು ಮತ್ತು ಹಲವು ವರ್ಷ ಬಾಳಿಕೆ ಬರುವಂತೆ ನಡೆಯಬೇಕು. ಆಗ ಮಾತ್ರ ನಮ್ಮ ಕೆಲಸ ಜನರ ಮನಸ್ಸಿನಲ್ಲಿ ಉಳಿಯಲು ಸಾಧ್ಯ’ ಎಂದು ತೋಟಗಾರಿಕೆ ಸಚಿವ ಮುನಿರತ್ನ ಹೇಳಿದರು.

ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ ಬಿಬಿಎಂಪಿ ವತಿಯಿಂದ ₹26.50 ಕೋಟಿ ವೆಚ್ಚದಲ್ಲಿ ಮೈಸೂರು ರಸ್ತೆಯ ಪ್ರವೇಶ ದ್ವಾರದಿಂದ ಕೆಂಗೇರಿ–ಉತ್ತರಹಳ್ಳಿ ಮುಖ್ಯರಸ್ತೆಯವರೆಗೆ ವೈಟ್ ಟಾಪಿಂಗ್ ಕಾಮಗಾರಿಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ರಸ್ತೆಯ ನಡುವೆ ಹೂವು, ಹಣ್ಣು ಬಿಡುವ ಹಾಗೂ ಆರೋಗ್ಯವರ್ಧಕ ಮರಗಳನ್ನು ಬೆಳೆಸಬೇಕು. ಕಾಮಗಾರಿ ನಡೆಯುವ ಸಮಯದಲ್ಲಿ ಅಧಿಕಾರಿಗಳು ಪ್ರತಿದಿನ ಗಮನಹರಿಸಬೇಕು’ ಎಂದು ಸೂಚಿಸಿದರು.

ಬಿಬಿಎಂಪಿ ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್, ‘3.5 ಕಿ.ಮೀ ಉದ್ದದ ವೈಟ್ ಟಾಪಿಂಗ್ ರಸ್ತೆಯನ್ನು ಐದು ತಿಂಗಳ ಒಳಗೆ ಪೂರ್ಣಗೊಳಿಸಲಾಗುವುದು’ ಎಂದರು.

ರಾಜರಾಜೇಶ್ವರಿ ದೇವಸ್ಥಾನ ಸಮೀಪ ₹75 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಶಾಸಕರ ಕಚೇರಿಯನ್ನೂ ಮುನಿರತ್ನ ಉದ್ಘಾಟಿಸಿದರು.



ವೈಟ್ ಟಾಪಿಂಗ್ ಕಾಮಗಾರಿಗೆ ಸಚಿವ ಮುನಿರತ್ನ ಚಾಲನೆ ನೀಡಿದರು. ಬಿಜೆಪಿ ಮುಖಂಡರಾದ ವಿ.ಸಿ.ಚಂದ್ರು, ಎಂ.ಅರುಣ್ ಕುಮಾರ್, ದೇವರಾಜು, ರಾಜೇಶ್ , ನಳಿನಿ, ಜಿ.ಎಚ್.ರಾಮಚಂದ್ರ, ಹನುಮೇಗೌಡ ಹಾಗೂ ಇತರರು ಇದ್ದರು

## ಶಿರಾಡಿ ರಸ್ತೆ–ಲಘು ವಾಹನಗಳಿಗೆ ಮುಕ್ತ

ಪ್ರಜಾವಾಣಿ ವಾರ್ತೆ

**ಹಾಸನ:** ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿ ಘಾಟ್ ರಸ್ತೆಯಲ್ಲಿ ಹಗಲು ವೇಳೆ ಕಾರು, ಜೀಪು, ಟೆಂಪೋ, ದ್ವಿಚಕ್ರ ವಾಹನ, ಸಾರಿಗೆ ಬಸ್, ಅಂಬುಲೆನ್ಸ್, 20 ಟನ್ ಸಾಮರ್ಥ್ಯದ ಲಾರಿಗಳ ಸಂಚಾರಕ್ಕೆ ಜಿಲ್ಲಾಧಿಕಾರಿ ಆರ್.ಗಿರೀಶ್ ಅನುಮತಿ ನೀಡಿದ್ದಾರೆ.

ಟ್ಯಾಂಕರ್, ಕಾರ್ಗೋ ಕಂಟೇನರ್ ಸೇರಿದಂತೆ ಭಾರಿ ಗಾತ್ರದ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ಜುಲೈ ತಿಂಗಳಲ್ಲಿ ಸುರಿದ ಧಾರಾಕಾರ ಮಳೆಗೆ ದೋಣಿಗಾಲ್ ಬಳಿ ಭೂ ಕುಸಿತ ಉಂಟಾಗಿ, ಶಿರಾಡಿ ಘಾಟ್‌ನಲ್ಲಿ ಸಂಚಾರ ಬಂದ್ ಮಾಡಲಾಗಿತ್ತು. ರಸ್ತೆ ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ.

# ‘ತಿಗಳರ ಬೇಡಿಕೆಗಳಿಗೆ ಸ್ಪಂದಿಸಲು ಸಿದ್ಧ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಜಕೀಯ ಸ್ಥಾನಮಾನ ಇಲ್ಲದಿದ್ದರೆ ಧ್ವನಿ ಎತ್ತಲು ಸಾಧ್ಯವಿಲ್ಲ. ತಿಗಳ ಸಮುದಾಯದ ಬೇಡಿಕೆ, ನೋವುಗಳಿಗೆ ಸ್ಪಂದಿಸಲು ಕಾಂಗ್ರೆಸ್ ಸಿದ್ಧವಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದ ಸಿದ್ಧಾಪುರದಲ್ಲಿ ಸೋಮವಾರ ನಡೆದ ತಿಗಳ ಸಮುದಾಯದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಾನು ಚಿಕ್ಕಂದಿನಿಂದಲೂ ತಿಗಳ ಸಮುದಾಯದ ಜತೆ ಬೆರೆತು, ಬೆಳೆದವನು. ಹೀಗಾಗಿ ಈ ಸಮುದಾಯದ ಮೇಲೆ ನನಗೆ ಹೆಚ್ಚು ನಂಬಿಕೆ’ ಎಂದರು.

‘ಡಾ. ರಾಜ್ ಕುಮಾರ್ ಅವರನ್ನು ವೀರಪ್ಪನ್ ಅಪಹರಿಸಿದಾಗ, ಪೊಲೀಸ್ ಅಧಿಕಾರಿಗಳು ದಟ್ಟ ಕಾಡಿನಲ್ಲಿ ಹೋಗಲು ಹಿಂಜರಿಯುತ್ತಿದ್ದರು. ಆಗ ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ, ನಮ್ಮ ತಾಲ್ಲೂಕಿನಲ್ಲಿ ಶಿಕಾರಿ ಮಾಡುತ್ತಿದ್ದ ತಿಗಳ ಸಮುದಾಯದ ಸ್ನೇಹಿತರಿಗೆ ಗುರುತಿನ ಚೀಟಿ ಕೊಟ್ಟು ಕಾರ್ಯಾಚರಣೆಗೆ ಬಳಸಿಕೊಳ್ಳಲು ಸೂಚಿಸಿದ್ದರು. ಹೀಗೆ ತಿಗಳ ಸಮುದಾಯದವರು ಧೈರ್ಯವಂತರು ಹಾಗೂ ನಂಬಿಕಸ್ಥರು’ ಎಂದೂ ನೆನಪಿಸಿಕೊಂಡರು.

‘ಪ್ರವರ್ಗ 2ಎ ಮೀಸಲಾತಿಯಲ್ಲಿ ನ್ಯಾಯ ಸಿಗುತ್ತಿಲ್ಲ ಎಂಬುದು ನಿಮ್ಮ ನೋವು. ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ನೆರವು ಸಿಗಬೇಕು ಎನ್ನುವುದು ಬೇಡಿಕೆ. ಸಮುದಾಯದವರಾದ ಪಿ.ಆರ್. ರಮೇಶ್ ವಿಧಾನ ಪರಿಷತ್ ಸದಸ್ಯ. ಗುಣಶೇಖರ್, ಬಸವರಾಜ್, ಕೃಷ್ಣಮೂರ್ತಿ ಸೇರಿದಂತೆ ಇನ್ನೂ ಅನೇಕ ಸಮರ್ಥ ನಾಯಕರು ಸಮುದಾಯದಲ್ಲಿದ್ದಾರೆ. ಅವರೆಲ್ಲರನ್ನೂ ಸರಿಯಾಗಿ ಬಳಸಿಕೊಳ್ಳಬೇಕಿದೆ’ ಎಂದರು.

‘ಸರ್ಕಾರಿ ಕಾರ್ಯಕ್ರಮದಲ್ಲಿ ಹೂವಿನ ನಿಷೇಧ ನಿರ್ಧಾರದಿಂದ ಆಗಿರುವ ತೊಂದರೆ ಸೇರಿದಂತೆ ಅನೇಕ ನೋವು ಹಾಗೂ ಬೇಡಿಕೆ ಮುಂದಿಟ್ಟಿದ್ದೀರಿ. ಕೋವಿಡ್ ಸಮಯದಲ್ಲಿ ಈ ಸಮುದಾಯಕ್ಕೆ ಅನ್ಯಾಯವಾಗಿದೆ. ಕರಗ ಉತ್ಸವಕ್ಕೆ ಅನುದಾನ ಅಗತ್ಯವಿದೆ. ಮುಂದೆ ನಿಮ್ಮ ಜತೆಯಲ್ಲೇ ಇರುತ್ತೇನೆ. ಸಮುದಾಯಕ್ಕೆ ಅವಕಾಶ ನೀಡಲು ಪಕ್ಷದ ನಾಯಕರ ಜತೆ ಚರ್ಚೆ ಮಾಡುತ್ತೇನೆ’ ಎಂದು ಭರವಸೆ ನೀಡಿದರು.



ಕಾರ್ಯಕ್ರಮದಲ್ಲಿ ಪರಿಷತ್ ಸದಸ್ಯ ಪಿ.ಆರ್. ರಮೇಶ್, ನರೇಂದ್ರ ಬಾಬು, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕನಾಥ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಎಂ.ಡಿ. ಲಕ್ಷ್ಮೀ ನಾರಾಯಣ ಇದ್ದರು

## ‘ದಲಿತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ’

**ಬೆಂಗಳೂರು:** ‘ದಲಿತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಕೊಡುವ ವ್ಯವಸ್ಥೆ ಜಾರಿಗೊಳಿಸಲು ಚಿಂತನೆ ನಡೆಸಲಾಗಿದೆ’ ಎಂದು ಕೇಂದ್ರ ಸಮಾಜ ಕಲ್ಯಾಣ ಇಲಾಖೆ ಸಚಿವ ಎ.ನಾರಾಯಣ ಸ್ವಾಮಿ ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಕಾರ್ಯಾಲಯದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ವಿಷಯ ತಿಳಿಸಿದರು. ‘ದಲಿತರಲ್ಲಿ ಶೈಕ್ಷಣಿಕ ಕ್ರಾಂತಿ ತರಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ವಸತಿಯುತ ಶಾಲೆಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಅಲ್ಲದೆ, ಪ್ರತಿ ರಾಜ್ಯದಲ್ಲಿ 100 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಐಎಎಸ್ ಮಾಡಿಸಲು ಸಂಕಲ್ಪ ಮಾಡಿದ್ದೇವೆ’ ಎಂದರು.

84 ಲೋಕಸಭಾ ಕ್ಷೇತ್ರಗಳಲ್ಲಿ ಡಾ.ಅಂಬೇಡ್ಕರ್ ನವೋದಯ ವಸತಿ ಕಾಲೇಜುಗಳನ್ನು ಆರಂಭಿಸಲು ಸೂಚನೆ ನೀಡಲಾಗಿದೆ. ವೃದ್ಧಾಶ್ರಮ ಮತ್ತು ಇತರ ಹೆಸರಿನಲ್ಲಿ ಅನುದಾನ ದುರ್ಬಳಕೆಯನ್ನು ತಪ್ಪಿಸಲು ಸೂಚಿಸಲಾಗಿದೆ. ಇದನ್ನು ಇತರ ಇಲಾಖೆಗಳೂ ಅನುಸರಿಸಲಿವೆ ಎಂದು ನಾರಾಯಣಸ್ವಾಮಿ ತಿಳಿಸಿದರು.

‘ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದ ಸಂಸದರಿಗೆ ಕೇಂದ್ರ ಸಂಪುಟದಲ್ಲಿ ಪ್ರಧಾನಿ ಮೋದಿಯವರು ಹೆಚ್ಚಿನ ಅವಕಾಶ ಮಾಡಿಕೊಟ್ಟಿದ್ದಾರೆ. ಐದು ದಶಕಕ್ಕೂ ಹೆಚ್ಚು ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷ ದಲಿತರಿಗೆ ಅವಕಾಶವನ್ನೇ ನೀಡಲಿಲ್ಲ. ಆದರೆ ಈಗ ನಾಲ್ಕು ಮಂದಿ ದಲಿತರನ್ನು ರಾಜ್ಯಪಾಲರನ್ನಾಗಿ ಮಾಡಿ, 14 ಕ್ಕೂ ಹೆಚ್ಚು ಜನರನ್ನು ಸಂಪುಟಕ್ಕೆ ತೆಗೆದುಕೊಂಡಿದ್ದಾರೆ. ಈ ಮೂಲಕ ದಲಿತರು ಮತ್ತು ಹಿಂದುಳಿದವರ ಬಗ್ಗೆ ಬಿಜೆಪಿಗೆ ಇರುವ ಬದ್ಧತೆಯನ್ನು ಸಾಬೀತು ಮಾಡಿದ್ದಾರೆ’ ಎಂದು ಅವರು ಹೇಳಿದರು.

ಪಕ್ಷ ನಿಷ್ಠೆ, ದಕ್ಷ, ಪ್ರಾಮಾಣಿಕ, ಸಾಮಾಜಿಕ ಕಳಕಳಿ ಮತ್ತು ಹಿಂದುತ್ವದ ಪ್ರತಿಪಾದನೆಯ ಜತೆಗೆ ದೇಶದ ಕುರಿತು ಚಿಂತಿಸುವ ಕಾರ್ಯಕರ್ತರಿಗೆ ಊಹಿಸಲಾಗದ ಜವಾಬ್ದಾರಿಯನ್ನು ಪಕ್ಷ ನೀಡಿದೆ. ಬಿಜೆಪಿ ಬ್ರಾಹ್ಮಣರ ಪಕ್ಷ, ಗರ್ಭಗುಡಿಯ ರಾಜಕೀಯ ಮಾಡುವ ಪಕ್ಷ ಎಂಬ ಟೀಕೆಗಳು ಇದ್ದವು. ಎಲ್ಲ ಸಮುದಾಯವರ ಪಕ್ಷ ಎಂಬ ಹೆಗ್ಗಳಿಕೆಗೆ ಈಗ ಬಿಜೆಪಿ ಪಾತ್ರವಾಗಿದೆ ಎಂದರು.

# 1,500 ಕೆ.ಜಿ.ಗೂ ಅಧಿಕ ಸ್ಫೋಟಕ ವಶ

ಒಂದನೇ ಪುಟದಿಂದ...

30 ಕೆ.ಜಿ.ಲೆಡ್ ಬಾಲ್ಸ್, 240 ಕೆ.ಜಿ. ಚಾರ್ಕೋಲ್, ಏರ್ ರೈಫಲ್‌ನ ತಲಾ 100 ಪೆಲೆಟ್ ಒಳಗೊಂಡ 140 ಪ್ಯಾಕೇಟ್‌ಗಳು ಸೇರಿ ಒಟ್ಟು 1,500 ಕೆ.ಜಿ. ತೂಕದ ಸ್ಫೋಟಕ ವಶಪಡಿಸಿಕೊಳ್ಳಲಾಗಿದೆ. ಇದರ ಮೌಲ್ಯ ಅಂದಾಜು ₹ 1.11 ಲಕ್ಷ ಎಂದು ಪೊಲೀಸರು ತಿಳಿಸಿದ್ದಾರೆ.

ಕೊಠಡಿಯಲ್ಲಿ ಅಕ್ರಮವಾಗಿ ಸ್ಫೋಟಕಗಳನ್ನು ದಾಸ್ತಾನು ಇಟ್ಟಿರುವ ಮಾಹಿತಿ ಆಧರಿಸಿ ನಗರ ಕಾನೂನು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತ ಹರಿರಾಂ ಶಂಕರ್ ಪರಿಶೀಲಿಸಿದ್ದರು. ಗನ್ ಶಾಪ್ ಪರವಾನಗಿಗೂ ಪತ್ತೆಯಾದ ಸ್ಫೋಟಕಕ್ಕೂ ಸಂಬಂಧವಿಲ್ಲ. ಕೋರೆ, ಪಟಾಕಿ, ಬಾವಿಯ ಕಲ್ಲು ಸ್ಫೋಟಿಸಲು ಮತ್ತು ಮೀನು ಹಿಡಿಯಲು ಈ ಸ್ಫೋಟಕಗಳನ್ನು ಬಳಸಲಾಗುತ್ತಿತ್ತು.

ಆನಂದ್ ಗಟ್ಟಿಯನ್ನು ಕೋರ್ಟ್‌ಗೆ ಹಾಜರುಪಡಿಸಿದ್ದು, ಕೋರ್ಟ್ ಆರೋಪಿಯನ್ನು 10 ದಿನಗಳ ಅವಧಿಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ. ಸ್ಫೋಟಕ ಪೂರೈಕೆದಾರರು, ಇದರಲ್ಲಿ ಇನ್ನು ಯಾರೆಲ್ಲ ಶಾಮೀಲಾಗಿದ್ದಾರೆ ಎಂಬ ಕುರಿತು ತನಿಖೆ ನಡೆಯುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಸ್ಫೋಟಕ ವಸ್ತುಗಳನ್ನು ಈ ರೀತಿ ದಾಸ್ತಾನು ಮಾಡುವುದು ಆಂತರಿಕ ಭದ್ರತೆಗೆ ಸವಾಲಾಗಿದೆ. ಇಂತಹ ವಸ್ತುಗಳು ಸುಲಭವಾಗಿ ಸಿಕ್ಕರೆ, ದುರುಪಯೋಗವಾಗುವ ಸಾಧ್ಯತೆಗಳಿವೆ ಎಂದೂ ಅವರು ಹೇಳಿದ್ದಾರೆ



> ಮಕ್ಕಳ ವ್ಯಕ್ತಿತ್ವ ವಿಕಸನ ಎನ್ನುವಾಗ ಕೇವಲ ಬೌದ್ಧಿಕ ಬೆಳವಣಿಗೆಯಲ್ಲ; ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯವೂ ಸೇರಿದೆ. ದೃಢ ಶರೀರಕ್ಕೆ ಆಹಾರ–ವಿಹಾರಗಳು ಕಾರಣವಾದರೆ, ಮನಸ್ಸಿನ ಬೆಳವಣಿಗೆಗೆ ಆಚಾರ–ವಿಚಾರಗಳು ಕಾರಣ

## ಹಿರಿಯರ ವಿವೇಕದಲ್ಲಿದೆ ಮಕ್ಕಳ ಆರೋಗ್ಯ



ಡಾ. ವಿಜಯಲಕ್ಷ್ಮಿ ಪಿ.

'ಮಕ್ಕಳ ಸ್ಕೂಲ್ ಮನೇಲಲ್ವೇ' ಅಂದ್ರು ಕೈಲಾಸಂರವರು. ಅದು ಸಂಪೂರ್ಣವಾಗಿ ನಿಜವಾಗಿ ಅನುಸರಿಸುವ ಕಾಲ ಈಗ. ಮಕ್ಕಳನ್ನು ಮನೆ ಬಿಟ್ಟು ಎಲ್ಲಿಗೂ ಹೊರಗೆ ಕಳುಹಿಸಬೇಡಿ, ಶಾಲೆಗೂ ಸಹಿತ – ಎಂದು ವಿಜ್ಞಾನಿಗಳಿಂದ ಹಿಡಿದು ರಾಜಕಾರಣಿಗಳವರೆಗೂ ಹೇಳುತ್ತಿದ್ದಾರೆ. ಪಾಠಕ್ಕೆ ಬೇಡ, ಆಟಕ್ಕಾದರೂ ಕರೆದುಕೊಂಡು ಹೋಗೋಣ ಎಂದರೆ ಅಟದ ಮೈದಾನಗಳೇ ಬಾಗಿಲು ಮುಚ್ಚಿ ಕೂತಿವೆ. ಇದರಿಂದಾಗಿ ಕೈಲಾಸಂ ಹೇಳಿದ್ದು ಸಂಪೂರ್ಣ ಸತ್ಯ ಆಗುತ್ತಿರುವಂತಿದೆ.

ಹಿಂದೆ ಪ್ರತಿಯೊಂದು ಕುಟುಂಬಕ್ಕೂ ಅದರದ್ದೇ ಆದ ವೃತ್ತಿ ಇತ್ತು. ಹಾಗಾಗಿ ಮನೆಯಲ್ಲಿ ಇದ್ದರೂ ಕೂಡ ವೃತ್ತಿಕಲಿಕೆಗೆ ಏನೂ ತೊಂದರೆ ಆಗುತ್ತಿರಲಿಲ್ಲ. ಆದರೆ ಈಗ ಹಾಗಲ್ಲ. ಆದ್ದರಿಂದ ಪೋಷಕರಿಗೂ ಮಕ್ಕಳನ್ನು ಮನೆಯಲ್ಲೇ ಭವಿಷ್ಯಕ್ಕಾಗಿ ತಯಾರು ಮಾಡುವುದು ಹೇಗೆ ಎನ್ನುವ ಚಿಂತೆ. ಇದಕ್ಕಾಗಿಯೇ ಬೇರೆ ಬೇರೆ ರೀತಿಯ ಕಲಿಕಾ ವಿಧಾನಗಳು ಬಂದರೂ ಅದರಲ್ಲಿ ನುರಿತವರೇ ತರಬೇತಿ ಕೊಡಬೇಕಾದಂತಹ ಪರಿಸ್ಥಿತಿ. ಈಗ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ತಂದೆ ತಾಯಿಯರೇ ತರಬೇತಿ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಮಕ್ಕಳ ವ್ಯಕ್ತಿತ್ವ ವಿಕಸನ ಎನ್ನುವಾಗ ಕೇವಲ ಬೌದ್ಧಿಕ ಬೆಳವಣಿಗೆಯಲ್ಲ; ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯವೂ ಸೇರಿದೆ. ದೃಢ ಶರೀರಕ್ಕೆ ಆಹಾರ–ವಿಹಾರಗಳು ಕಾರಣವಾದರೆ, ಮನಸ್ಸಿನ ಬೆಳವಣಿಗೆಗೆ ಆಚಾರ–ವಿಚಾರಗಳು ಕಾರಣ. ಹಾಗಾಗಿ ಈಗ ಪೋಷಕರ ಜವಾಬ್ದಾರಿ ಹೆಚ್ಚು. ಮಕ್ಕಳು ಹೇಳಿಕೊಟ್ಟದ್ದನ್ನು ಅನುಸರಿಸುವುದಕ್ಕಿಂತ ನೋಡಿ ತಿಳಿದು ಅನುಸರಿಸುವುದೇ ಹೆಚ್ಚು. ಹಾಗಾಗಿ ಪೋಷಕರು, ಹಿರಿಯರು ಮನೆಯಲ್ಲಿ ಶಿಸ್ತಿನಿಂದಿರಬೇಕಾದ್ದು ಅತ್ಯಂತ ಆವಶ್ಯಕ.

ಮನೆಯಲ್ಲೇ ಇರುತ್ತೇವೆ ಎಂದು ಬೆಳಗ್ಗೆ ಹೆಚ್ಚು ಹೊತ್ತಿನವರೆಗೂ ಮಲಗಿರುವುದು, ಮಕ್ಕಳನ್ನು ಮಲಗಲು ಬಿಡುವುದು – ಹೀಗೆ ಮಾಡುವುದರಿಂದ ರೋಗನಿರೋಧಕ ಶಕ್ತಿ ಕುಂದುತ್ತದೆ. ಆದ್ದರಿಂದ ಮಕ್ಕಳಲ್ಲಿ ವ್ಯಾಧಿಕ್ಷಮತ್ವ ಹೆಚ್ಚಿಸಲು ಮೊದಲು ಸೂರ್ಯೋದಯದ ಹೊತ್ತಿಗೆ ಏಳುವುದನ್ನು ಅವರಿಗೆ ಅಭ್ಯಾಸ ಮಾಡಿಸಬೇಕು. ನಿದ್ರೆ ಕಡಿಮೆಯಾದರೆ ಎಷ್ಟು ತೊಂದರೆ ಆಗುತ್ತದೆಯೋ, ಅತಿ ನಿದ್ರೆ ಅದಕ್ಕಿಂತಲೂ ಹೆಚ್ಚು ತೊಂದರೆಯನ್ನು ಕೊಡುತ್ತದೆ. ಬಾಲ್ಯದಲ್ಲಿಯೇ ಥೈರಾಯ್ಡ್, ಮಧುಮೇಹ ಇತ್ಯಾದಿ ರೋಗಗಳ ಉತ್ಪತ್ತಿಗೆ ಅದು ಕಾರಣವಾಗುತ್ತದೆ.

ಕೋವಿಡ್‌ನಿಂದ ದೂರವಿರಬೇಕೆಂದು ಅನೇಕ ಬಗೆಯ ಕಷಾಯಗಳನ್ನು ಮಕ್ಕಳಿಗೆ ಕೊಡುವುದಕ್ಕಿಂತ, ಬೆಳಗ್ಗೆ ಬೇಗ ಎದ್ದು ನಿತ್ಯಕರ್ಮಗಳನ್ನು ಮುಗಿಸಿ, ಸ್ವಲ್ಪ ಹೊತ್ತು ವ್ಯಾಯಾಮ ಮಾಡಿ ಎಣ್ಣೆ ಹಚ್ಚಿ ಸ್ನಾನ ಮಾಡಿ ನಂತರ ಆಹಾರ ಸೇವಿಸುವುದನ್ನು ಮಕ್ಕಳಿಗೆ ಅಭ್ಯಾಸ ಮಾಡಿಸಿದರೆ ಹಲವು ರೋಗಗಳಿಂದ ಅವರನ್ನು ದೂರವಿರಿಸಲು ಸಾಧ್ಯ. ವ್ಯಾಯಾಮವು ಶರೀರಬಲದೊಡನೆ ಕೆಲಸ ಮಾಡುವ ಸಾಮರ್ಥ್ಯವನ್ನೂ ಹೆಚ್ಚಿಸಿ, ಮನೋಬಲ ಇಂದ್ರಿಯ ಪಾಟವವನ್ನೂ ಹೆಚ್ಚಿಸುತ್ತದೆ.

ಅಕಾಲದಲ್ಲಿ, ಅತಿಯಾಗಿ, ಪದೇಪದೇ ಸೇವಿಸುವ ಆಹಾರದಿಂದ ಉತ್ಪನ್ನವಾಗುವ ರೋಗಗಳನ್ನು ಯಾವ ಕಷಾಯವೂ ಕಡಿಮೆ ಮಾಡಲಾಗದು. ಕಷಾಯ ಕುಡಿಯುತ್ತಿದ್ದೆ, ಕೋವಿಡ್ ಬರಲ್ಲ ನಮಗೆ – ಎನ್ನುವ ಧೋರಣೆಯಲ್ಲಿ ಆಹಾರವನ್ನು ನಿಯಮ ಮೀರಿ ಸೇವಿಸಿದರೆ ಕೋವಿಡೇತರ ಹಲವು ರೋಗಗಳ ಉತ್ಪತ್ತಿಗೆ ನಾವೇ ಕಾರಣರಾಗುತ್ತೇವೆ. ರೋಗನಿರೋಧಕತೆಯನ್ನು ಹೆಚ್ಚಿಸುತ್ತದೆ ಎಂದು ಅತಿಯಾಗಿ ಒಣಹಣ್ಣು, ಎಣ್ಣೆಬೀಜಗಳಾದ ಗೋಡಂಬಿ, ಬಾದಾಮಿ ಇತ್ಯಾದಿಗಳನ್ನು ಅತಿಯಾಗಿ ಸೇವಿಸಿದರೆ ಅಮ್ಲಪಿತ್ತ ಹೆಚ್ಚಾಗುತ್ತದೆ; ತೂಕ ಹೆಚ್ಚಾಗುವುದು; ಜೀರ್ಣಕ್ರಿಯೆಗೆ ಸಂಬಂಧಿಸಿದ ಇನ್ನೂ ಅನೇಕ ರೋಗಗಳ ಉತ್ಪತ್ತಿ ಆಗುತ್ತವೆ. ಸಮಯಕ್ಕೆ ಸರಿಯಾಗಿ, ನಿಯಮಿತವಾಗಿ, ಪೌಷ್ಟಿಕ ಆಹಾರವನ್ನು ಸೇವಿಸುವುದು, ಬಿಸಿ ಆಹಾರ ಸೇವಿಸುವುದು, ಆಯಾಯ ಪ್ರದೇಶಗಳಲ್ಲಿ ಸಾಂಪ್ರದಾಯಿಕವಾಗಿರುವ ಆಹಾರಸೇವನೆ, ಆಯಾಯ ಋತುಗಳಲ್ಲಿ ಸಿಗುವ ಆಹಾರಪದಾರ್ಥಗಳನ್ನು ಹಿತವಾಗಿ ಮಿತವಾಗಿ ಸೇವಿಸುವುದು – ಇದನ್ನು ಹಿರಿಯರೂ ಸಹ ಪಾಲಿಸಿದರೆ ಮಕ್ಕಳು ಅದನ್ನೇ ಅನುಸರಿಸಿ ಆರೋಗ್ಯಭಾಗ್ಯವನ್ನು ಪಡೆಯುತ್ತಾರೆ. ಹೆಚ್ಚು ಆಹಾರವನ್ನು ತಯಾರಿಸಿ, ಅದನ್ನು ತಂಪುಪೆಟ್ಟಿಗೆಯಲ್ಲಿಟ್ಟು ಪದೇ ಪದೇ ಬಿಸಿಮಾಡಿ ಆಹಾರವನ್ನು ಸೇವಿಸುವುದರಿಂದ ದೈಹಿಕ ಆರೋಗ್ಯ ಹಾಳಾಗುತ್ತದೆ; ಮನಸ್ಸಿನ ಆರೋಗ್ಯವೂ ಹಾಳಾಗಿ, ಖಿನ್ನತೆಯೇ ಮುಂತಾದ ತೊಂದರೆಗಳಿಗೆ ಕಾರಣವಾಗುತ್ತದೆ.

ಶಾಲೆ ಇಲ್ಲದೆ, ಮೊಬೈಲು–ಕಂಪ್ಯೂಟರ್‌ಗಳೇ ಶಾಲೆಗಳಾಗಿರುವಾಗ ಜಾಲತಾಣಗಳಿಂದ ದೂರವಿರಿ ಎನ್ನುವುದು ದೂರದ ಮಾತೇ ಸರಿ. ಆದರೆ ಇದರಿಂದಾಗುವ ತೊಂದರೆಗಳನ್ನು ಕಡಿಮೆ ಮಾಡಲು, ನಿತ್ಯವೂ ಬೆಳಗ್ಗೆ ಕಣ್ಣಿಗೆ ತುಪ್ಪ ಅಥವಾ ಕೊಬ್ಬರಿಯೆಣ್ಣೆಯನ್ನು ಹಚ್ಚಿಕೊಳ್ಳುವುದು, ಮೂಗಿನ ಹೊಳ್ಳೆಗಳ ಒಳಗೆ ತುಪ್ಪ ಅಥವಾ ಕೊಬ್ಬರಿಯೆಣ್ಣೆ ಹಚ್ಚುವುದು ನೆಗಡಿಯಿಂದ ದೂರವಿರಿಸುತ್ತದೆ. ಜೊತೆಗೆ ಕಣ್ಣಿಗೆ ಮತ್ತು ಇತರೆ ಇಂದ್ರಿಯಗಳಿಗೂ ರಕ್ಷಣೆ ಕೊಡುತ್ತದೆ. ತಲೆನೋವು ಬಾರದಂತೆಯೂ ತಡೆಯುತ್ತದೆ. ಕೊಬ್ಬರಿಯೆಣ್ಣೆ ಅಥವಾ ಎಳ್ಳೆಣ್ಣೆಯಿಂದ ಬಾಯಿ ಮುಕ್ಕಳಿಸುವುದರಿಂದ, ಹಲ್ಲು ಹುಳುಕಾಗುವುದು, ವಸಡುಗಳಲ್ಲಿ ರಕ್ತಬರುವುದು, ಬಾಯಿಹುಣ್ಣುಗಳನ್ನು ತಡೆಗಟ್ಟಬಹುದು; ನಾಲಿಗೆಯ ರುಚಿ ಹಾಳಾಗದಂತೆಯೂ ಇದು ಕಾಪಾಡುತ್ತದೆ.

ಪೋಷಕರು ಜವಾಬ್ದಾರಿಯಿಂದ ವರ್ತಿಸಬೇಕು. ಆ ಮೂಲಕ, ಮನೆಯೇ ಮೊದಲ ಪಾಠಶಾಲೆ, ತಾಯಿ ತಾನೆ ಮೊದಲ ಗುರುವು – ಎನ್ನುದನ್ನು ಸಾರ್ಥಕ ಮಾಡೋಣ. ❖

## ಬೇಡ ಭಯದ ಭಯ



ಡಿ. ಎಂ. ಹೆಗಡೆ

**ನಮಗೆಲ್ಲರಿಗೂ** ಒಂದಲ್ಲ ಒಂದು ಭಯ ಇದ್ದದ್ದೇ. ಹುಲಿಯ ಭಯ ಸಹಜವೆನ್ನುತ್ತೀರಾದರೂ ಕೆಲವರಿಗೆ ಜಿರಳೆಯ ಭಯ. ಇನ್ನೊಬ್ಬರಿಗೆ ಹಾವಿನ ಭಯ. ಮತ್ತೊಬ್ಬರಿಗೆ ಎತ್ತರದ ಭಯ. ಬಹಳಷ್ಟು ಜನರಿಗೆ ರೋಗದ ಭಯ. ವೃದ್ಧಾಪ್ಯದ ಭಯ. ಸಾವಿನ ಭಯ. ಯಾವುದೇ ಭಯ ಇಲ್ಲದವನಿಗೂ ಹೆಂಡತಿಯ ಭಯ ಇದ್ದೇ ಇರುತ್ತದೆ ಎಂದು ನನ್ನ ಗುರುಗಳು ಗಹಗಹಿಸಿ ನಗುತ್ತಾರೆ! ಭಯವಿಲ್ಲದವರು ಇಲ್ಲಿ ಯಾರೂ ಬದುಕಿಲ್ಲ! ಆದರೆ ಅನಿಯಂತ್ರಿತ ಭಯದಿಂದ ಬಳಲುವುದಿದೆಯಲ್ಲ, ಅದೊಂದು ಹೇಳಿಕೊಳ್ಳಲಿಕ್ಕಾಗದ ಯಾತನೆ.

ಇತ್ತೀಚೆಗಂತೂ ನಮಗಷ್ಟೇ ಅಲ್ಲ ಭಯ ಇಡೀ ಜಗತ್ತನ್ನೇ ಆವರಿಸಿದೆ. ಎಲ್ಲರಿಗೂ ಕೊರೊನಾ ಭಯ. ಬಂದಲ್ಲಿ. ಹೋದಲ್ಲಿ. ಇದ್ದಲ್ಲಿ. ಭಯವೋ ಭಯ. ಲಸಿಕೆ ಹಾಕಿಕೊಂಡವರನ್ನೂ ಕೂಡ ಸಂಪೂರ್ಣವಾಗಿ ಭಯವು ಬಿಟ್ಟಿಲ್ಲ. ಕೋವಿಡ್‌ಗೆ ಬಲಿಯಾದವರ ಕುಟುಂಬಸ್ಥರನ್ನು ಆವರಿಸಿರುವ ಭಯದ ತೀವ್ರತೆಯನ್ನು ಮಾತಲ್ಲಿ ಹೇಳಲಿಕ್ಕಾಗದು.

ಭಯ ಎನ್ನುವುದು ಮನುಷ್ಯನ ಮನಸ್ಸಿನ ಏಳು ಮೂಲಭೂತ ಭಾವನೆಗಳಲ್ಲಿ ಒಂದು. ಹಾಗಾಗಿ ಸಿಟ್ಟು, ಸಿಡುಕು, ಸಂತೋಷಗಳಂತೆಯೇ ಭಯವು ಸಹ ಎಲ್ಲ ಮನುಷ್ಯರಲ್ಲಿಯೂ ಇರುತ್ತದೆ. ಭಯ ಹಲವರಲ್ಲಿ ಸಹಜವಾಗಿ ಎನ್ನುವಂತಿದ್ದರೆ, ಕೆಲವರಲ್ಲಿ ಅದು ಅಸಹಜ ಎನ್ನುವಷ್ಟರ ಮಟ್ಟಿಗೆ ವ್ಯಕ್ತವಾಗುತ್ತದೆ. ಹೀಗಾದಾಗ ಅದು ಅವರಿಗೂ, ಅವರ ಮನೆಯವರಿಗೂ ಸಮಸ್ಯೆಯಾಗಿ ಪರಿಣಮಿಸುತ್ತದೆ.

ಭಯವು ದೈಹಿಕವಾಗಿಯೂ ಮಾನಸಿಕವಾಗಿಯೂ ಭಾವನಾತ್ಮಕವಾಗಿಯೂ ಇರಬಹುದು. ಕೆಲವೊಮ್ಮೆ ಭಯವು ನಿಜವಾಗಿದ್ದರೂ ಬಹಳ ಸಲ ಭಯ ಎನ್ನುವುದು ಕೇವಲ ನಮ್ಮ ಅತಿರಂಜಿತ ಕಲ್ಪನೆಯಾಗಿರುತ್ತದೆ.

> ಭಯವು ದೈಹಿಕವಾಗಿಯೂ ಮಾನಸಿಕವಾಗಿಯೂ ಭಾವನಾತ್ಮಕವಾಗಿಯೂ ಇರಬಹುದು. ಕೆಲವೊಮ್ಮೆ ಭಯವು ನಿಜವಾಗಿದ್ದರೂ ಬಹಳ ಸಲ ಭಯ ಎನ್ನುವುದು ಕೇವಲ ನಮ್ಮ ಅತಿರಂಜಿತ ಕಲ್ಪನೆಯಾಗಿರುತ್ತದೆ.

ಯಾವುದೇ ರೀತಿಯದ್ದಾಗಿದ್ದರೂ ಕೂಡ, ನಮ್ಮ ಮೇಲೆ ಭಯದ ಪರಿಣಾಮವು ಮಾತ್ರ ಅಗಾಧವಾಗಿರುತ್ತದೆ, ಅಸಹನೀಯವಾಗಿರುತ್ತದೆ. ಸಾಮಾನ್ಯವಾಗಿ ಭಯವನ್ನು ಎಲ್ಲರೂ ಋಣಾತ್ಮಕ ಭಾವನೆ ಎನ್ನುತ್ತಾರೆ. ನಿಜಕ್ಕೂ ಅದು ಹಾಗಲ್ಲ. ಭಯವು ನಮ್ಮನ್ನು ಬಹಳ ಸಂದರ್ಭಗಳಲ್ಲಿ, ಮರುಕ್ಷಣದಲ್ಲಿ ಆಗಬಹುದಾಗಿದ್ದ ನಿಜವಾದ ಅಪಾಯದಿಂದ ಪಾರುಮಾಡುತ್ತದೆ. ಅಪಾಯದ ಸುಳಿವು ಸಿಕ್ಕ ಕ್ಷಣಾರ್ಧದಲ್ಲಿ ಮನಸ್ಸಿನೊಳಗಿಂದ ಭಯವು ಜಾಗೃತವಾಗಿದ್ದರಿಂದ, ಅರೆಕ್ಷಣದಲ್ಲಿ ಅಪಾಯದಿಂದ ಬಚಾವಾದ ಸಂದರ್ಭಗಳು ಇಷ್ಟರಲ್ಲಾಗಲೇ ನಿಮಗೆ ನೆನಪಾಗಿರಲಿಕ್ಕೆ ಸಾಕು. ಭಯದಿಂದ ಬದುಕಿಗೆ ಉಪಕಾರವಾದ ಘಟನೆಗಳು ಬಹುತೇಕ ಎಲ್ಲರ ಜೀವನದಲ್ಲಿಯೂ ಇರುತ್ತವೆ. ಆದರೂ ಭಯವೆಂದರೆ ಭಯವೇ!

ಚಿಕ್ಕ ಪುಟ್ಟ ಕಾರಣಗಳಿಗೂ ಮಕ್ಕಳನ್ನು ಭೂತ, ಪ್ರೇತ, ಪಿಶಾಚಿ, ಗುಮ್ಮ, ಕಳ್ಳ, ಪೊಲೀಸ್ ಮುಂತಾದ ಉದಾಹರಣೆಗಳನ್ನು ಕೊಟ್ಟು ಹೆದರಿಸುವುದರಿಂದ ಮಕ್ಕಳ ಮನಸ್ಸಿನಲ್ಲಿ ಭಯದ ಬೀಜವು ಮೊಳಕೆಯೊಡೆದು, ಸಸಿಯಾಗಿ ಮುಂದೆ ಹುಲುಸಾದ ಮರವಾಗಿ ಬೆಳೆಯುತ್ತದೆ. ಸುಪ್ತಮನಸ್ಸಿನಲ್ಲಿ ಹುಟ್ಟಿ, ಬೆಳೆದುಕೊಂಡಿರುವ ಭಯವು ಅನಿರಕ್ಷಿತವಾಗಿ, ಅನಗತ್ಯ ಸಂದರ್ಭಗಳಲ್ಲಿ ವ್ಯಕ್ತವಾಗುವುದರಿಂದ ಅನಾಹುತಗಳಾಗುತ್ತವೆ. ಅದಕ್ಕೆ ವಯಸ್ಸಿನ ಹಂಗೇನಿಲ್ಲ. ಇವೆಲ್ಲವೂ ವ್ಯಕ್ತಿಯ ಮನಸ್ಸಿನೊಳಗಿನ ಕಾಲ್ಪನಿಕ ಭಯವು ವ್ಯಕ್ತವಾಗಿದ್ದರಿಂದಲೇ ಆಗುತ್ತಿರುತ್ತದೆ. ಏನೇನೋ ಆಟಾಟೋಪಗಳನ್ನು ಮಾಡುತ್ತದೆ. ಹಾಗಾದಾಗ ವ್ಯಕ್ತಿಯು ಮನಸ್ಸಿನ ಮೇಲೆ ತನ್ನ ನಿಯಂತ್ರಣವನ್ನು ಕಳೆದುಕೊಳ್ಳುತ್ತಾನೆ. ಆವಾಗ ಹಸಿವಾದರೂ ಆಹಾರ ಸೇರುವುದಿಲ್ಲ. ಅಥವಾ ತಿಂದಷ್ಟೂ ಸಾಕಾಗುವುದಿಲ್ಲ. ನಿದ್ರೆ ಬರುವುದಿಲ್ಲ. ಇದರಿಂದಾಗಿ ಆರೋಗ್ಯವು ಹದಗೆಡುತ್ತದೆ. ವ್ಯಕ್ತಿಯ ದೈನಂದಿನ ಬದುಕು ಹಳಿ ತಪ್ಪುತ್ತದೆ.

ಭಯ, ಆತಂಕ, ಕೋಪಗಳಷ್ಟೆ ಅಲ್ಲ – ಯಾವುದೇ ಭಾವನೆಯಾದರೂ ನಮ್ಮ ದೈನಂದಿನ ಜೀವನದಲ್ಲಿ ಸಮಸ್ಯೆಯಾಗುತ್ತಿದ್ದರೆ ತಕ್ಷಣವೇ ತಜ್ಞರನ್ನು ಭೇಟಿಯಾಗಬೇಕು. ಮನಸ್ಸಿನಲ್ಲಿ ಆಲೋಚನೆಗಳ ಹೋಯ್ದಾಟ, ತೊಳಲಾಟ, ಖಿನ್ನತೆ ಯಾರೊಂದಿಗೂ ಹೇಳಿಕೊಳ್ಳಬಾರದ ಗುಟ್ಟಲ್ಲ. ಅದೇನೋ ಗುಣಪಡಿಸಲಾಗದ ಮಹಾರೋಗವಂತೂ ಅಲ್ಲವೇ ಅಲ್ಲ. ಮನಸ್ಸಿನ ಅನಾರೋಗ್ಯವೂ ಕೆಲವು ಸಲ ತಾತ್ಕಾಲಿಕವಾಗಿರುತ್ತದೆ, ಸರಿಪಡಿಸಬಹುದಾಗಿರುತ್ತದೆ. ಮನಸ್ಸಿನಲ್ಲಿ ಯಾವುದಾದರೂ ಭಾವನೆಯನ್ನು ಬಹಳ ಕಾಲ ಬಲವಂತವಾಗಿ ಅದುಮಿಟ್ಟುಕೊಳ್ಳುವುದರಿಂದ ಯಾವತ್ತೋ ಅನಿರೀಕ್ಷಿತವಾಗಿ ಅದು ತೀವ್ರಸ್ವರೂಪದಲ್ಲಿ - ಜ್ವಾಲಾಮುಖಿಯ ಹಾಗೆ ಸ್ಫೋಟಗೊಳ್ಳುತ್ತದೆ. ಆಗ ವ್ಯಕ್ತಿಯ ನಿಯಂತ್ರಣವನ್ನು ಕಳೆದುಕೊಳ್ಳುತ್ತಾನೆ. ಹಾಗಾಗದಂತೆ ಪ್ರಾರಂಭದಲ್ಲಿಯೇ ಎಚ್ಚರಿಕೆಯನ್ನು ವಹಿಸುವುದು ಬಹಳ ಜಾಣತನ.

ಸಮತೋಲನವಾದ ಆಹಾರ, ಸಂತೋಷದಾಯಕವಾದ ಆಚಾರ, ಧನಾತ್ಮಕವಾದ ವಿಚಾರ, ಸಾಕಷ್ಟು ದೈಹಿಕ ಶ್ರಮ, ನಿಯಮಿತವಾದ ವ್ಯಾಯಾಮಗಳಿಂದ ಸಮಾಧಾನದ ಬದುಕನ್ನು ಬದುಕಬಹುದಾಗಿದೆ. ❖

## ಸಿಇಟಿ ದಿಕ್ಸೂಚಿ

# Physics – Mechanical properties of Solids & Fluids

1. Two wires A and B are stretched by the same load. If the area of cross-section of wire 'A' is double that of 'B', then the stress on 'B' is
   (1) Equal to that on A
   (2) Twice that on A
   (3) Half that on A
   (4) Four times that on A

2. Young's modulus of a perfect rigid body is
   (1) Zero (2) Unity
   (3) Infinity
   (4) Between Zero and Unity

3. The following four wires of length L and radius r are made of the same material. Which of these will have the largest extension, when the same tension is applied? [KCET-2011]
   (1) L = 100 cm, r = 0.2 mm
   (2) L = 200 cm, r = 0.4 mm
   (3) L = 300 cm, r = 0.6 mm
   (4) L = 400 cm, r = 0.8 mm

4. A spring is stretched by applying a load to its free end. The strain produced in the spring is
   (1) Volumetric
   (2) Shear
   (3) Longitudinal & Shear
   (4) Longitudinal

5. A wire is stretched such that its volume remains constant. The Poission's ratio of the material of the wire is
   (1) 0.25 (2) 0.50
   (3) – 0.25 (4) – 0.50

6. 'Young's modulus' is defined as the ratio of
   (1) tensile stress and longitudinal strain
   (2) hydraulic stress and hydraulic strain
   (3) shearing stress and shearing strain
   (4) bulk stress and longitudinal strain

7. Iceberg floats in water with part of it submerged. What is the fraction of the volume of iceberg submerged if the density of ice is $\rho_i = 0.917\ g\ cm^{-3}$ ?
   (1) 0.917 (2) 1
   (3) 0.458 (4) 0

8. The pressure at the bottom of a liquid tank is not proportional to the
   (1) Acceleration due to gravity
   (2) Density of the liquid
   (3) Height of the liquid
   (4) Area of the liquid surface

9. Eight equal drops of water are falling through air with a steady velocity of $10\ cm\ s^{-1}$. If the drops combine to form a single drop big in size, then the terminal velocity of this big drop is [KCET-2011]
   (1) $40\ cm\ s^{-1}$ (2) $10\ cm\ s^{-1}$
   (3) $30\ cm\ s^{-1}$ (4) $80\ cm\ s^{-1}$


10. Two capillary tubes of different diameters are dipped in water. The rise of water is
   1) The same in both tubes
   2) Greater in the tube of larger diameter
   3) Greater in the tube of smaller diameter
   4) Independent of the diameter of the tube

11. A flow of liquid is streamline if the Reynold number is
   (1) Less than 1000
   (2) Greater than 1000
   (3) Between 2000 to 3000
   (4) Between 4000 to 5000

12. In anomalous expansion of water, at what temperature, the density of water is maximum?
   (1) $4^0$ C (2) $< 4^0$ C
   (3) $> 4^0$ C (4) $10^0$ C


13. Two solids P & Q float in water. It is observed that P floats with half of its volume immersed and Q floats with $\frac{2}{3}$rd of its volume immersed. The ratio of densities of P and Q is
   1) 4/3 2) 3/4
   3) 2/3 4) 3/2

14. An ideal fluid flow through a pipe of the circular cross-section with diameters 5 cm and 10 cm as shown. The ratio of velocities of fluid at A and B is




   (1) 4 : 1 (2) 1 : 4
   (3) 2 : 1 (4) 1 : 2

15. A cylindrical container containing water has a small hole at height of H = 8 cm from the bottom and at a depth of 2 cm from the top surface of the liquid. The maximum horizontal distance travelled by the water before it hits the ground (x) is




   (1) 4 cm (2) 8 cm
   (3) 6 cm (4) 4 2 cm

16. An aluminium sphere is dipped into water. Which of the following is true?
   (1) Buoyancy in water at 0 °C will be same as that in water at 4 °C
   (2) Buoyancy will be less in water at 0 oC than that in water at 4 oC
   (3) Buoyancy may be more or less in water at 4 oC depending on the radius of the sphere
   (4) Buoyancy will be more in water at 0 °C than that in water at 4 $^0$C

17. 'Hydraulic lift' works on the basis of
   (1) Stoke's law (2) Toricelli's law
   (3) Pascal's Law (4) Bernoulli's Law

18. Spheres of iron and lead having same mass are completely immersed in water. Density of lead is more than that of iron. Apparent loss of weight is $W_1$ for iron sphere and $W_2$ for lead sphere. Then $\frac{W_1}{W_2}$ is
   (1) = 1 (2) between 0 and 1
   (3) = 0 (4) > 1

19. The ratio of hydraulic stress to the corresponding strain is known as
   (1) Compressibility (2) Bulk modulus
   (3) Young's modulus (4) Rigidity modulus

### Answers

1. Answer (2)
   Solution:
   $$Stress = \frac{Force}{Area}$$

2. Answer: (3)
   Sol:Young's modulus of a perfect rigid body is infinity.

3. Answer: (1)
   Sol.: Extension of wire $e = \frac{FL}{AY}$
   $$e = \frac{FL}{\pi r^2 Y}$$
   F & Y are same for all wires
   $$e \propto \frac{L}{r^2}$$
   $$e_a = \frac{1000}{0.2 \times 0.2} = 25000$$
   $$e_b = \frac{2000}{0.4 \times 0.4} = 12500$$
   $$e_c = \frac{4000}{0.6 \times 0.6} = 8333.4$$
   $$e_d = \frac{4000}{0.8 \times 0.8} = 6250$$
   We can see that, first wire have the largest extension

4. Answer: (2)
   Hint: Poisson's ratio of a stable, isotropic, linear elastic material lies in the range $-1 < \sigma < 0.5$, theoretically. For most of the materials $\sigma < 0.5$. This is because, moduli of elasticity should have positive values. Negative Poisson's ratio in DESIGNED materials and in some anisotropic materials has been observed. ∴For most of the materials $\sigma < 0.5$.∴option (B) is correct.

5. Answer: (2)

6. Answer: (1)

7. Answer: (1)




   Sol:
   $\rho_i = 0.917\ g/cm^3$
   $V\rho_i g = V'.\rho g$
   $$\Rightarrow \frac{V'}{V} = \frac{\rho_i}{\rho} = 0.917$$

8. Answer: (4)
   Independent of area

9. Answer: (1)
   Sol.: Here, $v \propto r^2$
   $$\frac{v_1}{v_2} = \frac{r_1^2}{8^{2/3}.r^2}$$
   $$\frac{10}{v_2} = \frac{1}{4}$$
   $$v_2 = 40 cm/s$$

10. Answer: (3)
   Sol.: Height of water in capillary tube
   $$h = \frac{2T}{rdg}$$
   $$h \propto \frac{1}{r}$$
   When h is height of the liquid and r is radius of tube so we can say that the rise of water is greater in the tube of smaller diameter.

11. Answer: (1)
   Hint:The Reynolds number is the ration of inertial forces to viscous forces. It predicts weather the flow will laminar or turbulent. A flow of liquid is streamline if the Reynolds number should be less than 2000. Therefore. From the given options, only option (1) satisfies the condition. Thus a flow of liquid is streamline if the Reynolds number is less than 1000.

12. Answer: (1)
   Hint:The anomalous expansion of water is a special property of water where on raising the temperature water contract instead of expanding. In anomalous expansion of water, the density of water is maximum at $4^0$C

13. Answer: (2)
   $$Sol: \frac{\rho_P}{\rho_W} = \frac{\frac{V}{2}}{V} = \frac{1}{2}, \frac{\rho_Q}{\rho_W} = \frac{\frac{2}{3}V}{V} = \frac{2}{3}$$
   $$\therefore \frac{\rho_P}{\rho_Q} = \frac{3}{4}$$

14. Answer: (1)
   Sol. $D_A = 5cm$, $D_B = 10cm$
   From continuity equation
   $A_1V_1 = A_2V_2$
   Where,
   $V_1 = V_A$
   $V_2 = V_B$
   $[\pi D^2_A / 4] V_A = [\pi D^2_B / 4] V_B$
   $V_A / V_B = D^2_B / D^2_A = 10^2 / 5^2$
   On solving
   $V_A / V_B = 4 / 1$

15. Answer: (2)
   Hint: $v = \sqrt{2gh} = \sqrt{\frac{4}{10}} m/s$
   $$t = \sqrt{\frac{2H}{g}} = \frac{4}{10\sqrt{10}} s$$
   $R = vt = 8cm.$

16. Answer: (2)
   Hint: Concept based

17. Answer: (3)
   Sol: Pascal's law

18. Answer: (4)
   **Sol:-** $\rho_l > \rho_i$
   Loss of weight = Buoyancy force
   $m_{lead} = m_{iron}$
   $\rho_{lead} V_{lead} = \rho_{iron} V_{iron}$
   $V_{iron} > V_{lead}$
   $W_1 = \rho_{water} V_{iron} g$
   $W_2 = \rho_{water} V_{lead} g$
   $\Rightarrow W_1 > W_2$

19. Answer: (2)
   Hint :The ratio of hydraulic stress to the corresponding strain is known so bulk modulus.
   $$Bulk\ modulus [k] = \frac{hydraulic\ stress}{strain}$$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

## ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

**ಭಾಗ- 42**

**561. ಕಾಳುಮೆಣಸು ಸಿಗುವುದು ಯಾವುದರಿಂದ?**
ಎ) ಮರ ಬಿ) ಗಿಡ
ಸಿ) ಪೊದೆ ಡಿ) ಬಳ್ಳಿ

**562. ಸೋಲಿಗರು ವಾಸವಿರುವ ಜಿಲ್ಲೆ**
ಎ) ಚಾಮರಾಜನಗರ ಬಿ) ಬೆಳಗಾವಿ
ಸಿ) ಚಿತ್ರದುರ್ಗ ಡಿ) ಬಾಗಲಕೋಟೆ

**563. ಪಿಎಸ್‌ಐ ಸಮವಸ್ತ್ರದಲ್ಲಿ ಎಷ್ಟು ನಕ್ಷತ್ರಗಳು ಇರುತ್ತವೆ?**
ಎ) 1 ಬಿ) 2 ಸಿ) 3 ಡಿ) ಇರುವುದಿಲ್ಲ

**564. ಸ್ಪೇನ್‌ನ ರಾಷ್ಟ್ರೀಯ ಕ್ರೀಡೆ**
ಎ) ಬ್ಯಾಡ್ಮಿಂಟನ್ ಬಿ) ರಗ್ಬಿ ಸಿ) ಹಾಕಿ ಡಿ) ಗೂಳಿ ಕಾಳಗ

**565. ರೆಡ್ ಇಂಡಿಯನ್ನರು ಎಲ್ಲಿ ಕಾಣಸಿಗುತ್ತಾರೆ?**
ಎ) ಭಾರತ ಬಿ) ವೆಸ್ಟ್‌ಇಂಡೀಸ್ ಸಿ) ಉತ್ತರ ಅಮೆರಿಕಾ ಡಿ) ನ್ಯೂಜಿಲ್ಯಾಂಡ್

**566. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ ಜಾರಿಗೆ ತಂದವರು**
ಎ) ಲಾರ್ಡ್ ಡಾಲ್ ಹೌಸಿ ಬಿ) ಲಾರ್ಡ್ ವೆಲ್ಲೆಸ್ಲಿ
ಸಿ) ಲಾರ್ಡ್ ಮಿಂಟೋ ಡಿ) ಲಾರ್ಡ್ ಕರ್ಜನ್

**567. 'ಮಾಡು ಇಲ್ಲವೇ ಮಡಿ' ಎಂಬ ಘೋಷಣೆ ಮಾಡಿದವರು ಯಾರು?**
ಎ) ಸುಭಾಷ್ ಚಂದ್ರ ಬೋಸ್ ಬಿ) ಜೆ.ಬಿ.ಕೃಪಲಾನಿ ಸಿ) ಮಹಾತ್ಮಾ ಗಾಂಧಿ ಡಿ) ಜವಾಹರಲಾಲ್ ನೆಹರು

**568. 2ನೇ ದುಂಡು ಮೇಜಿನ ಸಮ್ಮೇಳನದಲ್ಲಿ ಕಾಂಗ್ರೆಸ್ ಪ್ರತಿನಿಧಿ ಯಾರಾಗಿದ್ದರು?**
ಎ) ಮೋತಿಲಾಲ್ ನೆಹರು ಬಿ) ಬಾಬಾಸಾಹೇಬ್ ಅಂಬೇಡ್ಕರ್
ಸಿ) ಜವಾಹರಲಾಲ್ ನೆಹರು ಡಿ) ಮಹಾತ್ಮಾ ಗಾಂಧಿ

**569. ಮೆಗಾಸ್ಥನೀಸ್ ಭಾರತಕ್ಕೆ ಬಂದದ್ದು ಈತನ ಕಾಲದಲ್ಲಿ**
ಎ) ಚಂದ್ರಗುಪ್ತ ಮೌರ್ಯ ಬಿ) ಹರ್ಷವರ್ಧನ
ಸಿ) ಅಶೋಕ ಡಿ) ಎರಡನೇ ಚಂದ್ರಗುಪ್ತ

**570. ಈ ಕೆಳಗಿನ ಭಾರತದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಯಾರು ದಕ್ಷಿಣ ಆಫ್ರಿಕಾದಲ್ಲಿ ನಾಗರಿಕ ಹಕ್ಕುಗಳ ಕಾರ್ಯಕರ್ತರಾಗಿದ್ದರು?**
ಎ) ವಿನಾಯಕ್ ದಾಮೋದರ್ ಸಾವರ್ಕರ್
ಬಿ) ಮಹಾತ್ಮಾ ಗಾಂಧಿ ಸಿ) ಬಾಲ ಗಂಗಾಧರ ತಿಲಕ್
ಡಿ) ಮೋತಿಲಾಲ್ ನೆಹರು

**571. ಈ ಕೆಳಗಿನ ಯಾವ ಸ್ವಾತಂತ್ರ್ಯ ಹೋರಾಟಗಾರರನ್ನು ಭಾರತದ ಅನಧಿಕೃತ ರಾಯಭಾರಿ ಎಂದೂ ಕರೆಯುತ್ತಾರೆ?**
ಎ) ತಾತ್ಯಾ ಟೋಪಿ ಬಿ) ಕುನ್ವರ್ ಸಿಂಗ್
ಸಿ) ದಾದಾಭಾಯಿ ನೌರೋಜಿ ಡಿ) ಡಬ್ಲ್ಯೂಸಿ ಬ್ಯಾನರ್ಜಿ

**572. ಈ ಕೆಳಗಿನವರಲ್ಲಿ ಯಾರನ್ನು ಬ್ರಿಟಿಷರು ಭಾರತೀಯ ಅಶಾಂತಿಯ ಪಿತಾಮಹ ಎಂದು ಪರಿಗಣಿಸಿದ್ದರು..?**
ಎ) ಗೋಪಾಲ ಕೃಷ್ಣ ಗೋಖಲೆ ಬಿ) ಲೋಕಮಾನ್ಯ ತಿಲಕ್
ಸಿ)ಲಾಲಾ ಲಜಪತ್ ರಾಯ್
ಡಿ) ಮದನ್ ಮೋಹನ್ ಮಾಳವೀಯ

**573. ಬಾಲ ಗಂಗಾಧರ ತಿಲಕರು ಆರಂಭಿಸಿದ ಕೇಸರಿ ಪತ್ರಿಕೆ ಯಾವ ಭಾಷೆಯಲ್ಲಿ ಪ್ರಕಟವಾಯಿತು?**
ಎ) ಮರಾಠಿ ಬಿ) ಹಿಂದಿ ಸಿ) ಆಂಗ್ಲ ಡಿ) ಮರಾಠಿ ಮತ್ತು ಆಂಗ್ಲ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

**ಭಾಗ 41ರ ಉತ್ತರಗಳು:** 546. ಬಿ, 547. ಎ, 548. ಬಿ, 549. ಸಿ, 550. ಎ, 551. ಸಿ, 552. ಡಿ, 553. ಡಿ, 554. ಸಿ, 555. ಬಿ, 556. ಸಿ, 557. ಸಿ, 558. ಬಿ, 559. ಡಿ, 560. ಡಿ



## ಸುಭಾಷಿತ

ಅಂಜುಬುರುಕತನದಂತೆ ಶೌರ್ಯವೂ ಸಾಂಕ್ರಾಮಿಕವಾದುದು.

-ಮುನ್ಷಿ ಪ್ರೇಮ್‌ಚಂದ್

# ಸ್ವಾಗತಾರ್ಹ ಗುಜರಿ ನೀತಿ ಪರಿಣಾಮಕಾರಿ ಅನುಷ್ಠಾನ ಬೇಕು

**ಹಳೆಯ** ವಾಹನಗಳನ್ನು ಗುಜರಿಗೆ ಹಾಕಲು ಅಗತ್ಯವಾದ ನೀತಿಯೊಂದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವಾರ ಅನಾವರಣಗೊಳಿಸಿದ್ದಾರೆ. ವಾಣಿಜ್ಯ ಉದ್ದೇಶದ ಹಾಗೂ ವೈಯಕ್ತಿಕ ಬಳಕೆಯ ವಾಹನಗಳಿಗೆ ಅನ್ವಯ ಆಗುವ ಈ ನೀತಿಯನ್ನು ಆಟೊಮೊಬೈಲ್ ಉದ್ಯಮವು ಸ್ವಾಗತಿಸಿದೆ. ಇದು ದೇಶದ ವಾಹನ ಉದ್ಯಮ ವಲಯದಲ್ಲಿ ಮಹತ್ವದ, ಬಹುನಿರೀಕ್ಷಿತ ಬದಲಾವಣೆಗಳನ್ನು ತರಬಲ್ಲದು ಎಂದು ಪ್ರಮುಖ ಕಂಪನಿಗಳು ಹೇಳಿವೆ. ಹೊಸ ನೀತಿಯ ಬಗ್ಗೆ ಕೆಲವು ವಲಯಗಳಲ್ಲಿ ಅನುಮಾನ, ಆತಂಕ ವ್ಯಕ್ತವಾಗಿರುವುದೂ ಇದೆ. ಪರಿಸರದ ಮೇಲೆ ಆಗಬಹುದಾದ ಪೂರಕ ಪರಿಣಾಮ, ಇಂಧನ ಬಳಕೆ ತುಸುಮಟ್ಟಿಗೆ ತಗ್ಗುವ ಸಾಧ್ಯತೆ, ವಾಹನವನ್ನು ಸ್ವಯಂಪ್ರೇರಿತವಾಗಿ ಗುಜರಿಗೆ ಹಾಕಿದವರಿಗೆ ಸಿಗುವ ಆರ್ಥಿಕ ಪ್ರೋತ್ಸಾಹಕಗಳು, ಗುಜರಿಗೆ ಬಂದ ವಾಹನಗಳಲ್ಲಿನ ಲೋಹ, ರಬ್ಬರ್, ಪ್ಲಾಸ್ಟಿಕ್ ವಸ್ತುಗಳ ಪುನರ್ಬಳಕೆಯಿಂದ ಉದ್ಯಮಕ್ಕೆ ಆಗುವ ಪ್ರಯೋಜನ... ಇವೆಲ್ಲ ಈ ನೀತಿಯ ಸ್ವಾಗತಾರ್ಹ ಅಂಶಗಳು. ಪ್ರಧಾನಿಯವರು ಹೇಳಿರುವಂತೆ ಇದು, ತ್ಯಾಜ್ಯದಿಂದ ಚಿನ್ನವನ್ನು ಮತ್ತೆ ಮತ್ತೆ ಬಳಸಿಕೊಳ್ಳಲು ಅವಕಾಶ ಕಲ್ಪಿಸುವ ಆರ್ಥಿಕ ರಚನೆಗಳನ್ನು ರೂಪಿಸಿಕೊಡುತ್ತದೆ. ಬಹುತೇಕ ಆರ್ಥಿಕ ಚಟುವಟಿಕೆಗಳು ಪರಿಸರದ ಮೇಲೆ ಒಂದಲ್ಲ ಒಂದು ಬಗೆಯಲ್ಲಿ ತುಸುವಾದರೂ ದುಷ್ಪರಿಣಾಮ ಉಂಟುಮಾಡುತ್ತಿರುವುದು ನಿಜ. ಆದರೆ, ಬಳಸಿ ಸವಕಲಾದ ವಸ್ತುಗಳನ್ನು ಹೊಸ ಉತ್ಪನ್ನಗಳ ತಯಾರಿಕೆಯಲ್ಲಿ ಮತ್ತೆ ಬಳಸಿಕೊಳ್ಳುವುದು ಪರಿಸರಕ್ಕೆ ಅಲ್ಪಮಟ್ಟಿಗಾದರೂ ಹಿತಕರವಾಗಬಹುದು. ಬಳಕೆಗೆ ಯೋಗ್ಯವಲ್ಲದ ವಾಹನಗಳನ್ನು ಗುಜರಿಗೆ ಹಾಕುವುದರಿಂದ, ದೇಶದಲ್ಲಿನ ಇಂಧನ ಬಳಕೆ ಇಂದಿಗಿಂತ ಹೆಚ್ಚು ದಕ್ಷವಾಗಬಹುದು. ಪ್ರಯಾಣಿಕ ಹಾಗೂ ವಾಣಿಜ್ಯ ವಾಹನಗಳ ನೋಂದಣಿ ಅವಧಿ ಮುಗಿದ ನಂತರ, ಅವುಗಳನ್ನು ಪರೀಕ್ಷೆಗೆ ಒಳಪಡಿಸಿ, ಪರೀಕ್ಷೆಯ ಫಲಿತಾಂಶದ ಆಧಾರದಲ್ಲಿ ಆ ವಾಹನವನ್ನು ಗುಜರಿಗೆ ಹಾಕಬೇಕೋ ಬೇಡವೋ ಎಂಬುದನ್ನು ತೀರ್ಮಾನಿಸಲಾಗುತ್ತದೆ. ಹೀಗೆ ತೀರ್ಮಾನ ಮಾಡುವಾಗ, ವಾಹನದಲ್ಲಿನ ಕೆಲವು ಸುರಕ್ಷತಾ ಪರಿಕರಗಳು ಎಷ್ಟರ ಮಟ್ಟಿಗೆ ಸುಸ್ಥಿತಿಯಲ್ಲಿವೆ ಎಂಬುದನ್ನು ಕೂಡ ಪರೀಕ್ಷಿಸಲಾಗುತ್ತದೆ. ಇದರಿಂದಾಗಿ, ಸುರಕ್ಷಿತವಲ್ಲದ ವಾಹನಗಳು ರಸ್ತೆಗಳಿಂದ ದೂರ ಸರಿಯಬಹುದು, ರಸ್ತೆ ಪ್ರಯಾಣವು ಇಂದಿಗಿಂತ ಹೆಚ್ಚು ಸುರಕ್ಷಿತವಾಗಬಹುದು.



ಬಳಕೆಗೆ ಯೋಗ್ಯವಲ್ಲದ ವಾಹನಗಳನ್ನು ಗುಜರಿಗೆ ಹಾಕುವುದರಿಂದ, ದೇಶದಲ್ಲಿನ ಇಂಧನ ಬಳಕೆ ಇಂದಿಗಿಂತ ಹೆಚ್ಚು ದಕ್ಷವಾಗಬಹುದು

ದೇಶದ ವಾಹನ ಉದ್ಯಮವು ಈಗ ಪ್ರತಿವರ್ಷ ಸರಾಸರಿ ₹ 4.5 ಲಕ್ಷ ಕೋಟಿ ವಹಿವಾಟು ನಡೆಸುತ್ತಿದೆ. ಹೊಸ ನೀತಿ ಜಾರಿಗೆ ಬಂದ ನಂತರದಲ್ಲಿ ಈ ಉದ್ಯಮದ ವಾರ್ಷಿಕ ವಹಿವಾಟು ಮೊತ್ತವು ₹ 10 ಲಕ್ಷ ಕೋಟಿ ಆಗಬಹುದು ಎಂದು ಕೇಂದ್ರ ಸರ್ಕಾರ ಅಂದಾಜಿಸಿದೆ. 'ಈ ನೀತಿ ಜಾರಿಗೆ ಬಂದ ನಂತರದಲ್ಲಿ, ಹಳೆಯ 51 ಲಕ್ಷ ವಾಹನಗಳು ಗುಜರಿಗೆ ಸೇರುವ ನಿರೀಕ್ಷೆಯಿದೆ. ಗುಜರಿ ವಸ್ತುಗಳನ್ನು ವಾಹನ ತಯಾರಿಕೆಗೆ ಮತ್ತೆ ಬಳಕೆ ಮಾಡಿಕೊಳ್ಳುವುದರಿಂದ ಹೊಸ ವಾಹನಗಳ ಉತ್ಪಾದನಾ ವೆಚ್ಚವು ಶೇಕಡ 30ರಿಂದ 40ರಷ್ಟು ಕಡಿಮೆಯಾಗಲಿದೆ' ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ. 15 ವರ್ಷಕ್ಕಿಂತ ಹಳೆಯದಾದ ವಾಣಿಜ್ಯ ವಾಹನಗಳನ್ನು, 20 ವರ್ಷಗಳಿಗಿಂತ ಹಳೆಯದಾದ ಖಾಸಗಿ ವಾಹನಗಳನ್ನು ಗುಜರಿಗೆ ಹಾಕುವುದು ಕಡ್ಡಾಯವೇನೂ ಅಲ್ಲ. ಅವುಗಳು ಸುಸ್ಥಿತಿಯಲ್ಲಿ ಇವೆ ಎಂದಾದರೆ, ಅವುಗಳ ಬಳಕೆ ಮುಂದುವರಿಸಲು ಅಡ್ಡಿಯಿಲ್ಲ. ಹಳೆಯ ವಾಹನಗಳನ್ನು ಗುಜರಿಗೆ ಹಾಕಿ ಹೊಸ ವಾಹನ ಖರೀದಿಸುವವರಿಗೆ ನೋಂದಣಿ ಶುಲ್ಕ ಮನ್ನಾ ಆಗಲಿದೆ ಹಾಗೂ ರಸ್ತೆ ತೆರಿಗೆ ಪಾವತಿಯಲ್ಲಿ ಕೆಲವು ವಿನಾಯಿತಿಗಳು ಸಿಗಲಿವೆ ಎಂದು ಸರ್ಕಾರ ಹೇಳಿದೆ. ಇದು ಹಳೆಯ ವಾಹನಗಳನ್ನು ಸ್ವಯಂಪ್ರೇರಿತವಾಗಿ ಗುಜರಿಗೆ ಹಾಕುವ ವಾಹನಗಳ ಮಾಲೀಕರಿಗೆ ಪ್ರೋತ್ಸಾಹದಾಯಕ ಕೆಲಸ ಮಾಡುವ ನಿರೀಕ್ಷೆ ಇದೆ. ಇಂತಹ ಕ್ರಮಗಳು ಮುಂದುವರಿದ ಹಲವು ದೇಶಗಳಲ್ಲಿ ಇವೆ.

ವಾಹನಗಳು ಸುಸ್ಥಿತಿಯಲ್ಲಿ ಇವೆಯೇ ಎಂಬುದನ್ನು ಸ್ವಯಂಚಾಲಿತ ವ್ಯವಸ್ಥೆಯೊಂದರ ಮೂಲಕ ಪರೀಕ್ಷಿಸಲಾಗುತ್ತದೆ. ಈಗಿನ ವ್ಯವಸ್ಥೆಯ ಅಡಿಯಲ್ಲಿ ಅಧಿಕಾರಿಗಳು ಖುದ್ದಾಗಿ ಪರೀಕ್ಷಿಸಿ ಬಳಿಕ ವಾಹನದ ಅರ್ಹತಾ ಪ್ರಮಾಣಪತ್ರವನ್ನು ನೀಡಲಾಗುತ್ತಿದೆ. ಇಲ್ಲಿ, ಅಧಿಕಾರಿಗಳಿಗೆ ತಮ್ಮ ವಿವೇಚನಾ ಅಧಿಕಾರ ಬಳಸುವ ಅವಕಾಶ ಹೆಚ್ಚಿರುವ ಕಾರಣ ಭ್ರಷ್ಟಾಚಾರದ ಸಾಧ್ಯತೆಯೂ ಹೆಚ್ಚಾಗಿಯೇ ಇದೆ. ಹೊಸ ವ್ಯವಸ್ಥೆಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಸರ್ಕಾರಗಳು ಪರೀಕ್ಷಾ ಕೇಂದ್ರಗಳನ್ನು ಆರಂಭಿಸಲಿವೆ. ಇದು ಸ್ವಯಂಚಾಲಿತ ಆಗಿರುವ ಕಾರಣ ಭ್ರಷ್ಟಾಚಾರಕ್ಕೆ ಅವಕಾಶ ಇರದಿರಬಹುದು. ಹೊಸ ಗುಜರಿ ನೀತಿಯ ಯಶಸ್ಸು ಈ ಕೇಂದ್ರಗಳು ಎಷ್ಟು ಪಾರದರ್ಶಕವಾಗಿ, ವಿಶ್ವಾಸಾರ್ಹವಾಗಿ ಕಾರ್ಯನಿರ್ವಹಿಸುತ್ತವೆ ಎಂಬುದರ ಆಧಾರದ ಮೇಲೆ ನಿಂತಿದೆ. ನೀತಿಯು ಜಾರಿಗೆ ಬಂದ ನಂತರದಲ್ಲಿ ದೇಶದಲ್ಲಿ 50ರಿಂದ 60 ಗುಜರಿ ಘಟಕಗಳು ತಲೆ ಎತ್ತುವ ಸಾಧ್ಯತೆ ಇದೆ ಎಂದು ಡೆಲಾಯ್ಟ್ ಇಂಡಿಯಾ ಅಂದಾಜು ಮಾಡಿದೆ. ಇಲ್ಲಿ ಹೊಸ ಹೂಡಿಕೆ ಆಗಲಿದೆ, ಹೊಸದಾಗಿ ಉದ್ಯೋಗ ಸೃಷ್ಟಿ ಕೂಡ ಆಗಲಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ವಾಹನಗಳ ಸ್ಥಿತಿಯನ್ನು ಪರೀಕ್ಷಿಸಲು, ಅವುಗಳಿಗೆ ಅರ್ಹತಾ ಪ್ರಮಾಣಪತ್ರ ನೀಡಲು ಖಾಸಗಿ ಸಹಭಾಗಿತ್ವದಲ್ಲಿ ಕೇಂದ್ರಗಳು ಸ್ಥಾಪನೆ ಆಗಲಿರುವ ಕಾರಣ, ಇಲ್ಲಿ ಕೂಡ ಹೊಸದಾಗಿ ಖಾಸಗಿ ಹೂಡಿಕೆ ಆಗಬಹುದು. ಗುಜರಿ ಘಟಕಗಳು ಹಾಗೂ ಪರೀಕ್ಷಾ ಕೇಂದ್ರಗಳು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್ಎಂಇ) ಉದ್ಯಮ ವಲಯಕ್ಕೆ ಸೀಮಿತ ಪ್ರಮಾಣದಲ್ಲಿಯಾದರೂ ಹೊಸ ಅವಕಾಶಗಳನ್ನು ಸೃಷ್ಟಿಸಿಕೊಡಬಹುದು.

## ದಿನದ ಟ್ವೀಟ್




### ಶಾಂತಿಗಾಗಿ ಪ್ರಾರ್ಥಿಸೋಣ

ಅಫ್ಗಾನಿಸ್ತಾನವು 1960ರ ಕಾಲಘಟ್ಟದಲ್ಲಿ ಪೂರ್ವ ಮತ್ತು ಪಶ್ಚಿಮದ ಸಂಸ್ಕೃತಿಗಳು ಸೊಗಸಾಗಿ ಮಿಳಿತವಾಗಿದ್ದ ತಾಣವಾಗಿತ್ತು. ಈಗ ಅಲ್ಲಿನ ಪರಿಸ್ಥಿತಿಯನ್ನು ತಿಳಿದು ದುಃಖವಾಗಿದೆ. ಆ ದೇಶದಲ್ಲಿ ಶಾಂತಿ ನೆಲೆಸುವಂತೆ ಪ್ರಾರ್ಥಿಸುತ್ತೇನೆ.

**ವೆಂಕಟೇಶ ಪ್ರಸಾದ್,** ಕ್ರಿಕೆಟ್ ತರಬೇತುದಾರ, ಮಾಜಿ ಕ್ರಿಕೆಟಿಗ

## ಕಿಡಿನುಡಿ

ಜಾತಿಗಣತಿ ವರದಿಯನ್ನು ನನ್ನ ಹತ್ತಿರ ಯಾರೂ ಕೊಟ್ಟಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ಅವರೇ (ಸಿದ್ದರಾಮಯ್ಯ) ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದರು. ಜಾತಿಗಣತಿ ವರದಿ ಬಗ್ಗೆ ನನ್ನ ಜೊತೆ ಚರ್ಚೆ ಮಾಡಿದ್ರಾ? ನನ್ನ ಬಳಿ ವರದಿ ಇದೆ ತೆಗೆದುಕೊಳ್ಳಿ ಅಂತ ಬಂದಿದ್ರಾ? ಈವಾಗ ಅಹಿಂದ ಹೆಸರಿನಲ್ಲಿ ಏನೋ ಮಾಡಲು ಹೊರಟಿದ್ದಾರಲ್ಲಾ, ಅವರು ಮುಖ್ಯಮಂತ್ರಿ ಆಗಿದ್ದಾಗ ಐದು ವರ್ಷದಲ್ಲಿ ಏನ್ ಮಾಡಿದ್ದಾರೆ ಅಂತ ಗೊತ್ತಿದೆ.



**ಎಚ್.ಡಿ.ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಶನಿವಾರ, 17-8-1996

• **ಸಿಬಿಐ ಮುಖ್ಯಸ್ಥ ಸಿಂಗ್‌ಗೆ ಸುಪ್ರೀಂ ಕೋರ್ಟ್ ಛೀಮಾರಿ**

**ನವದೆಹಲಿ, ಆ. 16 (ಪಿಟಿಐ)–** ಹವಾಲ ಹಗರಣದ ಆರೋಪಿಗಳಾದ ಕೆಲವು ಪ್ರಮುಖ ರಾಜಕಾರಣಿಗಳನ್ನು ಭೇಟಿ ಮಾಡಿದ್ದ ಸಿಬಿಐ ನಿರ್ದೇಶಕ ಜೋಗಿಂದರ್ ಸಿಂಗ್ ಅವರಿಗೆ ಸುಪ್ರೀಂ ಕೋರ್ಟಿನ ನ್ಯಾಯಪೀಠವು ಇಂದು ತುಂಬಿದ ನ್ಯಾಯಾಲಯದಲ್ಲಿ ಛೀಮಾರಿ ಹಾಕಿತು.

ಸಿಬಿಐ ನೂತನ ಮುಖ್ಯಸ್ಥರ ಕಾರ್ಯವೈಖರಿ ಹಾಗೂ ಹವಾಲ ಹಗರಣದ ತನಿಖೆ ಬಗ್ಗೆ ನ್ಯಾಯಮೂರ್ತಿಗಳಾದ ಜೆ.ಎಸ್.ವರ್ಮಾ, ಎಸ್.ಪಿ.ಭರೂಚ ಮತ್ತು ಎಸ್.ಸಿ.ಸೇನ್ ಅವರಿದ್ದ ನ್ಯಾಯಪೀಠವು ತರಾಟೆಗೆ ತೆಗೆದುಕೊಂಡ ತಕ್ಷಣವೇ ಸಿಂಗ್ ಕ್ಷಮೆ ಯಾಚಿಸಿದರು.

'ಈ ಕ್ಷಣದಿಂದಲೇ ನಾನು ಎಲ್ಲರ ಒಡನಾಟ ತೊರೆಯುವೆ. ಮುಂದೆ ಎಂದೂ ಇಂಥ ತಪ್ಪುಗಳಿಗೆ ಅವಕಾಶ ನೀಡುವುದಿಲ್ಲ' ಎಂದು ಭರವಸೆ ನೀಡಿದರು.

## 50 ವರ್ಷಗಳ ಹಿಂದೆ

ಮಂಗಳವಾರ, 17-8-1971

• **ಅಪಮೌಲ್ಯದ ಅಂಚಿನಲ್ಲಿ ಡಾಲರ್**

**ವಾಷಿಂಗ್ಟನ್, ಆ. 16–** ಅಧ್ಯಕ್ಷ ನಿಕ್ಸನರು ಡಾಲರನ್ನು ಚಿನ್ನಕ್ಕೆ ವಿನಿಮಯ ಮಾಡಿಕೊಳ್ಳುವ ಅಮೆರಿಕದ 37 ವರ್ಷಗಳ ಹಳೆಯ ಆಶ್ವಾಸನೆಯನ್ನು ರದ್ದುಪಡಿಸಿ, ಡಾಲರಿನ ಮೌಲ್ಯಚ್ಛೇದನಕ್ಕೆ ಎಡೆಕೊಡುವ ಹೊಸ ನೀತಿಯನ್ನು ಪ್ರಕಟಿಸಿದ್ದಾರೆ.

ವಿಶ್ವದ ಇತರ ರಾಷ್ಟ್ರಗಳ ನಾಣ್ಯದ ಪುನರ್ ಹೊಂದಾಣಿಕೆಗೆ ಸಂಧಾನ ಆರಂಭಿಸಲು ಅವರು ಹಣಕಾಸು ಖಾತೆಯ ಹಿರಿಯ ಅಧಿಕಾರಿಗಳನ್ನು ಲಂಡನ್ನಿಗೆ ಕಳುಹಿಸಿದ್ದಾರೆ.

ಅಮೆರಿಕದ ತತ್ತರಿಸುತ್ತಿರುವ ಆರ್ಥಿಕ ರಂಗಕ್ಕೆ ನವಚೇತನ ನೀಡಲು ನಿನ್ನೆ ರಾತ್ರಿ ನಿಕ್ಸನ್ ಪ್ರಕಟಿಸಿದ ಕ್ರಮಗಳಲ್ಲಿ 90 ದಿನಗಳ ವೇತನ ಮತ್ತು ಬೆಲೆ ಸ್ಥಗಿತ, ಅನೇಕ ವಸ್ತುಗಳ ಆಮದು ಮೇಲೆ ಶೇ 10ರಷ್ಟು ಸರ್‌ಚಾರ್ಜ್ ಹೇರಿಕೆ, ವಿದೇಶಿ ಆರ್ಥಿಕ ನೆರವಿನಲ್ಲಿ ಶೇ 10ರಷ್ಟು ಕಡಿತ, ಸರ್ಕಾರಿ ಖರ್ಚುವೆಚ್ಚದಲ್ಲಿ ಖೋತಾ ಮುಂತಾದವು ಅಡಕವಾಗಿವೆ.

• **ರೂಪಾಯಿಗೆ ಹಾನಿ ತಟ್ಟದು**

**ನವದೆಹಲಿ, ಆ. 16–** ಡಾಲರ್ ಮೇಲಿನ ಒತ್ತಡವನ್ನು ನಿಲ್ಲಿಸುವ ಬಗ್ಗೆ ಅಮೆರಿಕ ಕೈಗೊಂಡಿರುವ ಆರ್ಥಿಕ ಕ್ರಮಗಳಿಂದ ಉಂಟಾಗುವ ಪರಿಣಾಮವನ್ನು ವಿಶ್ಲೇಷಿಸುವುದಕ್ಕೆ ಭಾರತ ಸರ್ಕಾರದ ಆರ್ಥಿಕ ಸಲಹೆಗಾರರು ತತ್‌ಕ್ಷಣವೇ ಇಲ್ಲಿ ಸಭೆ ಸೇರುವರೆಂದು ಗೊತ್ತಾಗಿದೆ.

ಅಮೆರಿಕ ಸರ್ಕಾರ ಕೈಗೊಂಡಿರುವ ಆರ್ಥಿಕ ಕ್ರಮಗಳ ವಿಷಯದಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಲು ಅಧಿಕೃತ ವೃತ್ತಗಳಿಗೆ ಇಚ್ಛೆ ಇಲ್ಲ. ಆದರೆ ಅಮೆರಿಕ ಕ್ರಮದಿಂದ ರೂಪಾಯಿಗೆ ಯಾವುದೇ ಹಾನಿ ತಟ್ಟುವ ನಿರೀಕ್ಷೆ ಇಲ್ಲ.

### ಅಗತ್ಯ ತರಬೇತಿ, ಸಂಪನ್ಮೂಲಗಳಿವೆಯೇ ಎಂಬುದರ ಆತ್ಮಾವಲೋಕನ ನಡೆಯಬೇಕಿದೆ

# ಅವಸರಿಸದೆ ಬರಲಿ ಶಿಕ್ಷಣ ನೀತಿ



ವಿಶ್ಲೇಷಣೆ

ಶರತ್ ಅನಂತಮೂರ್ತಿ

**ಕರ್ನಾಟಕದ** ಉನ್ನತ ಶಿಕ್ಷಣ ಸಚಿವರು ಮತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಅಧಿಕಾರಿಗಳು ಹೊಸ ಶಿಕ್ಷಣ ನೀತಿಯನ್ನು (ಎನ್‌ಇಪಿ) ಈ ವರ್ಷದಿಂದಲೇ ಪ್ರಾರಂಭಿಸುವ ಸರ್ಕಾರದ ಉದ್ದೇಶದ ಬಗ್ಗೆ ಇತ್ತೀಚೆಗೆ ಮಾತನಾಡಿದ್ದಾರೆ.

ಪದವಿ ಕಾಲೇಜುಗಳಲ್ಲಿ ಈಗಿರುವ ಸಾಮಾನ್ಯ ಮೂರು ವಿಷಯಗಳನ್ನು, ಅಂದರೆ ಉದಾಹರಣೆಗೆ ಪಿಸಿಎಂ ಅಥವಾ ಪಿಇಎಂ ಅಂತಹ ಸಂಯೋಜನೆಗಳ ಬದಲಿಗೆ, ಒಂದೇ ಜ್ಞಾನಶಾಖೆಯ ಎರಡು ಮುಖ್ಯ ವಿಷಯಗಳ ಜೊತೆ ಬೇರೊಂದು ಜ್ಞಾನಶಾಖೆಯ ವಿಷಯವನ್ನು (ಎಲೆಕ್ಟಿವ್) ಆಯ್ಕೆ ಮಾಡಿಕೊಳ್ಳಬಹುದು. ಪದವಿ ಮುಗಿಸುವ ಮುನ್ನ ತಾವು ಆರಿಸಿಕೊಂಡ ವಿಷಯಗಳಲ್ಲದೆ ಕೆಲವು ಕೌಶಲಗಳನ್ನು (skill sets) ಕೂಡ ಕಲಿಯುವ ಸಾಧ್ಯತೆಯ ಪ್ರಸ್ತಾವ ಈ ಶಿಕ್ಷಣ ನೀತಿಯಲ್ಲಿದೆ. ಜೊತೆಗೆ ಸಂಶೋಧನೆಯ ಹಾದಿಯನ್ನು ಹಿಡಿಯಬಯಸುವವರಿಗೆ ನಾಲ್ಕು ವರ್ಷಗಳ ಆನರ್ಸ್ ಕೋರ್ಸ್‌ಗಳನ್ನು ಆರಂಭಿಸುವ ಮಹತ್ವದ ಹೆಜ್ಜೆಯನ್ನೂ ಇದು ಒಳಗೊಂಡಿದೆ.

ಯಾವುದೇ ಪಠ್ಯಕ್ರಮ, ಕಲಿಸುವ ವಿಧಾನ, ವಿಷಯಗಳ ಆಯ್ಕೆಯ ಹಿಂದೆ ರಾಜಕೀಯ ನಿಲುವಿರುತ್ತದೆ. ಈ ಕೋನದಿಂದ ಎನ್‌ಇಪಿಯನ್ನು ಕೂಡ ವಿಶ್ಲೇಷಿಸಬಹುದು. ಆದರೆ ಅದು ಈ ಲೇಖನದ ಉದ್ದೇಶವಲ್ಲ. ಹಾಗೆ ನೋಡಿದರೆ, ಹೊಸ ರೀತಿಯ ಬಹುಶಿಸ್ತೀಯ ಕಲಿಕೆಯ ಬಗ್ಗೆ ಈ ಶಿಕ್ಷಣ ನೀತಿಯಲ್ಲಿ ಕೆಲವು ಒಳ್ಳೆಯ ಅಂಶಗಳ ಪ್ರಸ್ತಾಪವಿದೆ. ಕೇವಲ 'ಗಿಳಿಪಾಠ'ದ ಮಾದರಿಯ ಕಲಿಕೆಯ ವಿಧಾನಗಳನ್ನು ಬಿಟ್ಟು ಬೇರೊಂದು ಬಗೆಯ ಕ್ರಿಯಾತ್ಮಕ ಕಲಿಕೆಯನ್ನು ಒದಗಿಸಬೇಕೆಂಬ ಸಂಕಲ್ಪವು ಸ್ವಾಗತಾರ್ಹವಾದುದಾಗಿದೆ. ಸಮಸ್ಯೆಯಿರುವುದು ಅವಸರದ ಅನುಷ್ಠಾನದಲ್ಲಿ.

ಹಲವಾರು ವರ್ಷಗಳಿಂದ ಸ್ನಾತಕೋತ್ತರ ವಿದ್ಯಾರ್ಥಿಗಳ ಬೋಧನೆಯಲ್ಲಿ ತೊಡಗಿಸಿಕೊಂಡ, ಇಂಥ ಸಂಸ್ಥೆಗಳ ರೀತಿನೀತಿಗಳನ್ನು ಅರಿತ ನಮ್ಮಂಥವರಿಗೆ ಹೊಸ ನೀತಿಯನ್ನು ಅಳವಡಿಸಲು ಸರ್ಕಾರ ತೋರಿಸುತ್ತಿರುವ ಅವಸರವು ಗಾಬರಿ ಹುಟ್ಟಿಸುವಂತಿದೆ. ಪದವಿ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಹೊಸ ನೀತಿಯ ಜಾರಿಗೆ ಅಗತ್ಯವಾದ ತಯಾರಿಯ ಬಗ್ಗೆ ಚರ್ಚೆಗಳು ನಡೆಯಬೇಕು. ಹೊಸ ನೀತಿಯನ್ನು ಪಾಲಿಸಲು ಅಗತ್ಯವಾದ ತರಬೇತಿ ಮತ್ತು ಸಂಪನ್ಮೂಲಗಳು ಇವೆಯೇ ಎಂಬುದರ ಬಗ್ಗೆ ಪ್ರಾಮಾಣಿಕವಾದ ಆತ್ಮಾವಲೋಕನ ಮಾಡಿಕೊಂಡು ಅದಕ್ಕೆ ಸಿದ್ಧವಾಗಬೇಕು. ಅದರ ಬದಲಿಗೆ, ವಿದ್ಯಾರ್ಥಿಗಳ ಜೊತೆ ನಿಕಟ ಸಂಪರ್ಕವಿರದ ಕೆಲವು ಕುಲಪತಿಗಳು ಅರೆಬರೆ ಪರಿಣತರ ಜೊತೆ ಆನ್‌ಲೈನ್ ಚರ್ಚೆಗಳನ್ನು ನಡೆಸಿ ನಿರ್ಧಾರಗಳನ್ನು ಪ್ರಕಟಿಸುತ್ತಿದ್ದಾರೆ.

ಇಂಥ ಆಮೂಲಾಗ್ರ ಬದಲಾವಣೆಗೆ, ವಿವಿಧ ಹಂತಗಳಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಸಂವಾದಗಳನ್ನು ನಡೆಸಿ, ಅವರ ಸಮಸ್ಯೆಗಳನ್ನು ಪರಿಗಣಿಸಿ ನಡೆಸಬೇಕಾದ ತಯಾರಿಗೆ ಕನಿಷ್ಠ ಒಂದು ವರ್ಷವಾದರೂ ಬೇಕು. ಈಗ ಪಾಠ ಮಾಡುತ್ತಿರುವವರು ಸಹ, ತಾವು ಕಲಿಸಲು ಬಳಸುತ್ತಿರುವ ಪರಿಕರ ಮತ್ತು ವಿಧಾನಗಳ ಬಗ್ಗೆ ಆಳವಾದ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ತುರ್ತು ಇದೆ.

ಇನ್ನೊಂದು ಅತ್ಯಂತ ಮುಖ್ಯವಾದ ವಿಷಯವಿದೆ. ಕೆಲವು ವಿಶೇಷ ಪರಿಣತ ಕ್ಷೇತ್ರಗಳನ್ನು ಪದವಿ ಕಾಲೇಜುಗಳಲ್ಲೂ ವಿಶ್ವವಿದ್ಯಾಲಯಗಳಲ್ಲೂ ಬೆಳೆಸುವುದು ಹೊಸ ಶಿಕ್ಷಣ ನೀತಿಯ ಉದ್ದೇಶಗಳಲ್ಲಿ ಒಂದು. ಆದರೆ ಇದನ್ನು ಆರಂಭಿಸಿ, ಬೆಳೆಸಿ ಮುಂದುವರಿಸಲು ಇದರಲ್ಲಿ ಪೂರ್ತಿಯಾಗಿ ತೊಡಗಿಸಿಕೊಳ್ಳಬಲ್ಲ ಕಾಯಂ ಅಧ್ಯಾಪಕರ ಅಗತ್ಯವಿದೆ. ಇಂದು ಇಡೀ ವಿಭಾಗವನ್ನು ಒಬ್ಬಿಬ್ಬರೇ ನಡೆಸುತ್ತಿರುವ, ಎಲ್ಲ ಹುದ್ದೆಗಳಿಗೂ ಅತಿಥಿ ಉಪನ್ಯಾಸಕರನ್ನೇ ನೆಚ್ಚಿಕೊಂಡಿರುವ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಕಡಿಮೆಯಿಲ್ಲ. ಇಂಥ ವಸ್ತುಸ್ಥಿತಿ ಕಣ್ಣೆದುರು ಇರುವಾಗ ಹೊಸ ನೀತಿಯ ಅನುಷ್ಠಾನ ಸಮರ್ಪಕವಾಗಿ ಆಗುತ್ತದೆಂದು ನಾವು ನಿರೀಕ್ಷಿಸಬಹುದೇ?

ಭವಿಷ್ಯದಲ್ಲಿ ಹೆಚ್ಚು ಬೇಡಿಕೆ ಬರಬಹುದಾದ ವಿಷಯಗಳಲ್ಲಿ ಹೊಸ ಬಗೆಯ ಕೋರ್ಸ್‌ಗಳನ್ನು ಆರಂಭಿಸುವುದಕ್ಕೆ, ಈಗ ಪ್ರತ್ಯೇಕವಾಗಿರುವ ಕೆಲವು ಕೋರ್ಸ್‌ಗಳನ್ನು ಜತೆಗೂಡಿಸಿ ಹೊಸ ಬಹುಶಿಸ್ತೀಯ ಕೋರ್ಸ್‌ಗಳನ್ನು ವಿದ್ಯಾರ್ಥಿಗಳಿಗೆ (ಮುಖ್ಯವಾಗಿ ಪದವಿ ಹಂತದಲ್ಲಿ ಒಂದು ವರ್ಷ ಹೆಚ್ಚಿನ ವ್ಯಾಸಂಗ ಮಾಡಿ ಆನರ್ಸ್ ಪದವಿ ಪಡೆಯುವವರಿಗೆ) ಪರಿಚಯಿಸಲು, ಇವುಗಳಿಗೆ ಯಾವ ಬಗೆಯ ಬೋಧನಾಕ್ರಮವನ್ನು ಅಳವಡಿಸಬೇಕೆಂದು ನಿರ್ಧರಿಸಲು ಘನವಾದ ಅಧ್ಯಯನ ನಡೆಯಬೇಕಿದೆ.

ಈ ಪ್ರಕ್ರಿಯೆಯನ್ನು ಕಡೆಗಣಿಸಿ, 'ಎಲ್ಲರಿಗೂ ಅನ್ವಯವಾಗುವಂತಹ' ಕೆಲವು ಆನ್‌ಲೈನ್ ಕೋರ್ಸ್‌ಗಳನ್ನು ಈಗಾಗಲೇ ತಯಾರಿಸಿದ್ದೇವೆಂದು ಹೇಳಲಾಗುತ್ತಿದೆ. ಎಲ್ಲರಿಗೂ ಒಂದೇ ಅಳತೆಯ ಅಂಗಿ ಹಾಕುವ ರೀತಿಯಲ್ಲಿ, ಶೇ 60ರಷ್ಟು ಕ್ಲಾಸ್‌ರೂಮ್ ಬೋಧನೆಯೂ ಶೇ 40ರಷ್ಟು ಈ ರೀತಿಯ ಆನ್‌ಲೈನ್ ಬೋಧನೆಯೂ ಇರಬೇಕೆಂದು ಕರ್ನಾಟಕದ ಎಲ್ಲ ಕಾಲೇಜುಗಳಿಗೆ ಅನ್ವಯಿಸುವ ಸುತ್ತೋಲೆ ಹೊರಡಿಸುವುದರ ಪ್ರಯೋಜನವನ್ನು ಪ್ರಶ್ನಿಸಬೇಕಿದೆ.

ಹೊಸ ಬಹುಶಿಸ್ತೀಯ ಕೋರ್ಸ್‌ಗಳನ್ನು ಆಯಾ ಕಾಲೇಜಿನಲ್ಲಿರುವ ಮತ್ತು ಅವರೊಡನೆ ಒಡನಾಡುವ ವಿಷಯತಜ್ಞರಿಂದ ನಡೆಸುವುದು ಉತ್ತಮ. ಆಗ ಏಕರೂಪ ಶಿಕ್ಷಣದ ಅನಿವಾರ್ಯದಿಂದ, ಅದರ ಸಾಧಾರಣ ಗುಣಮಟ್ಟದಿಂದ ತಪ್ಪಿಸಿಕೊಂಡು ಆಯಾ ಸಂಸ್ಥೆಗಳ ವೈಶಿಷ್ಟ್ಯವನ್ನು ಅಲ್ಲಿಯ ಬೋಧಕವರ್ಗದವರ ಪರಿಣತಿಯ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುತ್ತದೆ. ಶಿಕ್ಷಕ-ವಿದ್ಯಾರ್ಥಿಗಳ ನಿಕಟ ಸಂಬಂಧದಲ್ಲಿ, ಅಲ್ಲಿ ನಡೆಯುವ ಚರ್ಚೆ, ಸಂವಾದಗಳಲ್ಲಿಯೇ ವಿಷಯಗಳ ಬಗ್ಗೆ ಹೆಚ್ಚಿನ ಆಸಕ್ತಿಯು ವಿದ್ಯಾರ್ಥಿಗಳಲ್ಲಿ ಬೆಳೆಯುತ್ತದೆ ಮತ್ತು ಅನನ್ಯವಾದ ಯೋಚನಾಕ್ರಮದ ಸಾಧ್ಯತೆಗಳು ತೆರೆದುಕೊಳ್ಳುತ್ತವೆ.



ಇದೆಲ್ಲದರ ನಡುವೆ ಕೌಶಲ ಕಲಿಕೆಯ ಕುರಿತಾದ ಮಹತ್ವದ ವಿಚಾರವೊಂದು ಕಡೆಗಣನೆಗೆ ಒಳಗಾಗಿದೆ. ಮರಗೆಲಸ, ಹೊಲಿಗೆ, ಯಂತ್ರೋಪಕರಣ ನಿರ್ವಹಣೆ, ಅನಿಮೇಶನ್ ಅಥವಾ ಕಂಪ್ಯೂಟರ್ ಪ್ರೋಗ್ರಾಮಿಂಗ್ ಇತ್ಯಾದಿ ಕೌಶಲಗಳನ್ನು ಪಾಲಿಟೆಕ್ನಿಕ್‌ನಂತಹ ಸಂಸ್ಥೆಗಳಲ್ಲಿ ಕಲಿಸುವುದು ಒಂದು ಬಗೆ.


ಇದರ ಹೊರತಾಗಿ ಕೆಲವು ಜ್ಞಾನಶಾಖೆಗಳ ವಿಷಯಗಳ ಕಲಿಕೆಗೆ ಮತ್ತು ಅವುಗಳಲ್ಲಿ ಹೆಚ್ಚಿನ ಸಾಧನೆ ಮಾಡಲು ಅಗತ್ಯವಾದ ಕೌಶಲಗಳನ್ನು ಸಹ ಗುರುತಿಸಿ ಅವುಗಳನ್ನು ಕಲಿಸುವ ಅಗತ್ಯವಿದೆ. ಉದಾಹರಣೆಗೆ, ಆಧುನಿಕ ಜೀವಶಾಸ್ತ್ರದ ಕೋರ್ಸಿನ ಒಬ್ಬ ವಿದ್ಯಾರ್ಥಿಯು ಸೂಕ್ಷ್ಮದರ್ಶಕದೊಳಗೆ ನೋಡಲು ಅನುವಾಗುವಂತಹ ಇಮೇಜುಗಳನ್ನು ತಯಾರಿಸುವ ಕೌಶಲವನ್ನು ಹೊಂದಿರಬೇಕು. ಇಂಥ ತರಬೇತಿ ಅವರಿಗೆ ದೊರೆತಿರಬೇಕು. ಇದಲ್ಲದೆ, ಕ್ವಾಂಟಮ್ ಮೆಕ್ಯಾನಿಕ್ಸ್‌ನಂತಹ ಸೈದ್ಧಾಂತಿಕ ವಿಷಯಗಳ ಕಲಿಕೆಯಲ್ಲೂ ಪ್ರಾಥಮಿಕ ಹಂತದ ಅಲ್ಗಾರಿದಮ್‌ಗಳನ್ನು, ಕ್ವಾಂಟಮ್ ಕಂಪ್ಯೂಟಿಂಗ್‌ಗೆ ಅಗತ್ಯವಾದ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವ ಕೌಶಲವನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕು. ಹೀಗೆ ಕೌಶಲಾಭಿವೃದ್ಧಿಯನ್ನು ವಿಶಾಲವಾದ ಅರ್ಥದಲ್ಲಿ ಗ್ರಹಿಸದೇ ಇದ್ದರೆ ಅದೊಂದು ವ್ಯರ್ಥ ಮತ್ತು ಅರ್ಥಹೀನ ಚಟುವಟಿಕೆಯಾಗುವ ಅಪಾಯವಿದೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಗಮನಿಸಿದಾಗ, ಇಂಥ ಮಹತ್ತರವಾದ ಬದಲಾವಣೆಗಳನ್ನು ತರುವ ಮುನ್ನ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಬೋಧಕ ವರ್ಗದವರ ಜೊತೆ ಯಾವ ಬಗೆಯ ಸಮಾಲೋಚನೆಗಳನ್ನು ನಡೆಸಲಾಗಿದೆ ಎಂಬ ಪ್ರಶ್ನೆ ಮುನ್ನೆಲೆಗೆ ಬರಬೇಕು. ಇಲ್ಲಿಯವರೆಗೂ ಅಲ್ಲಲ್ಲಿ ಕೆಲವು ಆನ್‌ಲೈನ್ ಕಾರ್ಯಾಗಾರಗಳು ನಡೆದು ಸಂವಾದ ನಡೆದ ಭಾಸವಾಗುತ್ತದೆ ಅಷ್ಟೇ. ಈ ನೀತಿಯಲ್ಲಿ ಅಡಕವಾಗಿರುವ ಅಂಕಿಅಂಶಗಳನ್ನು ವಸ್ತುನಿಷ್ಠವಾಗಿ ಚರ್ಚಿಸುವ ಬದಲು ಹೊಗಳಿಕೆಯ ಮಾತುಗಳನ್ನು, ಕ್ಲೀಷೆಯಾಗಿರುವ ನುಡಿಮುತ್ತುಗಳನ್ನು ಉದುರಿಸುವುದರಿಂದ ಯಾವ ಪ್ರಯೋಜನವೋ ತಿಳಿಯದಾಗಿದೆ.

ಹೊಸ ಶಿಕ್ಷಣ ನೀತಿಯನ್ನು ಪ್ರಾರಂಭಿಸುವ ಅವಸರವನ್ನು ಗಮನಿಸಿದರೆ, ಜಾಲತಾಣಗಳಲ್ಲಿ ಈಗಾಗಲೇ ಇರುವ ಕೆಲವು ಕೋರ್ಸ್‌ಗಳನ್ನು, ಈಗಾಗಲೇ ರೆಕಾರ್ಡ್ ಮಾಡಿದ ಪಾಠಗಳನ್ನು ಮರುಪ್ರಸಾರ ಮಾಡುವ ಮೂಲಕ, ಬೋಧಿಸಲು ತರಬೇತಿ ಪಡೆದ ಸಿಬ್ಬಂದಿಯಿಲ್ಲದಿದ್ದರೂ ಹೇಗೋ ನಡೆಸಬಹುದು ಎಂಬ ನಿಲುವು ಕಾಣಿಸುತ್ತಿದೆ. ಪಬ್ಲಿಕ್ ಯೂನಿವರ್ಸಿಟಿಗಳು ಬಡ ವಿದ್ಯಾರ್ಥಿಗಳಿಗೆ, ಹಿಂದುಳಿದ ಜಾತಿ ವರ್ಗಗಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಇರುವ ಒಂದೇ ದಾರಿ. ನಾಳೆ ಇವು ತಮ್ಮ ಗುಣಮಟ್ಟದಲ್ಲಿ ಇನ್ನೂ ಕುಸಿದರೆ ಅಥವಾ ಮುಚ್ಚಿಹೋದರೆ ವಿದ್ಯಾರ್ಥಿಗಳು ಖಾಸಗಿ ಸಂಸ್ಥೆಗಳಿಗೆ ಹೋಗಲಿ ಎಂಬುದು ಸರ್ಕಾರದ ಧೋರಣೆಯಾಗಿರುವಂತಿದೆ.

ಲೇಖಕ: ಪ್ರಾಧ್ಯಾಪಕ, ಸ್ಕೂಲ್ ಆಫ್ ಫಿಸಿಕ್ಸ್ ಹೈದರಾಬಾದ್ ವಿಶ್ವವಿದ್ಯಾಲಯ

## ಚುರುಮುರಿ



# ಸರ್ವರ್ ಪ್ರಾಬ್ಲಂ!

• ಲಿಂಗರಾಜು ಡಿ.ಎಸ್.

**'ಸಾ, ಸರ್ವರ್ ಡೌನಾಗಿ ಭಾಳ ತೊಂದರೆಯಾಗ್ಯದಂತೆ! ಯವಾರೆಲ್ಲಾ ಖೈದಾಗವಂತೆ! ಸಾಫ್ಟ್‌ವೇರ್-ಹಾರ್ಡ್‌ವೇರ್ ಸರಿಯಾಗಕೆ ಇನ್ನೂ 3-4 ತಿಂಗಳಾದ್ರೂ ಬೇಕಂತೆ!'** ಸುದ್ದಿ ಸ್ಫೋಟ ಮಾಡಿದೆ.

'ಹ್ಞೂಂ ಕನಪ್ಪಾ, ಸರ್ಕಾರದ ಸರ್ವರೇ ಡೌನಾಗ್ಯದೆ! ವಯಸ್ಸಾದವ್ರೆಲ್ಲಾ ಕೆಲಸ ಬುಟ್ಟು ಸೊಂಟದ ಕೆಳಗಲ ಬೋಗುಳ ಬೈತಾ ಕಾಲ ಕಳೀತಾವೆ. ಇನ್ನು ಯವಾರೆಲ್ಲಿ ಪೈಸಲಾದವು? ಮೋದಿ ಗುಜರಿ ನೀತಿ ಪ್ರಕಾರ, 15 ವರ್ಸ ಅಧಿಕಾರ ಮಾಡಿದ ಅಥವಾ 70 ವರ್ಸ ದಾಟಿದ ರಾಜಕಾರಣಿಗಳನ್ನ ಗುಜರಿಗೆ ಹಾಕದೇ ಸೈ!' ಅಂತು ಯಂಟಪ್ಪಣ್ಣ.

'ಅಣೈ, ಅವುನಂದದ್ದು ಸಬ್‌ರಿಜಿಸ್ಟ್ರಾರ್ ಆಪೀಸಲ್ಲಿ ಎಡವಟ್ಟಾಗ್ಯದೆ ಅಂತ! ನೀವು ಸರ್ಕಾರದ ಸರ್ವರ್ರು ಅಂದುಕಂಡ್ರಾ?' ಚಂದ್ರು ನಕ್ಕ.

'ಬಸಣ್ಣನ ಸರ್ಕಾರಕ್ಕೂ ವೈರಸ್ ಪ್ರಾಬ್ಲಂ ಆಗ್ಯದೆ ಕನ್ರೋ! ದೋಸರು ಕೊಡೋ ಮುಹೂರ್ತ, ನಕ್ಷತ್ರಕ್ಕೆ ಹೊಸಪ್ಯಾಟೆ ಸಿಂಗಂ ಕಾಯ್ತಾ ಕೂತದೆ. ರಿಜಲ್ಟು ಬಂದು ವಿತೆಲ್ಡ್ ಆದೋರು, ಲಕೋಟೆ ಕೊಟ್ಟೋರು, ಗಡ್ಡ ಬುಟ್ರೂ ಮಂತ್ರಿಯಾಗದೋರು ಕೂಗುಯ್ಯಾಲೆ ಆಡತಾವರೆ! ಇನ್ನು ಮಂತ್ರಿಯಾದವು ಕೆಲಸ ಸುರು ಮಾಡದು ಬುಟ್ಟು ಆಪೀಸಲ್ಲಿ ಮಂಗ್ಳಾರತಿ ಎತ್ತದ್ರಲ್ಲೇ ಬಿಜಿಯಾಗ್ಯವೆ. ಮಿನಿಸ್ಟ್ರಿಗೆ ಒತ್ತರಿಸಿಕ್ಯಂಡು ನಿಂತಿರೋ ಮೂರು ಬಿಟ್ಟವು ಬಾಯಿಂದ ಕೆಳಿಕ್ಕೆ ಮಾಸ್ಕಾಕಿದ್ದರೆ ಎಲ್ಲಾ ಬಿಟ್ಟವು ಮಾಸ್ಕೇ ಇಲ್ಲದೆ ಹಲ್ಲು ಕಿಸ್ಕಂಡು ಕ್ಯಾಮರಾಕ್ಕೆ ಮೂತಿ ತೋರಿಸ್ತಾ ನಿಂತಿರತವೆ' ತುರೇಮಣೆ ಸಿಟ್ಟಾದ್ರು.

'ಪೋಲೀಸಿನೋರಿಗೇಳಿ ಸೀಎಂ ದಂಡ ಹಾಕಿಸಬೌದಲ್ಲ ಸಾ?' ಚಂದ್ರು ನೋವು ತೋಡಿಕ್ಯಂಡ.

'ಪಾಪ, ಬಸಣ್ಣ ವಸಾ ಡ್ರೈವರ್ರು ಕಯ್ಯಾ! ಜೋರಾಗಿ ಹಾರನ್ ಹೊಡದು ಯಾರನೂ ಹೆದರಿಸಂಗಿಲ್ಲ! ಟೀವಿಯೋರು, ಪೇಪರಿನೋರೇ 'ಎಲ್ಲಾರೂ ಮಾಸ್ಕು ಹಾಕಿದ್ರೆ ಮಾತ್ರ ಚಿತ್ರ, ಸುದ್ದಿ ಹಾಕ್ತೀವಿ! ಇಲ್ಲದಿದ್ರೆ ಯಾವುದೂ ಇಲ್ಲ!' ಅಂತ ವ್ಯಾಧಿಪತ್ಯ ಹೊಂಡುಸ್ಬೇಕು. ಆಗ್ಲಾದ್ರೂ ರಾಜಕೀಯದವು ಮಾಸ್ಕಿಲ್ಲದವನಿಗೆ ಭವಿಷ್ಯವಿಲ್ಲ ಅಂತ ತಿಳುಕಂಡಾವೇನೋ!' ಅಂತು ಯಂಟಪ್ಪಣ್ಣ.

## ಸಂಗತ

# 'ರತ್ನಾಕರ'ನ ಒಡಲೀಗ ವಿಷಮಯ

### ತ್ಯಾಜ್ಯವನ್ನು ಚರಂಡಿಗೋ ನದಿಗೋ ಎಸೆಯುವುದು ಭೂಮಿಯ ಜೈವಿಕ ಸಂಪತ್ತಿನ ಕೋಟೆಯನ್ನೇ ಛಿದ್ರಗೊಳಿಸುತ್ತದೆ ಎಂಬ ಸತ್ಯವನ್ನು ಅರಿಯಬೇಕಿದೆ

• ಪ.ರಾಮಕೃಷ್ಣ ಶಾಸ್ತ್ರಿ

**ಇಂಡೊನೇಷ್ಯಾದ** ಮಧ್ಯ ಸುಲವೇಸಿ ಪ್ರಾಂತ್ಯದ ಪಲು ನದಿಯಲ್ಲಿ ಒಂದು ಮೊಸಳೆಯನ್ನು ಹಿಡಿಯಲು ಪರಿಸರ ತಜ್ಞರು ಐದು ವರ್ಷಗಳಿಂದ ಪ್ರಯತ್ನಿಸುತ್ತಲೇ ಇದ್ದಾರೆ. ದಡದ ಬಳಿಗೆ ಬಂದರೂ ಅದು ಕೈವಶವಾಗದೆ ನುಸುಳಿಕೊಳ್ಳುತ್ತಿದೆ. ಯಾಕೆ ಈ ಪ್ರಯತ್ನ ಎಂದರೆ, ಮೊಸಳೆಯ ಕುತ್ತಿಗೆಯಲ್ಲಿ ದ್ವಿಚಕ್ರ ವಾಹನವೊಂದರ ಟೈರು ಬಿಗಿಯಾದ ಹಾರದ ಹಾಗೆ ಸೇರಿಕೊಂಡಿದೆ. ಅದಕ್ಕೆ ಕುತ್ತಿಗೆ ತಿರುಗಿಸಲು ಕಷ್ಟವಾಗಿದೆ. ದೊಡ್ಡ ಬೇಟೆಯ ಮೇಲೆರಗಲು ಸಾಧ್ಯವಾಗದೆ ಹಸಿವಿನಿಂದ ಒದ್ದಾಡುತ್ತಿರುವ ಮೊಸಳೆ ಸಾವಿನ ದಿನಗಣನೆ ಮಾಡುತ್ತಿದೆ. ಆದರೂ ಅದನ್ನು ಹಿಡಿದು ಟೈರಿನಿಂದ ಕುತ್ತಿಗೆಯನ್ನು ವಿಮುಕ್ತಗೊಳಿಸಲು ತಜ್ಞರು ಹರಸಾಹಸ ಮಾಡುತ್ತಿದ್ದರೂ ಸಾಧ್ಯವಾಗದೆ ಹೋಗಿದೆ.

ಒಂದು ವಸ್ತು ನಿರುಪಯುಕ್ತ ಎನಿಸಿದಾಗ ಅದರ ವಿಲೇವಾರಿಗೆ ಕಾಣಿಸುವ ಸುಲಭ ಪರಿಹಾರ ಮಾರ್ಗವೆಂದರೆ ನದಿಗಳಿಗೆ ಎಸೆಯುವುದು. ಅದರಲ್ಲಿ ಬಹುದೊಡ್ಡ ಪಾಲು ಪ್ಲಾಸ್ಟಿಕ್‌ನ ನೀರಿನ ಬಾಟಲಿಗಳು ಹಾಗೂ ಕೈಚೀಲಗಳು. ನದಿಗಳು ಇದರಲ್ಲಿ ಬಹುಪಾಲನ್ನು ಸಾಗರಗಳಿಗೆ ತಲುಪಿಸಿ ತಮ್ಮ ಕೆಲಸ ಮುಗಿಸುತ್ತವೆ. ಆದರೆ ಕೋಟಿ ಕೋಟಿ ಜೀವರಾಶಿಗೆ ನೆಲೆಯಾಗಿರುವ ಸಾಗರ ಈಗ ಶತಮಾನಗಳಿಂದ ಬದುಕಿಕೊಂಡಿದ್ದ ಹಲವಾರು ಜೀವಿಗಳನ್ನು ನಿರಂತರವಾಗಿ ಭೂಪಟದಿಂದ ಅಳಿಸಿಹಾಕಲು ಸನ್ನದ್ಧವಾಗಿದೆ.

ಸಮುದ್ರವನ್ನು ರತ್ನಾಕರ ಎಂಬ ಹೆಸರಿನಿಂದಲೂ ಕರೆಯಲಾಗಿದೆ. ಅಸಂಖ್ಯ ಸುವಸ್ತುಗಳಿಗೆ ಕಣಜದಂತಿದ್ದ ಈ ಜಲರಾಶಿಯಲ್ಲಿ ಸಂಗ್ರಹವಾಗುವ ಪ್ಲಾಸ್ಟಿಕ್ ಚೀಲಗಳು ನೀರು ಮತ್ತು ಸೂರ್ಯನ ಬೆಳಕಿನ ಸಂಪರ್ಕದಿಂದಾಗಿ ಬಹು ಸೂಕ್ಷ್ಮ ಮೈಕ್ರೊ ಕಣಗಳಾಗಿ ನೀರಿನ ಮೇಲ್ಮೈ ಮತ್ತು ಏಳು ಮೈಲು ಆಳದವರೆಗೂ ತಲುಪುತ್ತವೆ. ನೀರಿನೊಂದಿಗೆ ಈ ಕಣಗಳನ್ನು ಸೇವಿಸಿದ ಮೀನುಗಳು, ಸಸ್ತನಿಗಳು, ಪಕ್ಷಿಗಳು ಜೀರ್ಣಶಕ್ತಿ ಕಳೆದುಕೊಂಡು ನಿರ್ವಂಶವಾಗುವ ಸಾಧ್ಯತೆಯ ಕುರಿತು ಪರಿಸರ ವಿಜ್ಞಾನಿಗಳು ಹೇಳುತ್ತಿದ್ದಾರೆ.

ಪ್ಲಾಸ್ಟಿಕ್ ಉತ್ಪಾದನಾ ಕಾರ್ಖಾನೆಗಳ ತ್ಯಾಜ್ಯವನ್ನು ಸಮುದ್ರಕ್ಕೆ ಸೇರಿಸಲಾಗುತ್ತದೆ. ಈಕ್ವೆಡಾರ್‌ನಿಂದ ದಕ್ಷಿಣ ಆಫ್ರಿಕಾದ ತನಕ 28 ದೇಶಗಳಿಂದ ಹರಿದು ಬರುವ ಈ ತ್ಯಾಜ್ಯ 20 ಮಿಲಿಗ್ರಾಂ ತೂಕದ ನರ್ಡಲ್ಸ್ ಎಂಬ ಉಂಡೆಯಾಗಿ ನೀರಿನಲ್ಲಿ ತೇಲುತ್ತದೆ. ಡಿಡಿಟಿ, ಪಾದರಸದಂತಹ ವಿಷ ರಾಸಾಯನಿಕಗಳನ್ನು ಅದು ಹೀರಿಕೊಳ್ಳುತ್ತದೆ. ನರ್ಡಲ್ಸ್ ಸುಲಭವಾಗಿ 200 ಜಾತಿಯ ಮೀನು ಮತ್ತು 400 ಬಗೆಯ ಹಕ್ಕಿಗಳ ಹೊಟ್ಟೆ ಸೇರಿದ ಫಲವಾಗಿ ಅವುಗಳ ವಂಶವೇ ನಿರ್ಮೂಲವಾಗಿದೆಯಂತೆ.

ಕಡಲಿನ ಬಳಿ ಆಹಾರ ಸೇವಿಸದೆ ರಾಶಿ ಬಿದ್ದಿರುವ ಆಮೆಗಳನ್ನು ಪರೀಕ್ಷಿಸಿದಾಗ ಅವುಗಳ ಕರುಳಿನ ಪೂರ್ತಿ ತುಂಬಿಕೊಂಡಿರುವ ನರ್ಡಲ್ಸ್, ಆಹಾರ ಸೇವನೆಯನ್ನು ತಡೆದಿರುವ ಅಂಶ ಬಯಲಿಗೆ ಬಂದಿದೆ. ಈಕ್ವೆಡಾರ್‌ನಲ್ಲಿ ಇದೇ ಕಾರಣದಿಂದ 5.70 ಲಕ್ಷ ಏಡಿಗಳ ಮಾರಣಹೋಮ ನಡೆದುದನ್ನೂ ಗಮನಿಸಲಾಗಿದೆ.

ದಕ್ಷಿಣ ಪೆಸಿಫಿಕ್ ಮತ್ತು ಹಿಂದೂ ಮಹಾಸಾಗರದ ಹೆಂಡರ್ಸನ್ ಹಾಗೂ ಕೊಕೋಸ್ ದ್ವೀಪಗಳ ಬಳಿ ಒಂದೇ ವರ್ಷದಲ್ಲಿ ಒಂದು ಅಡಿ ದಪ್ಪವಿರುವ ನೂತನ ವಿಶಾಲ ದ್ವೀಪ ಸೃಷ್ಟಿಯಾಗಿದೆ. ಕೋವಿಡ್– 19ರ ಸಮಯದ ಕೈಗವಸು ಮತ್ತು ಮಾಸ್ಕ್‌ಗಳೇ ಅತ್ಯಧಿಕ ಪ್ರಮಾಣದಲ್ಲಿ ಇಲ್ಲಿ ಸಂಗ್ರಹಗೊಂಡು ದ್ವೀಪದ ನೆಲವನ್ನು ರೂಪಿಸಿವೆ. ಕೆರಿಬಿಯನ್ ಸಮುದ್ರದಲ್ಲಿ ಭಾರಿ ಗಾತ್ರದ ಆಕೃತಿಗಳು ತೇಲುವುದನ್ನು ಕಂಡು ಸಾಗರ ಸಂಶೋಧಕರು ದಿಗ್ಭ್ರಮೆಗೊಂಡಿದ್ದರು. ಅವು ಆಮೆಗಳಾಗಿರಲಿಲ್ಲ. ಮೈಕ್ರೊಪ್ಲಾಸ್ಟಿಕ್ ಚೀಲಗಳು ಒಟ್ಟುಗೂಡಿ ಪರ್ವತಾಕಾರ ತಳೆದು ಮುಂದೆ ಹೋಗುತ್ತಿದ್ದವು. ಪೆಸಿಫಿಕ್, ಅಟ್ಲಾಂಟಿಕ್, ಆರ್ಕಟಿಕ್ ಸೇರಿ ಐದು ಸಾಗರಗಳಲ್ಲಿ ಇಂತಹ ಸಾವಿರಾರು ಪರ್ವತಗಳ ದೃಶ್ಯ ಪ್ರತಿದಿನವೂ ಸಾಮಾನ್ಯವಾಗಿದ್ದರೆ, 90 ಲಕ್ಷ ಟನ್ ಭಗ್ನಾವಶೇಷ ದಡಗಳಿಗೆ ತಲುಪುತ್ತಿದೆಯಂತೆ. ಹೀಗಾಗಿ ಫ್ರಾನ್ಸ್ ಸೇರಿ 30 ದೇಶಗಳು ಪ್ಲಾಸ್ಟಿಕ್ ಚೀಲದ ಬಳಕೆಗೆ ಅಂಕುಶ ಹಾಕಿವೆ.



ವೆನಿಸ್ ಬಿನಾಲೆಯಲ್ಲಿ ಕಡಲಿನಿಂದ ಸಂಗ್ರಹಿಸಿದ ಪ್ಲಾಸ್ಟಿಕ್ ಸಲಕರಣೆಗಳನ್ನು ಹಾರ, ಗೊಂಬೆಯಂತಹ ಉಪಯುಕ್ತ ವಸ್ತುಗಳಾಗಿ ರೂಪಿಸುವ ಕಾಯಕದಲ್ಲಿ ನಿರತರಾಗಿರುವ ಬಹುಸಂಖ್ಯಾತರು 'ಗಾರ್ಬೇಜ್ ರಾಜ್ಯ'ವನ್ನು ಸ್ಥಾಪಿಸಿದ್ದಾರೆ. ಈ ಕಾಲ್ಪನಿಕ ರಾಜ್ಯದ ಅಧ್ಯಕ್ಷರಾಗಿದ್ದವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಜಾನ್ ಕೆರಿ.

ಬಲು ದೂರದ ಮಾತೇಕೆ, ಚೆನ್ನೈಯಲ್ಲಿ ಬಂಗಾಳ ಕೊಲ್ಲಿಯ ಮರೀನಾ ಬೀಚ್‌ನಲ್ಲಿ ಹಿಮಸಾಗರದಂತೆ ರಾಶಿ ರಾಶಿ ನೊರೆ ಹರಡುತ್ತದೆ. ಈ ಬುರುಗಿನಲ್ಲಿ ಮಕ್ಕಳು ಮತ್ತು ಪ್ರವಾಸಿಗರು ಖುಷಿಯಿಂದ ಆಟವಾಡುತ್ತಾರೆ. ವಿಯೆನ್ನಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಂಶೋಧಕರು ಇದನ್ನು ಪರೀಕ್ಷಿಸಿದ್ದಾರೆ. ಇದರಲ್ಲಿ ಕೊಳೆಯುತ್ತಿರುವ ಕಡಲಕಳೆ, ಪ್ಲಾಸ್ಟಿಕ್ ಕಣಗಳ ಜೊತೆಗೆ ನಗರದ ಶೇ 40ರಷ್ಟು ಕೊಳಚೆ ನೀರನ್ನು ಸಮುದ್ರಕ್ಕೆ ಸೇರಿಸುವ ಕಾರಣ ಅದರಲ್ಲಿರುವ ಸಾಬೂನಿನ ಕಣಗಳಿಂದಾಗಿ ಬುರುಗು ಸೃಷ್ಟಿಯಾಗುತ್ತದೆ. ಇದರಲ್ಲಿ ಆಟವಾಡಿದವರಿಗೆ ವಿಷ ರಾಸಾಯನಿಕಗಳು ಮಾರಕವಾಗುತ್ತವೆ ಎಂದು ಸಂಶೋಧಕರು ಎಚ್ಚರಿಸಿದ್ದಾರೆ.

ತ್ಯಾಜ್ಯವನ್ನು ಸಂಗ್ರಹಿಸಿ, ಬೇರ್ಪಡಿಸುವ ಶ್ರಮವೇ ಬೇಡವೆಂದು ಪ್ರಜ್ಞಾವಂತರು ಕೂಡ ಚರಂಡಿಗೋ ನದಿಗೋ ಅದನ್ನು ಎಸೆಯುವುದಿದೆ. ತಮ್ಮ ಈ ಕೊಡುಗೆ ಭೂಮಿಯ ಜೈವಿಕ ಸಂಪತ್ತಿನ ಕೋಟೆಯನ್ನೇ ಛಿದ್ರಗೊಳಿಸುತ್ತದೆ ಎಂಬ ಸತ್ಯವನ್ನು ಅವರು ಅರಿಯಬೇಕಾಗಿದೆ. ಕೊಳಚೆ ನೀರು, ಪ್ಲಾಸ್ಟಿಕ್ ತ್ಯಾಜ್ಯ ಸಮುದ್ರ ಸೇರದಂತೆ ಮಾಡುವ ಜವಾಬ್ದಾರಿಯನ್ನು ಪ್ರತಿಯೊಬ್ಬರೂ ನಿರ್ವಹಿಸಬೇಕಾಗಿದೆ.

## ವಾಚಕರ ವಾಣಿ

### ಎಚ್ಚರ... ಉಗ್ರವಾದದ ನಂಜು ಸನಿಹವೇ ಇದೆ

ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಉಗ್ರರು ಸರ್ಕಾರವನ್ನು ಕಿತ್ತೊಗೆದು ತಮ್ಮದೇ ಹಿಡಿತ ಸಾಧಿಸಲು ಹೊರಟಿರುವ ಬೆಳವಣಿಗೆ ತೀವ್ರ ಆತಂಕಕಾರಿ. ಇದನ್ನು ವಿಶ್ವದ ಎಲ್ಲ ರಾಷ್ಟ್ರಗಳೂ ಒಕ್ಕೊರಲಿನಿಂದ ಖಂಡಿಸಬೇಕು. ಭಯೋತ್ಪಾದನೆ ಒಂದು ದೇಶಕ್ಕೆ ಸೀಮಿತವಲ್ಲ. ಅದೊಂದು ಜಾಗತಿಕ ಸಮಸ್ಯೆ. ಇಂದು ಅಫ್ಘಾನಿಸ್ತಾನದಲ್ಲಿ ನಡೆಯುತ್ತಿರುವ ಘನಘೋರ ದೃಶ್ಯಗಳನ್ನು ನೋಡುತ್ತಿದ್ದರೆ, ನಾವು ಯಾವ ಯುಗದಲ್ಲಿ ಇದ್ದೇವೆ ಎಂಬ ಭಯ ಉಂಟಾಗುತ್ತದೆ. ಭಯೋತ್ಪಾದನೆಯ ಮೂಲಕ ಕ್ರೂರ ಕೃತ್ಯಗಳಲ್ಲಿ ತೊಡಗುವ ಇಂಥ ಉಗ್ರರಿಗೆ ಸರಿಯಾದ ಪಾಠವನ್ನು ಜಾಗತಿಕ ಸಮೂಹ ಕಲಿಸಬೇಕು. ಇದನ್ನು ಬೇರು ಸಮೇತ ಕಿತ್ತೊಗೆಯಲು ಶ್ರಮಿಸಬೇಕು. ಅಕ್ಕಪಕ್ಕದ ರಾಷ್ಟ್ರಗಳು ಒಗ್ಗಟ್ಟಾಗಿ ಆ ದೇಶದಲ್ಲಿರುವ ಉಗ್ರರನ್ನು ಮಟ್ಟ ಹಾಕಬೇಕು.

ಒಂದು ದೇಶದ ಸೈನ್ಯವನ್ನೇ ಸದೆಬಡಿಯುವಷ್ಟು ಮದ್ದು ಗುಂಡು, ಬಂದೂಕುಗಳು, ಯುದ್ಧೋಪಕರಣಗಳು ಉಗ್ರರಲ್ಲಿವೆ ಎಂದರೆ, ಇದರ ಹಿಂದೆ ದೊಡ್ಡ ಆರ್ಥಿಕ ಸಹಾಯ ಅವರಿಗೆ ಇರಲೇಬೇಕು. ಇದೆಲ್ಲವನ್ನೂ ಪತ್ತೆ ಹಚ್ಚಿ, ಅಂಥ ಸಹಾಯ ನೀಡುವ ದೇಶಗಳಿಗೆ ವಿಶ್ವಸಂಸ್ಥೆಯು ದಿಗ್ಬಂಧನ ವಿಧಿಸಲಿ. ಇಲ್ಲವಾದಲ್ಲಿ ಉಗ್ರವಾದದ ನಂಜು ಬೇರೆ ರಾಷ್ಟ್ರಗಳಿಗೂ ಹಬ್ಬುತ್ತದೆ.

**ಪ್ರಾಣೇಶ ಪೂಜಾರ್ ಗಿಣಗೇರಾ,** ಕೊಪ್ಪಳ

### ಉದ್ಯೋಗಾವಕಾಶಕ್ಕಾಗಿ ದುಂದುವೆಚ್ಚ ಬೇಡ

ಸರ್ಕಾರಿ ಕಾರ್ಯಕ್ರಮಗಳಿಗೆ ಅನ್ವಯವಾಗುವಂತೆ ಹೂಗುಚ್ಛ, ಹೂವಿನ ಹಾರ ನಿಷೇಧದ ಆದೇಶ ಸರಿಯಾಗಿದೆ. ಇದರ ಬದಲಿಗೆ ಪುಸ್ತಕಗಳನ್ನು ಕೊಡುವ ಸಂಸ್ಕೃತಿ ಬೆಳೆಸುವುದು ಸ್ವಾಗತಾರ್ಹ. ಆದರೆ ಶಾಲು, ಹಣ್ಣಿನ ಬುಟ್ಟಿಯನ್ನು ನಿಷೇಧಿಸಿರುವ ಆದೇಶ ಮರು ಪರಿಶೀಲಿಸಬಹುದು. ಇವು ಮರುಬಳಕೆಯಾಗುವಂತಹ ವಸ್ತುಗಳು ಹಾಗೂ ಹಣ್ಣು ಹಂಪಲು ಹಸಿವನ್ನು ನೀಗಿಸುವ ಆಹಾರ. ಆದರೆ ದಿನನಿತ್ಯ ಕಾರ್ಯಕ್ರಮಗಳಲ್ಲಿ ಸಾವಿರಾರು ರೂಪಾಯಿ ಖರ್ಚು ಮಾಡಿ ತಂದಂತಹ ಹೂಗುಚ್ಛ, ಹೂವಿನ ಹಾರ ಕೆಲವೇ ಗಂಟೆಗಳಲ್ಲಿ ಬಾಡಿಹೋಗಿ ಕಸದಬುಟ್ಟಿ ಸೇರುವುದು ಹಸಿದ ಹೊಟ್ಟೆಗಳಿಗೆ ನೋವಿನ ಸಂಗತಿ.

ಕೇವಲ ಉದ್ಯೋಗಾವಕಾಶಗಳನ್ನು ನೀಡುವ ಉದ್ದೇಶದಿಂದ ದುಂದುವೆಚ್ಚ ಮಾಡುವುದರಲ್ಲಿ ಅರ್ಥವಿಲ್ಲ. ಇದಕ್ಕೂ ಮುಂಚೆ, ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡಿದಂತಹ ಲಾಟರಿ ದಂಧೆ, ಮಟ್ಕಾ ದಂಧೆಯನ್ನು ನಿಷೇಧ ಮಾಡಿದಾಗ ಲಕ್ಷಾಂತರ ಜನ ಆ ಕ್ಷಣಕ್ಕೆ ಉದ್ಯೋಗ ಕಳೆದುಕೊಂಡರೂ ಬಳಿಕ ಬೇರೊಂದು ಉದ್ಯೋಗದಲ್ಲಿ ತೊಡಗಿರುತ್ತಾರೆ. ನಾವು ಮಾಡುವ ಉದ್ಯೋಗ ಅರ್ಥಪೂರ್ಣವಾಗಿದ್ದರೆ ಸಮಾಜಕ್ಕೆ ಒಳ್ಳೆಯದು.

**ಗೋಡೆ ಶಿವರಾಜ್,** ಸಿರಿಗೇರಿ

### ಪ್ರತ್ಯೇಕ ಕಾರಾಗೃಹ ನಿರ್ಮಿಸಬೇಕಾದೀತು

ತುಮಕೂರು ಸಂಸದ ಜಿ.ಎಸ್.ಬಸವರಾಜ್ ಹಾಗೂ ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಅವರು ಪರಸ್ಪರ ಏಕವಚನದಲ್ಲಿ ಬೈದಾಡಿಕೊಂಡು ಛೀ... ಥೂ... ಎನ್ನುವ ಮಟ್ಟಕ್ಕೆ ಹೋಗಿದ್ದು ಜನಪ್ರತಿನಿಧಿಗಳ ಇನ್ನೊಂದು ಮುಖವನ್ನು ಜನರ ಮುಂದೆ ತೆರೆದಿಟ್ಟಿದೆ. ಕ್ಷೇತ್ರದ ಅಭಿವೃದ್ಧಿಗಾಗಿ ಹೊಸ ಯೋಜನೆಯನ್ನು ತರುವ ವಿಷಯದಲ್ಲಿ ಪರಸ್ಪರರು ತಮ್ಮನ್ನು ಒರೆಗಲ್ಲಿಗೆ ಹಚ್ಚಿಕೊಂಡು ಮತದಾರನ ಮುಂದೆ ಬೆತ್ತಲಾಗಿದ್ದಾರೆ.

ಚುನಾವಣೆಗೆ ಮೊದಲು ಆಶ್ವಾಸನೆ ನೀಡುತ್ತಾ, ಆಣೆ, ಪ್ರಮಾಣ ಹಾಕುತ್ತಾ, ಎಲ್ಲ ಹಂತದಲ್ಲಿಯೂ ಪ್ರಾಮಾಣಿಕವಾಗಿ ಮತ್ತು ಗೌರವಯುತವಾಗಿ ನಡೆದುಕೊಳ್ಳುತ್ತೇವೆ ಎಂದು ಹೇಳುವ ರಾಜಕಾರಣಿಗಳು, ಆಯ್ಕೆಯಾದ ನಂತರ ತಮ್ಮ ನಾಲಿಗೆಯನ್ನು ಹರಿಬಿಟ್ಟು ಏಕವಚನದಲ್ಲಿ ಬೈದಾಡಿಕೊಂಡು ಅನಾಗರಿಕರ ರೀತಿಯಲ್ಲಿ ವರ್ತಿಸುತ್ತಾರೆ. ಈಗಾಗಲೇ ರಾಜಕೀಯದಲ್ಲಿ ಹಣಬಲ, ತೋಳ್ಬಲ ಮತ್ತು ಕ್ರಿಮಿನಲ್ ಆರೋಪ ಹೊತ್ತವರ ಸಂಖ್ಯೆ ಹೆಚ್ಚಾಗಿದ್ದು, ಅವುಗಳ ವಿಚಾರಣೆಗಾಗಿಯೇ ಪ್ರತ್ಯೇಕ ನ್ಯಾಯಾಲಯ ಸ್ಥಾಪಿಸಲಾಗಿದೆ. ಇದೇ ರೀತಿ ಮುಂದುವರಿದರೆ ಅವರಿಗಾಗಿಯೇ ಪ್ರತ್ಯೇಕ ಕಾರಾಗೃಹ ನಿರ್ಮಿಸಬೇಕಾಗಬಹುದು. ಇಂತಹ ಸಂಸ್ಕೃತಿಯನ್ನು ಮತದಾರರು ಚುನಾವಣೆಯಲ್ಲಿ ಕೊನೆಗಾಣಿಸದಿದ್ದರೆ ಪ್ರಜಾಪ್ರಭುತ್ವದ ಅಡಿಪಾಯವೇ ಅಲುಗಾಡುತ್ತದೆ.

**ಗಣಪತಿ ನಾಯ್ಕ್,** ಕಾನಗೋಡ

#### 'ಬಿಳಿಯಾನೆ'

'ವಿಶ್ವ ಆನೆಯ ದಿನ'
ಕಳೆಯಿತು.
ಹಾಗೆ ನೋಡಿದರೆ,
ಪ್ರತಿದಿನವೂ ಸ್ಥಳೀಯ
'ರಾಜಕೀಯ
ಬಿಳಿಯಾನೆ'ಗಳ ದಿನ!
(ಸುಮ್ಮಾನ, ಸಮ್ಮಾನ).

**ಸಿ.ಪಿ.ಕೆ.,** ಮೈಸೂರು

### ಕನ್ಯೆಯರಿಗೆ ವರ್ಜ್ಯ ಈ ವರ!

ಭತ್ತದ ಕೃಷಿ ಅವನತಿಯತ್ತ ಸಾಗಿರುವುದರ ಬಗೆಗಿನ ವಸ್ತುಸ್ಥಿತಿಯನ್ನು ಸತೀಶ್ ಜಿ.ಕೆ. ತೀರ್ಥಹಳ್ಳಿ ತೆರೆದಿಟ್ಟಿದ್ದಾರೆ (ಸಂಗತ, ಆ. 14). ಹಿಂದೆ ಮಲೆನಾಡಿನಲ್ಲಿ ಭತ್ತ ಬೆಳೆಯುವುದು ಒಂದು ಆದರಣೀಯ ಉದ್ಯೋಗವಾಗಿತ್ತು. ಒಬ್ಬ ರೈತ ಜಾಸ್ತಿ ಭತ್ತ ಬೆಳೆಯುತ್ತಿದ್ದಾನೆಂದರೆ ಆತನಿಗೆ ತುಂಬಾ ಗೌರವ, ಮಾನ್ಯತೆ ಲಭಿಸುತ್ತಿದ್ದವು. ಆ ಊರಿಗೇ ಆತ ಒಬ್ಬ ದೊಡ್ಡ ಜನ ಅಂತ ಭಾವಿಸಲಾಗುತ್ತಿತ್ತು. ಒಬ್ಬ ವರನಿಗೆ ಹೆಣ್ಣು ಕೊಡಲು ಬರುವ ಕನ್ಯಾಪಿತೃಗಳು ಆ ಮನೆಯ ಕಣದಲ್ಲಿ ದೊಡ್ಡ ಭತ್ತದ ಕುತ್ತರೆ ಅಥವಾ ಹುಲ್ಲಿನ ಗೊಣವೆಗಳನ್ನು ನೋಡಿದರೆ, ಆ ವರನನ್ನು ಅಳಿಯನನ್ನಾಗಿ ಸ್ವೀಕರಿಸಲು ಆ ಒಂದು ಮಾನದಂಡವೇ ಸಾಕಾಗಿ ಬಿಡುತ್ತಿತ್ತು.


ಆದರೆ ಇಂದು ಪರಿಸ್ಥಿತಿ ಬಹಳ ಬದಲಾಗಿ ಹೋಗಿದೆ. ರೈತನನ್ನು ವರಿಸಲು ಹುಡುಗಿಯರೇ ಒಪ್ಪುತ್ತಿಲ್ಲ. ಅದರಲ್ಲೂ ಆತನೇನಾದರೂ ಭತ್ತ ಬೆಳೆಯುವ ಗದ್ದೆಯನ್ನು ಹೇರಳವಾಗಿ ಹೊಂದಿರುವವನೆಂದರೆ ಆ ಕಡೆ ತಲೆ ಹಾಕಿ ಕೂಡ ಮಲಗುವುದಿಲ್ಲ! ಭತ್ತದ ಕೃಷಿ ನಷ್ಟದಾಯಕ ಉದ್ಯೋಗ ಎಂದು ಭಾವಿಸಿ ಬಹುತೇಕ ರೈತರು ಭತ್ತ ಬೆಳೆಯುವ ಕಾಯಕದಿಂದ ದೂರ ಸರಿದು ಕೆಲವಾರು ವರ್ಷಗಳೇ ಕಳೆದಿವೆ. ಸರ್ಕಾರಗಳು ಎಚ್ಚೆತ್ತು, ಭತ್ತ ಬೆಳೆಯುವವರಿಗೆ ಪ್ರೋತ್ಸಾಹದಾಯಕ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ.

**ಚಾವಲ್ಮನೆ ಸುರೇಶ್ ನಾಯಕ್,** ಹಾಲ್ಮತ್ತೂರು, ಕೊಪ್ಪ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

## ಆಸ್ಪತ್ರೆಗಳಲ್ಲೂ ಹೆಚ್ಚು ಸಾವು

ಆಸ್ಪತ್ರೆಗಳಲ್ಲಿ ಅತಿಹೆಚ್ಚು ಸಾವು ದಾಖಲಾಗಿವೆ. ಕಳೆದ ಎರಡು ವರ್ಷಗಳ ಏಪ್ರಿಲ್–ಮಾರ್ಚ್ ಅವಧಿಗೆ ಹೋಲಿಸಿದರೆ, 2021ರಲ್ಲಿ ಸಾವಿನ ಪ್ರಮಾಣ ಭಾರಿ ಏರಿಕೆಯಾಗಿದೆ.






# ಗುಜರಾತ್: ಸತ್ಯ ನುಡಿವ ಮರಣ ನೋಂದಣಿ

ಒಂದನೇ ಪುಟದಿಂದ

ಸಾವಿನ ನಿಖರ ದತ್ತಾಂಶ ಇರಿಸಿಕೊಳ್ಳಬೇಕು ಎಂದು ಗುಜರಾತ್ ಹೈಕೋರ್ಟ್, ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದರೂ 2020ರಲ್ಲಿ ಆರಂಭಗೊಂಡ ಕೋವಿಡ್ ಸಾಂಕ್ರಾಮಿಕದ ಎರಡು ಅಲೆಗಳ ನಡುವಣ ಅವಧಿಯಲ್ಲಿ ಮೃತಪಟ್ಟವರ ಸಂಖ್ಯೆ 10,075 ಮಾತ್ರ ಎಂದು ಸರ್ಕಾರದ ವರದಿ ಹೇಳುತ್ತಿದೆ (ಈ ವರದಿ ಸಿದ್ಧವಾಗುತ್ತಿದ್ದ ಹೊತ್ತಿನ ಅಂಕಿ ಸಂಖ್ಯೆ). ಕೋವಿಡ್ ಬಿಕ್ಕಟ್ಟನ್ನು ಗುಜರಾತ್ ಅತ್ಯುತ್ತಮವಾಗಿ ನಿರ್ವಹಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಕೋವಿಡ್‌ನಿಂದಾಗಿ ಆಗಿರುವ ಸಾವಿನ ಸಂಖ್ಯೆ ಮತ್ತು ವಿನಾಶದ ದತ್ತಾಂಶವನ್ನು ಸರ್ಕಾರ ಮುಚ್ಚಿಟ್ಟಿದೆ ಎಂದು ಈಗ ದೊರೆತಿರುವ ಅಧಿಕೃತ ದಾಖಲೆಗಳೇ ಹೇಳುತ್ತಿವೆ.

ಗುಜರಾತ್‌ನ 170 ಪುರಸಭೆಗಳ ಪೈಕಿ, 68 ಪುರಸಭೆಗಳಲ್ಲಿ ದಾಖಲಾದ ಮರಣ ದಾಖಲಾತಿಗಳು ಲಭ್ಯವಾಗಿವೆ. ಮೃತಪಟ್ಟವರ ಮಾಹಿತಿಯನ್ನು ಒದಗಿಸುವ ಈ ದಾಖಲಾತಿಗಳನ್ನು ಮೊದಲಿಗೆ ಅಧಿಕಾರಿಗಳೇ ಭರ್ತಿ ಮಾಡಿದ್ದಾರೆ. ಇವೆಲ್ಲವೂ ಜನವರಿ 2019ರಿಂದ ಏಪ್ರಿಲ್ 2021ರ ಅವಧಿಯಲ್ಲಿ ಕೈಯಿಂದ ಬರೆದವುಗಳಾಗಿದ್ದು, ಈ ದಾಖಲಾತಿಯು ಸಾವಿರಾರು ಪುಟಗಳಲ್ಲಿದೆ.

ಲಭ್ಯವಾದ ಈ ದಾಖಲೆಯ ಪ್ರಕಾರ, 2019ರ ಮಾರ್ಚ್‌ನಿಂದ 2020ರ ಏಪ್ರಿಲ್ ಅವಧಿಗೆ ಹೋಲಿಸಿದರೆ 2020ರ ಮಾರ್ಚ್ ಮತ್ತು 2021ರ ಏಪ್ರಿಲ್ ಅವಧಿಯಲ್ಲಿ ಮೃತಪಟ್ಟವರ ಸಂಖ್ಯೆಯು ಬಹಳ ಹೆಚ್ಚು. ಹಿಂದಿನ ವರ್ಷದಲ್ಲಿ ಸಂಭವಿಸಿದ್ದಕ್ಕಿಂತ, 16,892 ಹೆಚ್ಚು ಸಾವಿನ ಪ್ರಕರಣಗಳು ದಾಖಲಾಗಿವೆ. ಈ 68 ಪುರಸಭೆಗಳ ವ್ಯಾಪ್ತಿಯಲ್ಲಿನ ಜನಸಂಖ್ಯೆಯು, ರಾಜ್ಯದ ಜನಸಂಖ್ಯೆಯ ಶೇ 6ರಷ್ಟು ಇದೆ. ರಾಜ್ಯದ ಜನಸಂಖ್ಯೆಯು 6.03 ಕೋಟಿ. ಪುರಸಭೆಯಲ್ಲಿನ ಸಾವುಗಳ ಸಂಖ್ಯೆಯನ್ನು ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಲೆಕ್ಕ ಹಾಕಿದರೆ, ಕೋವಿಡ್ ಸಾಂಕ್ರಾಮಿಕದಿಂದ, ಕನಿಷ್ಠ ಪಕ್ಷ 2.81 ಲಕ್ಷದಷ್ಟು ಹೆಚ್ಚುವರಿ ಸಾವುಗಳು ಆಗಿರಬೇಕು. ಈ ಸಂಖ್ಯೆಯು, ಗುಜರಾತ್ ರಾಜ್ಯ ಸರ್ಕಾರವು ಹೇಳಿರುವ ಸಾವಿನ ಸಂಖ್ಯೆಗಿಂತ 27 ಪಟ್ಟು ಹೆಚ್ಚು.

'ಕೋವಿಡ್‌ನಿಂದ ಆಗಿರುವ ಮರಣದ ಸಂಖ್ಯೆಯ ಬಹುಭಾಗವು ಅಧಿಕೃತ ಅಂಕಿಅಂಶದಲ್ಲಿ ಇಲ್ಲ ಎಂಬುದನ್ನು ಈ ನಗರ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಪತ್ತೆಯಾಗಿರುವ ಹೆಚ್ಚುವರಿ ಸಾವಿನ ಪ್ರಕರಣಗಳು ತೋರಿಸುತ್ತವೆ' ಎಂದು ಸಾರ್ವಜನಿಕ ಆರೋಗ್ಯದ ಹಾರ್ವರ್ಡ್‌ನ ಟಿ.ಎಚ್.ಚಾನ್ ಸ್ಕೂಲ್‌ನ ಸಾಂಕ್ರಾಮಿಕ ರೋಗ ವಿಭಾಗಗಳ ಪ್ರಾಧ್ಯಾಪಕರಾದ ಡಾ. ಕ್ಯಾರೊಲಿನ್ ಬ್ಯೂಕಿ ಹೇಳಿದ್ದಾರೆ.

ಸಾಮಾನ್ಯ ವರ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾದ ಎಲ್ಲ ಸಾವುಗಳು ಕೋವಿಡ್–19 ನಿಂದಲೇ ಆದಂಥವುಗಳು ಎಂದು ಹೇಳಲಾಗದು. ಆದರೆ, ಆ ಸಾವುಗಳು ಸಾಂಕ್ರಾಮಿಕ ಅಥವಾ ಅದರಿಂದಾಗಿ ಉಂಟಾದ ಸಾರ್ವಜನಿಕ ಆರೋಗ್ಯ ಸೇವೆಯಲ್ಲಿನ ವ್ಯತ್ಯಯದಿಂದ ಆದಂಥವು ಎನ್ನುತ್ತಾರೆ ತಜ್ಞರು.


## ಸತ್ತವರ ಎಣಿಕೆ

ಎಲ್ಲ ರಾಜ್ಯಗಳಂತೆ ಗುಜರಾತಿನಲ್ಲಿಯೂ ಸ್ಥಳೀಯ ಮಾಧ್ಯಮಗಳು ಸಾವಿನ ಎಣಿಕೆಯ ಗೊಂದಲದ ಬಗ್ಗೆ ಬೆಳಕು ಚೆಲ್ಲಿದವು. ಎರಡನೇ ಅಲೆಯು ಗರಿಷ್ಠ ಮಟ್ಟದಲ್ಲಿ ಇದ್ದ ಸಮಯದಲ್ಲಿ ಸರ್ಕಾರ ನೀಡಿದ ದತ್ತಾಂಶಗಳಿಗೂ, ಚಿತಾಗಾರದ ದತ್ತಾಂಶಗಳಿಗೂ ವ್ಯತ್ಯಾಸಗಳು ಇರುವುದು ಕಂಡುಬಂದಿದೆ. ಸರ್ಕಾರ ಈ ವಿಚಾರದಲ್ಲಿ ಅಸ್ಪಷ್ಟ ನಿಲುವು ಹೊಂದಿದೆ ಎಂಬ ಆರಂಭಿಕ ಸೂಚನೆಗಳು ಸಿಕ್ಕಿದ್ದವು.

ಜನನ ಮತ್ತು ಮರಣದ ದಾಖಲೆಗಳು ರಾಷ್ಟ್ರೀಯ ಮಟ್ಟದಲ್ಲಿ ಸಂಗ್ರಹಗೊಳ್ಳುವ 'ನಾಗರಿಕ ನೋಂದಣಿ ವ್ಯವಸ್ಥೆ'ಯ (ಸಿಆರ್‌ಎಸ್) ದತ್ತಾಂಶವನ್ನು ಆಧರಿಸಿ ಹೆಚ್ಚುವರಿ ಸಾವುಗಳು ಸಂಭವಿಸಿರುವ ಮುನ್ಸೂಚನೆಯನ್ನು ಮಾಧ್ಯಮಗಳು ನೀಡಿದ್ದವು. ಸಿಆರ್‌ಎಸ್ ಪರಿಷ್ಕರಣೆ ಆಗಲು ಸಮಯ ತೆಗೆದುಕೊಳ್ಳುತ್ತದೆ ಎಂದು ಹೇಳುತ್ತಾ, ಕೇಂದ್ರ ಸರ್ಕಾರ ಈ ವರದಿಗಳನ್ನು ತಳ್ಳಿಹಾಕಿತ್ತು.

(ಚಿತ್ರ 2: ಕೇಡ್‌ಬ್ರಮ ನಗರಸಭೆಯ ಮರಣ ನೋಂದಣಿಯ ಒಂದು ಪುಟ ಚಿತ್ರ: ಶ್ರೀಗಿರೀಶ್ ಜಾಲಿಹಾಳ್)

'ದತ್ತಾಂಶ ಸಂಗ್ರಹಣೆ, ಸಂಯೋಜನೆ ಮತ್ತು ಸಂಖ್ಯೆಗಳನ್ನು ಪ್ರಕಟಿಸುವ ಪ್ರಕ್ರಿಯೆಯನ್ನು ಸಿಆರ್‌ಎಸ್ ಅನುಸರಿಸುತ್ತದೆ. ಆದರೂ ಇದೊಂದು ದೀರ್ಘಾವಧಿಯ ಪ್ರಕ್ರಿಯೆಯಾಗಿದೆ. ಯಾವುದೇ ಸಾವಿನ ಲೆಕ್ಕವು ಇಲ್ಲಿ ತಪ್ಪುವುದಿಲ್ಲ. ಈ ಸಂಖ್ಯೆಗಳನ್ನು ಸಾಮಾನ್ಯವಾಗಿ ಮುಂದಿನ ವರ್ಷ ಪ್ರಕಟಿಸಲಾಗುತ್ತದೆ' ಎಂದು ಆಗಸ್ಟ್ 4ರಂದು ಹೊರಡಿಸಿದ್ದ ಪತ್ರಿಕಾ ಪ್ರಕಟಣೆಯಲ್ಲಿ ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿತ್ತು.




ಹೀಗಾಗಿ ಪ್ರಾಥಮಿಕ ಮೂಲದಿಂದ ಸಾವಿನ ದಾಖಲೆಗಳ ದತ್ತಾಂಶವನ್ನು ಸಂಗ್ರಹಿಸಲು ಮತ್ತು ವಿಶ್ಲೇಷಿಸಲು 'ರಿಪೋರ್ಟರ್ಸ್ ಕಲೆಕ್ಟಿವ್'ಗೆ ಮೂರು ತಿಂಗಳು ತೆಗೆದುಕೊಂಡಿತು. ಮೂಲದಿಂದಲೇ ಸಾವಿನ ದತ್ತಾಂಶಗಳನ್ನು ಸಿಎಸ್‌ಆರ್ ಸಂಗ್ರಹಿಸುತ್ತದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2019-20ರ ಪ್ರಕಾರ ಗುಜರಾತ್‌ನಲ್ಲಿ ಶೇ 93ರಷ್ಟು ಸಾವುಗಳು ದಾಖಲಾಗಿವೆ. ವಿವಿಧ ಕಾರಣಗಳಿಂದ ಶೇ 7ರಷ್ಟು ದಾಖಲಾಗದೇ ಹೋಗಿವೆ. ಕುಟುಂಬದಲ್ಲಿ ಸಂಭವಿಸಿದ ಸಾವನ್ನು ವರದಿ ಮಾಡಲು ಜನರು ಸ್ವಲ್ಪ ಸಮಯ ತೆಗೆದುಕೊಳ್ಳುತ್ತಾರೆ. ಮೂಲದಿಂದ ದತ್ತಾಂಶ ಸಂಗ್ರಹವಾಗುತ್ತದೆ. ನಗರ ಪ್ರದೇಶಗಳಲ್ಲಿ ಪುರಸಭೆಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ಜಿಲ್ಲಾ ಕೇಂದ್ರದವರೆಗೆ ಡಿಜಿಟಲೀಕೃತ ಸಿಆರ್‌ಎಸ್‌ನಲ್ಲಿ ರಾಜ್ಯ ಮಟ್ಟದ ಚಿತ್ರಣವನ್ನು ಪರಿಷ್ಕರಿಸಲಾಗುತ್ತದೆ. ಆದರೆ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಸಮನ್ವಯ ಮತ್ತು ಮೌಲ್ಯಮಾಪನಕ್ಕೆ ಸಮಯ ತೆಗೆದುಕೊಳ್ಳುತ್ತದೆ. ಸಾಂಕ್ರಾಮಿಕ ರೋಗದಿಂದಾಗಿ ಹೆಚ್ಚಿದ ಸಾವುಗಳ ಬಗ್ಗೆ ತಜ್ಞರ ಸ್ವತಂತ್ರ ವಿಶ್ಲೇಷಣೆಯನ್ನು ತಡೆಹಿಡಿಯಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಲು ಇದು ಕಾರಣ.

'ರಾಷ್ಟ್ರೀಯ ಮಟ್ಟದಲ್ಲಿ ಸಿಆರ್‌ಎಸ್ ನೈಜ ದತ್ತಾಂಶ ಕಾಣಸಿಗಲು ಎರಡು ವರ್ಷಗಳು ಬೇಕಾಗಬಹುದು. ಆದರೆ ಅಂತಿಮ ಸಿಆರ್‌ಎಸ್ ದತ್ತಾಂಶಕ್ಕೆ ಕಾಯದೇ, ಮರಣ ಪ್ರಮಾಣವನ್ನು ತಿಳಿಯಲು ಅತ್ಯುತ್ತಮ ಪ್ರಾಥಮಿಕ ಮೂಲವಾದ ಪುರಸಭೆಯ ಸಾವಿನ ದಾಖಲಾತಿಗಳನ್ನು ಗಮನಿಸಬಹುದು' ಎಂದು ಕೇಂದ್ರ ಸರ್ಕಾರಿ ಸಂಸ್ಥೆಯಲ್ಲಿ ಜನಸಂಖ್ಯಾಶಾಸ್ತ್ರದ ಮೇಲೆ ಕೆಲಸ ಮಾಡುತ್ತಿದ್ದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


### ನೈಜ ಸಾವು ಎಷ್ಟು?

2020ರ ಬಳಿಕ ಕೋವಿಡ್‌ನಿಂದ ರಾಜ್ಯದಲ್ಲಿ 10,075 ಜನರು ಮೃತಪಟ್ಟಿದ್ದಾರೆ ಎಂದು ಗುಜರಾತ್ ಸರ್ಕಾರ ಹೇಳುತ್ತದೆ. ಆದರೆ 2021ರ ಏಪ್ರಿಲ್ 30ಗಳೊಂದರಲ್ಲೇ 68 ಪುರಸಭೆಗಳ ವ್ಯಾಪ್ತಿಯಲ್ಲಿ 12,757 ಸಾವುಗಳು ಸಂಭವಿಸಿವೆ ಎಂದು ಮರಣ ನೋಂದಣಿ ಉಲ್ಲೇಖಿಸಿದೆ.




### ಮೇನಲ್ಲಿ ಹೆಚ್ಚು ಸಾವು

2021ರ ಏಪ್ರಿಲ್‌ಗೆ ಹೋಲಿಸಿದರೆ, ಮೇ 30ಗಳಲ್ಲಿ ಅಧಿಕ ಸಾವು ಸಂಭವಿಸಿವೆ.




ಕೃಪೆ: ದಿ ರಿಪೋರ್ಟರ್ಸ್ ಕಲೆಕ್ಟಿವ್

ಗುಜರಾತ್‌ನ ಹೆಚ್ಚುವರಿ ಸಾವಿನ ಸಂಖ್ಯೆಯ ವ್ಯಾಪ್ತಿ ಸೀಮಿತ ಎಂದೇ ಹೇಳಬೇಕು. ಏಕೆಂದರೆ, ಅಧ್ಯಯನಕ್ಕೆ ಆಯ್ದುಕೊಂಡ ಪುರಸಭೆಗಳಿಂದ ಪಡೆದ ದತ್ತಾಂಶವು ಗ್ರಾಮೀಣ ಪ್ರದೇಶದ ಮಾಹಿತಿಯನ್ನು ಒಳಗೊಂಡಿಲ್ಲ. ಒಟ್ಟು ಜನಸಂಖ್ಯೆಯ ಶೇ 57ರಷ್ಟು ಜನರು ಗ್ರಾಮೀಣ ಪ್ರದೇಶದವರಾಗಿದ್ದು, ಅವರಿಗೆ ಆರೋಗ್ಯ ಸೌಕರ್ಯವು ಕನಿಷ್ಠ ಪ್ರಮಾಣದಲ್ಲಿ ಮಾತ್ರ ಲಭ್ಯವಿದೆ. ಮೂರು ಪುರಸಭೆಗಳಲ್ಲಿ ಮಾತ್ರ ಮೇ ಅಂತ್ಯದವರೆಗಿನ ಮಾಹಿತಿಯು ದಾಖಲಾಗಿದ್ದರಿಂದ, 2021 ಮೇ ತಿಂಗಳ ಅಂಕಿ–ಅಂಶಗಳನ್ನು ಕೈಬಿಡಲಾಗಿದೆ. ಮತ್ತು ಈ ತಿಂಗಳಲ್ಲಿನ ಸಾವಿನ ಸಂಖ್ಯೆ ಏಪ್ರಿಲ್‌ಗಿಂತ ಹೆಚ್ಚು ಇತ್ತು ಎಂಬುದನ್ನು ಸರ್ಕಾರಿ ಅಂಕಿ–ಅಂಶಗಳೂ ಹೇಳಿವೆ.

2021ರ ಏಪ್ರಿಲ್ ತಿಂಗಳೊಂದರಲ್ಲೇ ರಾಜ್ಯದ ಶೇ 6 ರಷ್ಟು ಜನಸಂಖ್ಯೆಯು ಇರುವ ಪ್ರದೇಶದಲ್ಲಿ 10,238 ಹೆಚ್ಚುವರಿ ಸಾವುಗಳಾಗಿವೆ. ಆದರೆ, ಸರ್ಕಾರವು ಇಡೀ ಸಾಂಕ್ರಾಮಿಕದ ಅವಧಿಯಲ್ಲಿ ರಾಜ್ಯದಾದ್ಯಂತ ತೋರಿಸಿರುವ ಅಧಿಕೃತ ಸಾವಿನ ಸಂಖ್ಯೆ ಕೇವಲ 10,077.

ಈ ವಿಧಾನದಲ್ಲಿ ಹೇಳುವುದಾದರೆ, ರಾಜ್ಯದಾದ್ಯಂತ ಏಪ್ರಿಲ್ ಒಂದೇ ತಿಂಗಳಲ್ಲಿ 1.71 ಲಕ್ಷ ಹೆಚ್ಚುವರಿ ಸಾವುಗಳಾಗಿವೆ. ಕೊರೊನಾ ವೈರಸ್‌ನ ಅಲೆ ತೀವ್ರವಾಗಿದ್ದ ಮೇ ತಿಂಗಳಲ್ಲಿನ ಸಾವಿನ ಸಂಖ್ಯೆ ಇನ್ನಷ್ಟೇ ಲಭ್ಯವಾಗಬೇಕಿದೆ.

ಜಿಲ್ಲಾಡಳಿತ ನೀಡಿರುವ ಸಾವಿನ ಲೆಕ್ಕವೂ ನಿಜವನ್ನು ಹೇಳುತ್ತಿಲ್ಲ. ಉದಾಹರಣೆಗೆ, ಸೌರಾಷ್ಟ್ರ ಪ್ರಾಂತದ ಸುರೇಂದ್ರನಗರ ಜಿಲ್ಲೆ. ಅದರ ಜನಸಂಖ್ಯೆ 17.56 ಲಕ್ಷ (2011ರ ಜನಗಣತಿ ಪ್ರಕಾರ). ಸರ್ಕಾರದ ಪ್ರಕಾರ, ಆ ಜಿಲ್ಲೆಯಲ್ಲಿ ಕೋವಿಡ್–19ನಿಂದ ಮೃತಪಟ್ಟವರು 136 ಮಂದಿ ಮಾತ್ರ. ಆದರೆ, ಆ ಜಿಲ್ಲೆಯ ಶೇ 14ರಷ್ಟು ಜನಸಂಖ್ಯೆ ಇರುವ ಪುರಸಭೆಯೊಂದರ ಮರಣ ನೋಂದಣಿ ಪುಸ್ತಕ ಹೇಳುವ ಪ್ರಕಾರ, ಮಾರ್ಚ್–ಏಪ್ರಿಲ್ ಅವಧಿಯಲ್ಲಿ ಅಲ್ಲಿ 1,210 ಹೆಚ್ಚುವರಿ ಸಾವುಗಳಾಗಿವೆ!

ಈ ಬಗ್ಗೆ ಸ್ಪಷ್ಟ ಮಾರ್ಗಸೂಚಿ ಇದ್ದರೂ, ಭಾರತದಲ್ಲಿ ಕೋವಿಡ್–19ನಿಂದ ಆದ ಬಹಳಷ್ಟು ಸಾವುಗಳು ದಾಖಲಾಗಿಲ್ಲ ಎಂಬುದು ತೋರುತ್ತದೆ; ಇದಕ್ಕೆ ಹಲವು ಕಾರಣಗಳು ಇರಬಹುದು. ಕೆಲವು ಪ್ರಕರಣಗಳಲ್ಲಿ, ಕೋವಿಡ್‌ನಿಂದ ಮೃತಪಟ್ಟವರ ಮೇಲೆ ನಿಗಾ ವಹಿಸದೇ ಇರುವುದು ಕಾರಣವಾಗಿರಬಹುದು' ಎನ್ನುತ್ತಾರೆ, ಲಂಡನ್‌ನ ಮಿಡಲ್‌ಎಸೆಕ್ಸ್ ವಿಶ್ವವಿದ್ಯಾಲಯದ ಗಣಿತವಿಜ್ಞಾನಿ ಮುರಾದ್ ಬನ್ಜಿ.

ಕೆಲವು ರಾಜ್ಯ ಸರ್ಕಾರಗಳು, ಕೋವಿಡ್–19 ಮರಣ ದಾಖಲೆಯ ಮಾರ್ಗಸೂಚಿಯನ್ನು ಉದ್ದೇಶಪೂರ್ವಕವಾಗಿಯೇ ಕಡೆಗಣಿಸಿವೆ ಎಂದು ತೋರುತ್ತದೆ. ಡೆತ್ ಆಡಿಟ್ ಸಮಿತಿಯು, ಬೇರೆ ಕಾಯಿಲೆಯಿಂದ ಮೃತಪಟ್ಟ ಕೋವಿಡ್ ರೋಗಿಗಳ ಸಾವನ್ನು ಅಧಿಕೃತ ಅಂಕಿ–ಸಂಖ್ಯೆಯಿಂದ ಹೊರಗಿಟ್ಟಿರಬಹುದು. ಗುಜರಾತ್ ಸೇರಿದಂತೆ ಹಲವು ರಾಜ್ಯಗಳಿಂದ ಇಂಥದೇ ವರದಿಗಳು ಬಂದಿವೆ ಎಂದೂ ಅವರು ಹೇಳಿದ್ದಾರೆ.

ಮರಣ ದಾಖಲಾತಿಗೆ ಅಪೂರ್ಣ ಮಾಹಿತಿ ನೀಡುವುದು, ಸಾವಿನ ನಿಖರ ಕಾರಣ ನಮೂದಿಸದೇ ಇರುವುದು ಸೇರಿದಂತೆ ರಾಜಕೀಯ ಕಾರಣಕ್ಕಾಗಿ ಮಾಹಿತಿಯನ್ನು ಮುಚ್ಚಿಡುವುದರಿಂದ ಭಾರತದಲ್ಲಿ ಕೋವಿಡ್ ಸಂಬಂಧಿ ಸಾವುಗಳ ನಿಖರ ಲೆಕ್ಕ ದೊರೆಯುವುದೇ ಅಸಾಧ್ಯ. ಹೀಗಾಗಿ, ಕೋವಿಡ್–19 ಸಂಬಂಧಿ ಸಾವುಗಳ ಬಗ್ಗೆ ಸರ್ಕಾರದ ಮಾಹಿತಿ ಲಭ್ಯವಾಗದೇ ಹೋದಾಗ, ಜಾಗತಿಕವಾಗಿ ಶಿಫಾರಸು ಮಾಡಲಾದ 'ಹೆಚ್ಚುವರಿ ಸಾವುಗಳ' ದತ್ತಾಂಶವನ್ನು ಬಳಸಬೇಕು ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಇದರಿಂದ ಆಗಿರುವ ಹಾನಿಯ ಪ್ರಮಾಣ ಎಷ್ಟು ಎಂಬುದು ವೇದ್ಯವಾಗುತ್ತದೆ ಎಂದು ಅವರು ಹೇಳುತ್ತಾರೆ.

ಪುರಸಭೆಗಳಿಂದ ಪಡೆದ ದತ್ತಾಂಶ ಆಧರಿಸಿ ಪಡೆದಿರುವ ಫಲಿತಾಂಶವನ್ನು ಮರುಪರಿಶೀಲಿಸುವುದಕ್ಕಾಗಿ, ಬೋಟಾದ್ ಜಿಲ್ಲೆಯ ಪುರಸಭೆ, ನಗರಸಭೆ ಹಾಗೂ ಗ್ರಾಮ ಪಂಚಾಯಿತಿಗಳೆಲ್ಲದರಿಂದ ಮರಣ ದಾಖಲಾತಿಯನ್ನು ರಿಪೋರ್ಟರ್ಸ್ ಕಲೆಕ್ಟಿವ್ ಪಡೆಯಿತು.


ಈ ಜಿಲ್ಲೆಯಲ್ಲಿ ಕೋವಿಡ್ ಸಂಬಂಧಿ ಸಾವುಗಳು 42 ಎಂದು ಸರ್ಕಾರ ಹೇಳಿದೆ. ಆದರೆ, ಪಡೆದಿದ್ದ ಮರಣ ದಾಖಲಾತಿಗಳ ಪ್ರಕಾರ ಆ ಜಿಲ್ಲೆಯಲ್ಲಿ ಮಾರ್ಚ್ 2020– ಜೂನ್ 2021ರ ಅವಧಿಯಲ್ಲಿ ವರದಿಯಾದ ಹೆಚ್ಚುವರಿ ಸಾವಿನ ಸಂಖ್ಯೆ 3,117. ಈ ಸಂಖ್ಯೆಯು, ಸರ್ಕಾರ ನೀಡಿದ ಅಧಿಕೃತ ಸಂಖ್ಯೆಗಿಂತ 74 ಪಟ್ಟುಗಳಿಗಿಂತಲೂ ಹೆಚ್ಚು!

## ದತ್ತಾಂಶ ಪಾರದರ್ಶಕತೆ


ಗುಜರಾತ್‌ನ 68 ಪುರಸಭೆಗಳಿಂದ ದತ್ತಾಂಶವನ್ನು ಪಡೆದಿರುವುದು 'ರಿಪೋರ್ಟರ್ಸ್ ಕಲೆಕ್ಟಿವ್'ನ ಸಾಮೂಹಿಕ ಯತ್ನದ ಭಾಗವಾಗಿದ್ದು, ದೇಶಾದ್ಯಂತ ಸಂಭವಿಸಿರುವ ಅಧಿಕ ಸಾವಿನ ದತ್ತಾಂಶವನ್ನು ಸಂಗ್ರಹಿಸಿ, ಪ್ರಕಟಿಸುವ ಉದ್ದೇಶ ಹೊಂದಿದೆ. ವರದಿ ಮಾಡುವ ಸಮಯದಲ್ಲಿ, 100ಕ್ಕೂ ಹೆಚ್ಚು ಗುಜರಾತ್ ಪುರಸಭೆಗಳು ಮತ್ತು ಇತರ ರಾಜ್ಯಗಳ 35ಕ್ಕೂ ಹೆಚ್ಚು ಜಿಲ್ಲೆಗಳಿಂದ ಸಾವಿನ ದಾಖಲೆಗಳನ್ನು ಒಟ್ಟುಗೂಡಿಸಲಾಗಿದೆ.

ಈ ದತ್ತಾಂಶವನ್ನು ಆನ್‌ಲೈನ್ ವಾಲ್ ಆಫ್ ಗ್ರೀಫ್‌ನಲ್ಲಿ ಕ್ರಿಯೇಟಿವ್ ಕಾಮನ್ಸ್ ಪರವಾನಗಿ ಅಡಿಯಲ್ಲಿ ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಲಾಗುತ್ತಿದೆ. ಇದು ನಾಗರಿಕ ಸಮಾಜ, ಮಾಧ್ಯಮ ಸಂಸ್ಥೆಗಳು ಮತ್ತು ಆಸಕ್ತ ವ್ಯಕ್ತಿಗಳ ನಡುವಿನ ಸಹಯೋಗದ ಪ್ರಯತ್ನವಾಗಿದ್ದು, ಸಾಂಕ್ರಾಮಿಕ ರೋಗದಿಂದ ಕಣ್ಮರೆಯಾದವರನ್ನು ಒಟ್ಟಾಗಿ ನಾವು ನೆನಪಿಸಿಕೊಳ್ಳುತ್ತೇವೆ.

ವಿಪತ್ತನ್ನು ಅರ್ಥಮಾಡಿಕೊಳ್ಳಲು ಇಬ್ಬರು ವರದಿಗಾರರ ಪೈಕಿ ಒಬ್ಬರು ಜೂನ್‌ನಲ್ಲಿ ಗುಜರಾತ್ ಮೂಲಕ ಪ್ರಯಾಣಿಸಿದ್ದರು. ಬಹುಪಾಲು ಪುರಸಭೆಗಳ ಮಾಹಿತಿಯ ಪ್ರಕಾರ, ಇತರ ವಯೋಮಾನದವರಿಗೆ ಹೋಲಿಸಿದರೆ, 50ರಿಂದ 80 ವಯೋಮಾನದವರಲ್ಲಿ ಸಾವು ತೀವ್ರ ಏರಿಕೆ ದಾಖಲಿಸಿದೆ ಎಂದು ದತ್ತಾಂಶಗಳನ್ನು ವಿಶ್ಲೇಷಿಸಿದಾಗ ತಿಳಿದುಬಂದಿದೆ. ಆಸ್ಪತ್ರೆಗಳಲ್ಲಿ ಮರಣ ಹೊಂದಿದವರ ಸಂಖ್ಯೆ ಎರಡನೇ ಅಲೆಯ ವೇಳೆ ವಿಪರೀತ ಹೆಚ್ಚಾಗಿರುವುದು ಕಂಡುಬಂದಿದೆ.




## ಗುಂಡಣ್ಣ




## ದಿನ ಭವಿಷ್ಯ

ಮಂಗಳವಾರ ಆಗಸ್ಟ್ 17, 2021

**ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮಖಾ ದಶಮಿ ಗಂ. 49-53 (ರಾ. 2-12) ಮಂಗಳವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 48-12 (ರಾ. 1-32) ವೈಧೃತಿ ನಾಮ ಯೋಗ ಗಂ. 46-44 ತೈತಲ ಕರಣ ಗಂ. 22-57 ವಿಷ ಗಂ. 5-29 ಅಮೃತ ಗಂ. 27-53 :** ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30: ಸೂರ್ಯೋದಯ: 6-11 ಸೂರ್ಯಾಸ್ತ: 6-36 ಅದೃಷ್ಟ ಸಂಖ್ಯೆ 3, 5

**ಮೇಷ:** ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲ. ಸಾಮಾಜಿಕ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತೋಷವನ್ನು ಅನುಭವಿಸಲಿದ್ದೀರಿ. ಮಕ್ಕಳಿಂದ ಆರ್ಥಿಕ ಸಹಕಾರ ದೊರೆಯುವ ಸಾಧ್ಯತೆ.

**ವೃಷಭ:** ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಸಂಗಾತಿಯ ಕೋಪವನ್ನು ಎದುರಿಸಬೇಕಾದೀತು. ಮನೆಯವರ ಪ್ರಯಾಣಕ್ಕಾಗಿ ಖರ್ಚು. ಬಂಧುಗಳ ಮನೆಯ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಅವಕಾಶ.

**ಮಿಥುನ:** ನಿಮ್ಮ ಒಳ್ಳೆಯತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ಅವಶ್ಯಕತೆಗಿಂತ ಹೆಚ್ಚಾಗಿ ಹಣಕಾಸಿನ ನೆರವು ದೊರೆಯಲಿದೆ. ಶೀಘ್ರದಲ್ಲೇ ಸಂತೋಷಕರ ಸುದ್ದಿಯೊಂದನ್ನು ಆಲಿಸಲಿದ್ದೀರಿ.

**ಕರ್ಕಾಟಕ:** ಆರ್ಥಿಕವಾಗಿ ನಾನಾರೀತಿಯಲ್ಲಿ ಧನ ಸಂಗ್ರಹವಾಗಿ ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಅನುಕೂಲ. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿ ಲಾಭಾಂಶ ಹೆಚ್ಚಳ. ರಾಜಕೀಯದಲ್ಲಿ ಸೂಕ್ತ ಸ್ಥಾನ ದೊರಕಲಿದೆ.

**ಸಿಂಹ:** ಕೆಲಸ ಕಾರ್ಯಗಳಲ್ಲಿ ಅನುಕೂಲಕ. ಉದ್ಯೋಗ ಕ್ಷೇತ್ರದಲ್ಲಿ ಮೇಲಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವಿಶ್ವಾಸದಿಂದ ಉದ್ಯೋಗ ವ್ಯಾಪಾರಗಳಲ್ಲಿ ತೊಡಗಿಕೊಳ್ಳುವುದರಿಂದ ಹೆಚ್ಚಿನ ಲಾಭ ಗಳಿಸಲಿದ್ದೀರಿ.

**ಕನ್ಯಾ:** ಉದ್ಯೋಗಾಕಾಂಕ್ಷಿಗಳಿಗೆ ಅನಿರೀಕ್ಷಿತವಾಗಿ ಉದ್ಯೋಗಾವಕಾಶ ದೊರಕಲಿದೆ. ವಿದೇಶಿ ವ್ಯವಹಾರಸ್ಥರೊಂದಿಗಿನ ಸಂಪರ್ಕದಿಂದಾಗಿ ವ್ಯವಹಾರಕ್ಕೊಂದು ತಿರುವು. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಗತಿ.

**ತುಲಾ:** ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ನೌಕರವರ್ಗಕ್ಕೆ ಕೆಲಸಗಳಿಂದ ವಿರಾಮ ದೊರೆತು ಮನೆಯವರೊಂದಿಗೆ ದೂರದೂರಿನ ಪ್ರಯಾಣದ ಸಾಧ್ಯತೆ. ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸಿ.

**ವೃಶ್ಚಿಕ:** ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳು ತೆರೆದುಕೊಳ್ಳುವ ಸಾಧ್ಯತೆ. ಖರೀದಿ ಮಾರಾಟ ವ್ಯವಹಾರಗಳಲ್ಲಿ ಉತ್ತಮ ಲಾಭ. ಸಾಹಿತಿ, ಬುದ್ಧಿಜೀವಿಗಳಿಗೆ ಗೌರವ ಪ್ರಾಪ್ತವಾಗುವ ಲಕ್ಷಣಗಳು ಕಂಡುಬರುತ್ತಿವೆ.

**ಧನು:** ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆಯಾಗಲಿವೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ. ಶಾರೀರಿಕ ಆಯಾಸ ತೋರಿಬಂದರೂ ದಿನದ ಅಂತ್ಯದಲ್ಲಿ ಕೆಲಸಗಳಲ್ಲಿ ಪ್ರಗತಿ.

**ಮಕರ:** ಉನ್ನತ ಅಧ್ಯಯನಕ್ಕೆ ಉತ್ತೇಜನ ದೊರೆತು ವಿದೇಶಕ್ಕೆ ಪ್ರಯಾಣ ಸಾಧ್ಯತೆ. ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ವಿಶೇಷ ಭೋಜನಕೂಟದಲ್ಲಿ ಭಾಗಿಯಾಗುವ ಸಾಧ್ಯತೆ.

**ಕುಂಭ:** ದೇವತಾನುಗ್ರಹದಿಂದ ಶುಭ ಕಾರ್ಯಗಳು ನಿಮ್ಮ ಮನದಿಚ್ಛೆಯಂತೆ ನೆರವೇರುವುದರಿಂದ ನೆಮ್ಮದಿ. ಧೈರ್ಯ, ಆತ್ಮವಿಶ್ವಾಸ ಮತ್ತು ಪ್ರಯತ್ನ ಬಲದಿಂದಾಗಿ ಕಾರ್ಯಾನುಕೂಲ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ.

**ಮೀನ:** ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಉತ್ತಮವಾದ ಕಾಲ. ಮನಸ್ಸಿಟ್ಟು ಕೆಲಸವನ್ನು ಮಾಡಿದಲ್ಲಿ ವಿದೇಶಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಭೂ ಖರೀದಿ ವ್ಯವಹಾರವನ್ನು ಮಾಡಲು ಸಕಾಲವಾಗಿದೆ.

**ನಿಮ್ಮ ಜನ್ಮದಿನ 17-ಆಗಸ್ಟ್** ಇಂದು ಅತ್ಯಂತ ಶುಭದಾಯಕ. ಸಂಗಾತಿಯ ಪ್ರಭಾವವವನ್ನು ಒಪ್ಪಿಕೊಳ್ಳುವುದೇ ಅನಿವಾರ್ಯ. ಉತ್ತಮ ಸಾಂಸಾರಿಕ ಜೀವನ ನಡೆಸಲಿದ್ದೀರಿ. ಜೀವನದಲ್ಲಿ ಅನೇಕ ಏರುಪೇರುಗಳು ಉಂಟಾಗುವ ಸಾಧ್ಯತೆ ಇದ್ದರೂ ಧೃತಿಗೆಡುವ ಅವಶ್ಯಕತೆ ಕಾಣದು. ನೌಕರಿಗಿಂತಲೂ ಸ್ವಂತಂತ್ರ ಉದ್ಯೋಗವನ್ನು ಅವಲಂಬಿಸಿ ಯಶಸ್ಸು.

## ಬೆರಗಿನ ಬೆಳಕು

ಗುರುರಾಜ ಕರಜಗಿ



### ದ್ವಂದ್ವಾತೀತತೆ

**ಸೌಂದರ್ಯದೊಳ್ ದ್ವಂದ್ವ, ಬಾಂಧವ್ಯದೊಳ್ ದ್ವಂದ್ವ |**
**ದ್ವಂದ್ವವೀ ಲೋಕ ಸಹವಾಸಗಳೊಳೆಲ್ಲ ||**
**ಮುಂದೆ ನೀನಾವುಭಯಗಳ ದಾಟಿ ಸಾಗುತಿರೆ |**
**ಬಂಧಮೋಚನ ನಿನಗೆ – ಮಂಕುತಿಮ್ಮ || 450 ||**

**ಪದ-ಅರ್ಥ:** ನೀನಾವುಭಯಗಳ = ನೀನು + ಆ + ಉಭಯಗಳ, ಬಂಧಮೋಚನ = ಬಂಧದಿಂದ ಮುಕ್ತಿ.

**ವಾಚ್ಯಾರ್ಥ:** ಸೌಂದರ್ಯದಲ್ಲಿ, ಬಾಂಧವ್ಯದಲ್ಲಿ ದ್ವಂದ್ವವಿದೆ. ಲೋಕದ ಎಲ್ಲ ಸಹವಾಸಗಳಲ್ಲಿ ದ್ವಂದ್ವವಿದೆ. ಮುಂದೆ ನೀನು ಈ ಉಭಯ ದ್ವಂದ್ವಗಳನ್ನು ದಾಟಿ ಸಾಗಿದರೆ, ಬಂಧದಿಂದ ಮುಕ್ತಿ.

**ವಿವರಣೆ:** ಬದುಕಿನಲ್ಲಿ ಎಲ್ಲೆಡೆಯೂ ದ್ವಂದ್ವವಿದೆ. ಕೆಲವರು ದ್ವಂದ್ವವನ್ನು ಸಮಸ್ಯೆಯೆಂದು ಭಾವಿಸುತ್ತಾರೆ. ದ್ವಂದ್ವಗಳು, ತೀರ್ಮಾನವನ್ನು ಮಾಡುವಲ್ಲಿ ಅಡ್ಡಿ ಬರುತ್ತವೆ ಎನ್ನುತ್ತಾರೆ. ನಿಜವಾಗಿ ನೋಡಿದರೆ ದ್ವಂದ್ವಗಳಿಲ್ಲದೆ ಬಾಳು ಸೊಗಸಾಗದು. ವೈವಿಧ್ಯಗಳೇ, ತೋರಿಕೆಯ ದ್ವಂದ್ವಗಳೇ ಸೌಂದರ್ಯದ ಮೂಲಗಳು. ಬೆಟ್ಟದ ಸೌಂದರ್ಯ ಬೇರೆ, ಕಣಿವೆಯ ಸೌಂದರ್ಯ ಬೇರೆ. ಎರಡೂ ಸೇರಿದಾಗ ಪ್ರಕೃತಿಯ ಸೌಂದರ್ಯ. ಆಯಾಸ ಮತ್ತು ವಿಶ್ರಾಂತಿ ಪರಸ್ಪರ ವಿರೋಧಿಗಳು ಎನ್ನಿಸುವುದಿಲ್ಲವೆ? ಆದರೆ ಆಯಾಸವಿಲ್ಲದೆ ವಿಶ್ರಾಂತಿ, ನಿದ್ರೆ ಸಾಧ್ಯವಿಲ್ಲ. ಆಯಾಸವೇ ನಿದ್ರೆಯ ಆತ್ಯಂತಿಕ ಸ್ನೇಹಿತ.

ಎಲ್ಲೋ ಓದಿದ ನೆನಪು. ತರುಣ ಛಾಯಾಗ್ರಾಹಕನೊಬ್ಬ ಗೀಜಗ ಗೂಡು ಕಟ್ಟುವುದನ್ನು ಚಿತ್ರವಾಗಿಸುತ್ತಿದ್ದ. ಇಡೀ ದಿನ ಅದರಿಂದ ಸ್ವಲ್ಪ ದೂರದಲ್ಲಿ ಕುಳಿತು ವಿಡಿಯೊ ತೆಗೆಯುತ್ತಿದ್ದ. ಪಕ್ಷಿಗಳು ತಾವು ಕಟ್ಟಿದ್ದ ಗೂಡಿನೊಳಗೆ ಮೂರು ಮೊಟ್ಟೆಗಳನ್ನಿಟ್ಟವು. ಆ ಮೊಟ್ಟೆಗಳು ಒಡೆದು ಮರಿಯಾಗುವುದನ್ನು ಚಿತ್ರಿಸಬೇಕೆಂದು ಆತ ತಾಳ್ಮೆಯಿಂದ ಕಾಯುತ್ತ ಕುಳಿತಿದ್ದ. ಆಗ ಹಕ್ಕಿಗಳು ವಿಚಿತ್ರವಾಗಿ ಕೂಗುತ್ತ ಹಾರಾಡತೊಡಗಿದವು. ಅವು ಗಾಬರಿಯಾದಾಗ ಮಾತ್ರ ಮಾಡುತ್ತವೆಂಬುದನ್ನು ತಿಳಿದ ಯುವಕ ಕತ್ತಿಯೊಂದನ್ನು ಹಿಡಿದು ನಿಧಾನಕ್ಕೆ ಮರದ ಬಳಿ ಹೋದ. ಹಕ್ಕಿಗಳು ಇವನನ್ನು ಕಂಡು, 'ದಯವಿಟ್ಟು ಮೊಟ್ಟೆಗಳನ್ನು ಕಾಪಾಡು' ಎನ್ನುವಂತೆ ಕಿರಿಚುತ್ತ ಅವನನ್ನೇ ನೋಡುತ್ತಿದ್ದವು. ಮರದ ಹಿಂದೆ ನೋಡಿದಾಗ ಒಂದು ಹೆಬ್ಬಾವು ಮರ ಏರುತಿತ್ತು. ಅದಕ್ಕೆ ಮೊಟ್ಟೆಗಳನ್ನು ತಿನ್ನುವ ಆಸೆ. ಹಕ್ಕಿಗಳೊಡನೆ ಬಾಂಧವ್ಯ ಬೆಳೆಸಿಕೊಂಡ ತರುಣನಿಗೆ ಹೇಗಾದರೂ ಮಾಡಿ ಮೊಟ್ಟೆಗಳನ್ನು ಉಳಿಸುವ ಹವಣಿಕೆ. ಒಂದು ಕೋಲು ತೆಗೆದುಕೊಂಡು ಹೆಬ್ಬಾವನ್ನು ಮರದಿಂದ ಕೆಳಗೆ ತಳ್ಳಲು ನೋಡಿದ. ತಕ್ಷಣ ಅವನ ಮನಸ್ಸು ಕೇಳಿತು. 'ಏನು ಮಾಡುತ್ತಿದ್ದೀಯಾ? ಪಕ್ಷಿಗಳಿಗೆ ಉಪಕಾರ ಮಾಡಲು ಹೋಗಿ ಪಾಪ! ಹೆಬ್ಬಾವಿನ ಆಹಾರವನ್ನು ಕಸಿದುಕೊಳ್ಳುತ್ತಿದ್ದೀಯಾ? ಅದು ಪ್ರಕೃತಿಧರ್ಮ'. ಒಬ್ಬರಿಗೆ ಉಪಕಾರ ಮಾಡ ಹೊರಟರೆ ಇನ್ನೊಬ್ಬರಿಗೆ ಅಪಕಾರ! ಮೊಟ್ಟೆಗಳನ್ನು ರಕ್ಷಿಸುವುದು ಸರಿಯೇ? ಹಾವಿನ ನೈಸರ್ಗಿಕ ಆಹಾರವನ್ನು ಕಸಿದುಕೊಳ್ಳುವುದು ಸರಿಯೇ?


ಹೀಗೆ ಪ್ರಕೃತಿಯಲ್ಲಿ ಕ್ಷಣಕ್ಷಣಕ್ಕೂ ದ್ವಂದ್ವಗಳು ಸೇರಿಕೊಂಡಿವೆ. ವಿರೋಧಗಳೇ ದ್ವಂದ್ವವಾಗಬೇಕೆಂದಿಲ್ಲ. ತಾಯಿಯ ಮೇಲಿನ ಭಕ್ತಿ ಧರ್ಮಗುಣ; ಹೆಂಡತಿಯ ಮೇಲಿನ ಪ್ರೀತಿಯೂ ಧರ್ಮಗುಣವೇ. ಆದರೆ ಹೆಂಡತಿ ಮತ್ತು ತಾಯಿ ಕಾದಾಟಕ್ಕೆ ನಿಂತಾಗ ಮಾತೃಭಕ್ತಿ ಮತ್ತು ಹೆಂಡತಿಯ ಪ್ರೀತಿಯ ಗುಣಗಳು ಬೇರೆಯಾಗಿ ದ್ವಂದ್ವವಾಗುತ್ತವೆ. ನಾವು ಈ ದ್ವಂದ್ವಗಳ ಹಿಂದಿರುವ ಸಮರಸತೆಯನ್ನು ಗಮನಿಸುತ್ತ ಮುಂದುವರೆದರೆ ಮನಸಿಗೆ ನೆಮ್ಮದಿ, ಮುಕ್ತಿ ದೊರೆಯುತ್ತದೆ.

## ಪದಬಂಧ 4691

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಎರಡು ಸಂಖ್ಯೆಗಳನ್ನು ಗುಣಿಸಿದರೆ ಬರುವ ಮೊತ್ತ (4)
2.ಒಳ್ಳೆಯ ಬುದ್ಧಿ (3)
4.ಪುಸ್ತಕದ ಹತ್ತಿರವಿರಿಸಿದ ತಲೆ! (3)
6.ಪಾಯ ಹಾಕುವಾಗ ಹೂಡಿದ ಯುಕ್ತಿ! (3)
7.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
10.ನೆಲವನ್ನು ಗೋಮಯದಿಂದ ಸಾರಿಸುವುದು (3)
11.ಮೆಲ್ಲಗೆ ಕಿತ್ತು ಮುಡಿದ ಸುವಾಸಿತ ಹೂ (3)
13.ಪಟ್ಟಣ ಇಲ್ಲಿ ಕಾಣುತ್ತಿದೆ (3)
14.ತೊಂದರೆಯ ನಿವಾರಣೆಗಾಗಿ ಮಾಡುವ ಪ್ರಾರ್ಥನೆ (4)

**ಮೇಲಿಂದ ಕೆಳಕ್ಕೆ**
1.ಸೆರೆಹಿಡಿದ ಆಳು (3)
2.ಮಯನ ಹತ್ತಿರ ಕಳೆದಕಾಲ (3)
3.ಈತ ಅರಿವಿಲ್ಲದವನು (4)
5.ತಿರುಗಿ ಮಾಡಿದ ಕೆಲಸ (3)
6.ದೃಷ್ಟಾಂತವನ್ನು ಹೀಗೆ ಹೇಳಿ (5)
8.ತಿರುಗಿದ್ದಾಗ ಸಾವು ಕಾಣಿಸಿತೇ? (3)
9.ಮಾನವುಳ್ಳ ಹೋಲಿಕೆ (4)
10.ಹತ್ತು ನೂರಿದು (3)
12.ಗೆದ್ದವನಿಗೆ ಕಾಣುತ್ತಿರುವ ಒರಲೆ (3)



### 4690ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಮನರಂಜನೆ 3.ಅಧ್ವಾನ 5.ಬಡ್ಡಿ
6.ಯಜಮಾನ 9.ಪದವೀದಾನ
12.ಮರಕತ 14.ಪ್ರಾಸ 15.ರಹಸ್ಯ
16.ವಾಚನಾಲಯ

**ಮೇಲಿಂದ ಕೆಳಕ್ಕೆ:**
1.ಮನೋಬಲ 2.ಜಯಂತ
4.ನವನಟ 7.ಜವಾನ
8.ಹವೀಜ 9.ಪದಕ
10.ನಮಸ್ಕಾರ 11.ಸುಸಮಯ
13.ಎಡಚ

## ಸುಡೊಕು 5077

| | | | | | | | | |
|---|---|---|---|---|---|---|---|---|
| 7 | | | | 5 | | | 9 | |
| | 2 | | 1 | | 9 | 6 | | 5 |
| | | 5 | | 3 | | | 1 | |
| | | | | | 4 | 1 | | 9 |
| 9 | | 1 | 5 | 8 | | | 4 | |
| 4 | | | | 1 | | 3 | | 7 |
| | | | 3 | | 7 | | | 1 |
| | 6 | | | | | 7 | 3 | |
| | | | | 2 | | | 6 | 4 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5076 ಸುಡೊಕು

| | | | | | | | | |
|---|---|---|---|---|---|---|---|---|
| 8 | 7 | 9 | 6 | 2 | 1 | 3 | 4 | 5 |
| 3 | 2 | 6 | 5 | 4 | 8 | 9 | 1 | 7 |
| 1 | 4 | 5 | 9 | 7 | 3 | 2 | 8 | 6 |
| 2 | 6 | 8 | 1 | 3 | 5 | 4 | 7 | 9 |
| 9 | 3 | 1 | 7 | 8 | 4 | 5 | 6 | 2 |
| 4 | 5 | 7 | 2 | 9 | 6 | 1 | 3 | 8 |
| 6 | 9 | 2 | 3 | 1 | 7 | 8 | 5 | 4 |
| 7 | 1 | 4 | 8 | 5 | 9 | 6 | 2 | 3 |
| 5 | 8 | 3 | 4 | 6 | 2 | 7 | 9 | 1 |

# ಸಚಿವ ಆನಂದ್ ಸಿಂಗ್ ನಡೆ ಇನ್ನೂ ನಿಗೂಢ

ಬೆಂಗಳೂರು: ಖಾತೆ ಹಂಚಿಕೆ ಕುರಿತಂತೆ ತಕರಾರು ಎತ್ತಿರುವ ಪ್ರವಾಸೋದ್ಯಮ, ಪರಿಸರ ಖಾತೆ ಸಚಿವ ಆನಂದ್‌ಸಿಂಗ್, ಅಧಿಕಾರ ವಹಿಸಿಕೊಳ್ಳುವ ಬಗ್ಗೆ ಇನ್ನೂ ತೀರ್ಮಾನವನ್ನೇ ಕೈಗೊಂಡಿಲ್ಲ. ಅವರ ನಡೆ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ.

ಆನಂದ್‌ಸಿಂಗ್ ಅವರನ್ನು ಕರೆಸಿ ಮುಖ್ಯಮಂತ್ರಿ ಬೊಮ್ಮಾಯಿ ಚರ್ಚಿಸಿದ್ದರು. ಅದರಿಂದ ಅವರು ಸಂಪೂರ್ಣ ಸಮಾಧಾನಗೊಂಡಿಲ್ಲ. ಇಲಾಖೆಯ ಸಚಿವರಾಗಿ ಅಧಿಕಾರ ಸ್ವೀಕರಿಸಲು ಬೆಂಗಳೂರಿಗೆ ಬಂದಿಲ್ಲ. 'ಇಲಾಖೆಯ ಅಧಿಕಾರ ಸ್ವೀಕರಿಸದೇ ಅವರು ಮೊಂಡಾಟ ಮಾಡುವುದು ಸರಿಯಲ್ಲ. ಇದಕ್ಕೆ ಮುಖ್ಯಮಂತ್ರಿ ಮತ್ತು ವರಿಷ್ಠರು ಸೊಪ್ಪು ಹಾಕಬಾರದು' ಎಂಬ ಮಾತು ಬಿಜೆಪಿ ವಲಯದಲ್ಲಿ ಕೇಳಿಬಂದಿದೆ.

### 'ಮಾತನಾಡುವ ಮುಹೂರ್ತ ಬಂದಿಲ್ಲ'

ಹೊಸಪೇಟೆ (ವಿಜಯನಗರ): 'ನಾನಿನ್ನೂ ಮಾತನಾಡುವ ಮುಹೂರ್ತ ಬಂದಿಲ್ಲ. ಬಂದ ಮೇಲೆ ಮಾತನಾಡುವೆ. ಅಲ್ಲಿಯವರೆಗೆ ಖಾತೆ ಹಂಚಿಕೆ ಬಗ್ಗೆ ನಾನೇನೂ ಹೇಳಲಾರೆ' ಎಂದು ಸಚಿವ ಆನಂದ್ ಸಿಂಗ್ ಹೇಳಿದರು.

ಸೋಮವಾರ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನೀವು ಎಷ್ಟೇ ಸಲ ಕೇಳಿದರೂ ಖಾತೆ ಹಂಚಿಕೆ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ' ಎಂದರು.







## ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಸುದೀರ್ಘ ಪತ್ರ ಬರೆದ ಸಿದ್ದರಾಮಯ್ಯ

# 'ಬಿಜೆಪಿ ಸುಳ್ಳಿನ ಕಾರ್ಖಾನೆ, ಅರಿವು ಮೂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಎನ್ನುವುದು ಸುಳ್ಳಿನ ಕಾರ್ಖಾನೆ. ಅದು ಉತ್ಪಾದಿಸಿ ಹಂಚುತ್ತಿರುವ ಸುಳ್ಳುಗಳ ಕುರಿತು ಜನರಿಗೆ ಸತ್ಯ ಹೇಳುವ ಜತೆಗೆ ಅರಿವು ಮೂಡಿಸಬೇಕು' ಎಂದು ಪಕ್ಷದ ಜಿಲ್ಲಾ ಅಧ್ಯಕ್ಷರು, ಮುಖಂಡರು, ಕಾರ್ಯಕರ್ತರಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.



ಸಿದ್ದರಾಮಯ್ಯ

'ರಚನಾತ್ಮಕ ಹೋರಾಟದ ಮೂಲಕ ಬಿಜೆಪಿಯ ಹುನ್ನಾರಗಳನ್ನು ಬಯಲಿಗೆಳೆದು ಸೋಲಿಸುವುದೇ ಎಲ್ಲ ಸಮಸ್ಯೆಗಳಿಗೆ ಪರಿಹಾರ. ಹಾಗೆ, ಮಾಡಬೇಕೆಂದರೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ವಿಷಯಗಳನ್ನು ಅಧ್ಯಯನ ಮಾಡಿ ತಿಳಿದುಕೊಳ್ಳುವುದು ಮುಖ್ಯ' ಎಂದು ಸಲಹೆ ನೀಡಿದ್ದು, ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ.


'ನಾನು ಬರೆದಿರುವ 'ಜನಪೀಡಕ ಸರ್ಕಾರ', 'ಐದು ಕಾಯ್ದೆಗಳು-ಅಸಂಖ್ಯಾತ ಸುಳ್ಳುಗಳು' ಮತ್ತು 'ಪೆಟ್ರೋಲ್, ಡೀಸೆಲ್ ನೂರು – ಜನರ ಬದುಕು ನುಚ್ಚು ನೂರು' ಎಂಬ ಕಿರು ಪುಸ್ತಕಗಳನ್ನು ಕಳುಹಿಸುತ್ತಿದ್ದೇನೆ. ಅವುಗಳನ್ನು ಓದಿ, ಪುಸ್ತಕಗಳ ಕೊರತೆಯಾದರೆ ಪಕ್ಷದ ಶಿಷ್ಟಾಚಾರದಂತೆ ಮುದ್ರಿಸಿ ಬೂತ್ ಮಟ್ಟದ ಕಾರ್ಯಕರ್ತರಿಗೂ ತಲುಪಿಸಿ' ಎಂದು ಕೋರಿದ್ದಾರೆ.

'ಸಾಧಾರಣ ಕುಟುಂಬ ಜೀವನ ನಡೆಸಲು ಎರಡು ವರ್ಷದ ಹಿಂದೆ ಸರಾಸರಿ ₹ 5 ಸಾವಿರ ವೆಚ್ಚ ಮಾಡುತ್ತಿದ್ದರೆ ಇಂದು ₹ 11 ಸಾವಿರ ವ್ಯಯಿಸಬೇಕಾದ ಸ್ಥಿತಿ ಇದೆ. 25 ಕಿ.ಮೀ ದೂರದ ಹಳ್ಳಿಯಿಂದ ಪೇಟೆಗೆ ಬಂದು ಕೆಲಸ ಮಾಡುವ ವ್ಯಕ್ತಿಯೊಬ್ಬ ಬೈಕಿಗೆ ದಿನಕ್ಕೊಂದು ಲೀಟರ್ ಪೆಟ್ರೋಲ್ ಹಾಕಿಸಿದರೆ ₹ 37 ಸಾವಿರದಿಂದ ₹ 40 ಸಾವಿರ ಒಂದು ವರ್ಷಕ್ಕೆ ಖರ್ಚಾಗುತ್ತದೆ. ಅದರಲ್ಲಿ ಕನಿಷ್ಠ ₹ 24 ಸಾವಿರ ತೆರಿಗೆ. ಮನಮೋಹನಸಿಂಗ್ ಪ್ರಧಾನಿಯಾಗಿದ್ದಾಗ ಒಂದು ಲೀಟರ್ ಪೆಟ್ರೋಲ್ ಮೇಲೆ ₹ 9.21 ಗಳಷ್ಟು ತೆರಿಗೆ ಇದ್ದರೆ ಈಗ ₹ 33 ಅನ್ನು ಕೇಂದ್ರ ವಸೂಲಿ ಮಾಡುತ್ತಿದೆ' ಎಂದು ಪತ್ರದಲ್ಲಿ ವಿವರಿಸಿದ್ದಾರೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅದಕ್ಷತೆ, ನಿರ್ಲಕ್ಷ್ಯ, ಭ್ರಷ್ಟಾಚಾರಗಳನ್ನು ಪತ್ರದಲ್ಲಿ ಉಲ್ಲೇಖಿಸಿರುವ ಅವರು, ಎಲ್ಲ ವಿಚಾರಗಳನ್ನು ಬಚ್ಚಿಟ್ಟು ಕಾಂಗ್ರೆಸ್ ಪಕ್ಷದ ಮೇಲೆ, ನೆಹರೂ, ಮನಮೋಹನ್ ಸಿಂಗ್ ಕುರಿತು ಸುಳ್ಳುಗಳನ್ನು ಉತ್ಪಾದಿಸಿ ಹಂಚುವುದೇ ಬಿಜೆಪಿ ಕೆಲಸವಾಗಿದೆ. ದೇಶವನ್ನು ರಾಹು ಕೇತುಗಳಂತೆ ಆವರಿಸಿರುವ ಬಿಜೆಪಿಯನ್ನು ಸಂಪೂರ್ಣ ತೊಲಗಿಸಬೇಕು' ಎಂದು ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

### ದೇಶಕ್ಕಾಗಿ ಹತ್ತು ಪೈಸೆಯನ್ನೂ ನೀಡದ ಸಿ.ಟಿ.ರವಿ–ವಿಶ್ವನಾಥ್

ಮೈಸೂರು: 'ಜವಾಹರಲಾಲ್ ನೆಹರೂ ದೇಶಕ್ಕಾಗಿ ತಮ್ಮ ಆಸ್ತಿ ಬರೆದರು. ಸಿ.ಟಿ. ರವಿ ದೇಶಕ್ಕೆ ಹತ್ತು ಪೈಸೆಯನ್ನೂ ಕೊಟ್ಟಿಲ್ಲ. ಅವರು ಬಳಸುವ ಪದಗಳನ್ನು ಗಮನಿಸಿದರೆ ಕನ್ನಡದ ಕೊಲೆಯಾಗುತ್ತಿದೆ ಎಂದೆನಿಸುತ್ತಿದೆ' ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು.



ವಿಶ್ವನಾಥ್

'ಯಾರನ್ನೋ ರಮಿಸಲು ಭಾರತದ ಗೌರವವನ್ನು ಕಳೆಯಬಾರದು. ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಬೇಕು ಎಂಬುದು ಸಣ್ಣತನ. ಇಂಥ ಹೇಳಿಕೆ ವಾಪಸ್ ಪಡೆಯಬೇಕು' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಅಟಲ್ ಬಿಹಾರಿ ವಾಜಪೇಯಿ ಅವರನ್ನು ಟೀಕಿಸಿರುವ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ಬುದ್ಧಿ ಇದೆಯೇ ಎಂದು ಪ್ರಶ್ನಿಸಿದ ವಿಶ್ವನಾಥ್, 'ವಾಜಪೇಯಿ ಅವರ ಭಾಷಣಗಳನ್ನು ಓದಬೇಕು. ತಂದೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ನೋಡಿಯಾದರೂ ಕಲಿಯಬೇಕು' ಎಂದು ಸಲಹೆ ನೀಡಿದರು.

'ಇವರಿಬ್ಬರನ್ನು ಬಾಯಿ ಮುಚ್ಚಿ ಎಂದು ಹೇಳುವ ನೈತಿಕತೆ ಆಯಾಯ ಪಕ್ಷಗಳ ಹಿರಿಯ ನಾಯಕರಿಗಿಲ್ಲ. ಪಕ್ಷ ರಾಜಕಾರಣಕ್ಕೆ ಸೋಲಾಗಿದ್ದು, ರಾಕ್ಷಸ ರಾಜಕಾರಣ ಆರಂಭವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಯಡಿಯೂರಪ್ಪ ಮಾರ್ಗದರ್ಶನ ಬೇಕೇ ಎಂಬ ಪ್ರಶ್ನೆಗೆ, 'ಅವರಿಗೆ ಅತ್ತೆಯ ಮಾರ್ಗದರ್ಶನ ಬೇಡ, ತಂದೆಯ ಮಾರ್ಗದರ್ಶನ ಬೇಕು' ಎಂದರು. ಈ ಹೇಳಿಕೆಯ ಅರ್ಥ ವಿವರಿಸಲು ನಿರಾಕರಿಸಿದರು.

### ಸಿ.ಟಿ.ರವಿ ವಿರುದ್ಧ ಕಾಂಗ್ರೆಸ್ ದೂರು

ಮೈಸೂರು: ಬಿಜೆಪಿ ಶಾಸಕ ಸಿ.ಟಿ. ರವಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಕೋರಿ ಮೈಸೂರು ಜಿಲ್ಲಾ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ ಅಧ್ಯಕ್ಷ ಪಾಳ್ಯ ಸುರೇಶ್ ಇಲ್ಲಿನ ದೇವರಾಜ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಕೆಪಿಸಿಸಿ ಕಚೇರಿಯಲ್ಲಿ ನೆಹರೂ ಬಾರ್, ಹುಕ್ಕಾ ಬಾರ್ ತೆರೆಯಲಿ ಎಂಬುದಾಗಿ ಅವಹೇಳನಕಾರಿ ಹಾಗೂ ಪ್ರಚೋದನಾಕಾರಿ ಹೇಳಿಕೆ ನೀಡಿ ಕಾಂಗ್ರೆಸ್ ಮತ್ತು ಜವಾಹರಲಾಲ್ ನೆಹರೂ ಅವರನ್ನು ಅವಮಾನಿಸಿದ್ದಾರೆ' ಎಂದು ಆರೋಪಿಸಿದ್ದಾರೆ.

## ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಹೇಳಿಕೆ

# ಕೌಶಲಾಭಿವೃದ್ಧಿ ಕೇಂದ್ರವಾಗಿ ಹುಬ್ಬಳ್ಳಿ–ಧಾರವಾಡ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಹುಬ್ಬಳ್ಳಿ–ಧಾರವಾಡ ಅವಳಿ ನಗರವನ್ನು ಕರ್ನಾಟಕದ ಕೌಶಾಲಾಭಿವೃದ್ಧಿ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಚರ್ಚೆ ನಡೆದಿದೆ. ರಾಜ್ಯ ಸರ್ಕಾರ ಪ್ರಸ್ತಾವ ಕಳುಹಿಸಿದರೆ, ಜಾರಿಗೆ ಕ್ರಮಕೈಗೊಳ್ಳಲಾಗುವುದು' ಎಂದು ಕೇಂದ್ರ ಕೌಶಲಾಭಿವೃದ್ಧಿ ಹಾಗೂ ಉದ್ಯಮಶೀಲತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, ಅವಳಿ ನಗರದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಅಗತ್ಯದ ಮೂಲಸೌಕರ್ಯಗಳಿವೆ. ಇದನ್ನು ಬಳಸಿ .ಐಟಿ, ಬಿ.ಟಿ ಸೇರಿದಂತೆ ಎಲ್ಲ ರೀತಿಯ ಉದ್ಯಮಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದರು.

**ತೈಲ ಬೆಲೆ ಏರಿಕೆ ಸಮರ್ಥನೆ:** 'ಕೋವಿಡ್ ಸೃಷ್ಟಿಸಿದ ಆರ್ಥಿಕ ಸಂಕಷ್ಟವನ್ನು ಸರಿದೂಗಿಸಲು ತೈಲ ಹಾಗೂ ಅಗತ್ಯ ವಸ್ತುಗಳ ದರ ಏರಿಕೆ ಮಾಡಿದೆ. ಈ ಸಂದರ್ಭದಲ್ಲಿ ಆದಾಯ ಸಂಗ್ರಹಕ್ಕೆ ಸರ್ಕಾರದ ಬಳಿ ಬೇರೆ ಮಾರ್ಗವಿರಲಿಲ್ಲ' ಎಂದರು.

### ನಾಟಿ ಮಾಡಿದ ಶೋಭಾ

ಮಂಡ್ಯ: ಜನಾಶೀರ್ವಾದ ಯಾತ್ರೆ ಅಂಗವಾಗಿ ಜಿಲ್ಲೆಗೆ ಆಗಮಿಸಿದ್ದ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಾಲ್ಲೂಕಿನ ಹೊನಗಾನಹಳ್ಳಿಯಲ್ಲಿ ಗದ್ದೆ ನಾಟಿ ಮಾಡಿದರು.

ರೈತ ಮಹಿಳೆಯರ ಜೊತೆ ಗದ್ದೆಗೆ ಇಳಿದರು. ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಕೆ.ಸಿ.ನಾರಾಯಣಗೌಡರ ಜೊತೆ ಟ್ರ್ಯಾಕ್ಟರ್ ಏರಿ ಯಂತ್ರದ ಮೂಲಕವೂ ನಾಟಿ ಮಾಡಿದರು. ಸಾತನೂರು ಗ್ರಾಮದ ಆಲೆಮನೆಗೆ ತೆರಳಿ ಬೆಲ್ಲ ತಯಾರಾಗುವ ಪ್ರಕ್ರಿಯೆ ವೀಕ್ಷಿಸಿದರು. ಕ್ರಷರ್‌ಗೆ ಕಬ್ಬು ಕೊಟ್ಟರು, ಬೆಲ್ಲದ ರುಚಿ ಸವಿದರು.

'ರಾಸಾಯನಿಕ ಮುಕ್ತ ಬೆಲ್ಲ ತಯಾರಿಕೆ ಬಗ್ಗೆ ಮಾಹಿತಿ ಪಡೆದಿದ್ದು, ಬೆಲ್ಲ ತಯಾರಿಕೆಯಲ್ಲಿ ರಾಸಾಯನಿಕ ಬೆರೆಸಬಾರದು, ಕಲಬೆರಕೆ ಮಾಡಬಾರದು ಎಂದು ಸಲಹೆ ನೀಡಿದ್ದೇನೆ' ಎಂದು ಕರಂದ್ಲಾಜೆ ತಿಳಿಸಿದರು.

**ಪರ್ಯಾಯ ಇಂಧನ:** 'ಪೆಟ್ರೋಲ್, ಡೀಸೆಲ್ ಮೇಲಿನ ಅವಲಂಬನೆ ಕುಗ್ಗಿಸಲು ಪರ್ಯಾಯ ಇಂಧನ ಸಂಶೋಧಿಸಲು ಚಿಂತನೆ ನಡೆಸಿದೆ' ಎಂದು ತಿಳಿಸಿದರು.

### 450 ಗಿಗಾವಾಟ್ ವಿದ್ಯುತ್ ಉತ್ಪಾದನೆ ಗುರಿ –ಖೂಬಾ

ಬೀದರ್ ವರದಿ: 'ನವೀಕರಿಸಬಹುದಾದ ಮೂಲದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 2030ರ ವೇಳೆಗೆ 450 ಗಿಗಾ ವಾಟ್‌ಗೆ ಹೆಚ್ಚಿಸುವ ಗುರಿ ಇದೆ' ಎಂದು ಕೇಂದ್ರದ ನವೀಕರಿಸಬಹುದಾದ ಇಂಧನ ಮೂಲ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದರು.

ಸೋಮವಾರ ಇಲ್ಲಿ 'ಜನಾಶೀರ್ವಾದಯಾತ್ರೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸೌರಶಕ್ತಿ, ಪವನ ಶಕ್ತಿ, ಬಯೊಗ್ಯಾಸ್, ಜಲಶಕ್ತಿಯ ಮೂಲಕ 2022ರ ವರೆಗೆ 300 ಗಿಗಾ ವಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುವುದು' ಎಂದು ತಿಳಿಸಿದರು.


'7 ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಗೊಬ್ಬರದ ಕೊರತೆ ಉಂಟಾಗಿಲ್ಲ. ಬರುವ ವರ್ಷದಿಂದ ಗೊಬ್ಬರ ಆಮದು ನಿಲ್ಲಿಸಲಾಗುವುದು' ಎಂದರು.



ಕೇಂದ್ರ ಸಚಿವರಾದ ನಂತರ ಮೊದಲ ಬಾರಿ ಬೀದರ್‌ಗೆ ಸೋಮವಾರ ಬಂದ ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಅವರನ್ನು ಮೆರವಣಿಗೆಯಲ್ಲಿ ಕರೆತಂದಿದ್ದು, ಹೆಚ್ಚಿನವರು ಮಾಸ್ಕ್ ಧರಿಸದೇ ಇರುವುದು ಕಂಡುಬಂತು.

### ಗೃಹ ಖಾತೆ ಸಂಕಷ್ಟ ತೋಡಿಕೊಂಡ ಸಚಿವ ಆರಗ

ಶಿವಮೊಗ್ಗ: 'ಗೃಹ ಸಚಿವ ಸ್ಥಾನ ಅಲಂಕರಿಸಿದ ಮೇಲೆ ನಿದ್ರೆ ಇಲ್ಲದೆ ರಾತ್ರಿಗಳನ್ನು ಕಳೆಯುತ್ತಿರುವೆ. ಕೊಟ್ಟ ಕುದುರೆ ಇಳಿದರೆ ಶೂರನಾಗುವುದಿಲ್ಲ ಎನ್ನುವ ಕಾರಣಕ್ಕೆ ನಿಭಾಯಿಸುತ್ತಿರುವೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಮನದಾಳ ಸಂಕಟವನ್ನು ತೋಡಿಕೊಂಡರು.



ಆರಗ ಜ್ಞಾನೇಂದ್ರ

ಎಪಿಎಂಸಿ ಆವರಣದಲ್ಲಿ ಅಡಿಕೆ ಸಹಕಾರ ಸಂಘಗಳ ಮಹಾಮಂಡಲ ಸೋಮವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

'ಗೃಹ ಖಾತೆಯ ಕಿರಿಕಿರಿ ನನಗೆ ಮಾತ್ರ ಗೊತ್ತಿದೆ. ಸರಿಯಾಗಿ ನಿದ್ರೆ ಮಾಡಲೂ ಆಗದ ಕಥೆ ನನ್ನದು. ಹಾಗಂತ ಪಲಾಯನ ಮಾಡುವುದಿಲ್ಲ. ಕೊಟ್ಟ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವೆ' ಎಂದರು. 'ಪೊಲೀಸ್ ಠಾಣೆ, ತಾಲ್ಲೂಕು ಕಚೇರಿಗಳಲ್ಲಿ ನಡೆಯುತ್ತಿದ್ದ ದೌರ್ಜನ್ಯದ ವಿರುದ್ಧ ಹೋರಾಡುತ್ತಲೇ ಬಂದಿರುವೆ. ಇಂದು ಅಂತಹ ಇಲಾಖೆಯ ಮುಖ್ಯಸ್ಥನಾಗುವ ಅವಕಾಶ ಸಿಕ್ಕಿದೆ. ಆರ್‌ಎಸ್‌ಎಸ್ ಕಲಿಸಿದ ಪ್ರಮಾಣಿಕತೆ ಜತೆ ಇದೆ' ಎಂದರು.







## ಕಾರು ಸ್ಫೋಟದಿಂದ ವ್ಯಕ್ತಿ ಸಾವು; ಸಿಡಿಮದ್ದು ಸಾಗಣೆ ಶಂಕೆ

ಕನಕಪುರ: ಇಲ್ಲಿನ ಮರಳೇಗವಿ ಮಠದ ಬಳಿ ಸೋಮವಾರ ಕಾರೊಂದು ಸ್ಫೋಟಗೊಂಡು ವ್ಯಕ್ತಿ ಸಜೀವ ದಹನವಾಗಿದ್ದಾರೆ. ಕನಕಪುರದ ಶಕ್ತಿ ಮೈನ್ಸ್ ಎಕ್ಯೂಪ್‌ಮೆಂಟ್ಸ್ ಅಂಡ್ ಟೂಲ್ಸ್ ಕಂಪನಿ ಮಾಲೀಕ ಮಹೇಶ್ (40) ಮೃತ ವ್ಯಕ್ತಿ.

ಅವರು ಕನಕಪುರದಿಂದ ಮಠದ ಸಮೀಪ ಇರುವ ಕಲ್ಲು ಗಣಿಗಾರಿಕೆ ಕ್ವಾರಿಗೆ ಕಾರಿನಲ್ಲಿ ಸಿಡಿಮದ್ದು ಸಾಮಗ್ರಿ ಸಾಗಿಸುತ್ತಿದ್ದರು ಎನ್ನಲಾಗಿದೆ. ಈ ಸಂದರ್ಭ ಸ್ಫೋಟ ಸಂಭವಿಸಿದ್ದು, ಕಾರು ಸಂಪೂರ್ಣ ಛಿದ್ರವಾಗಿದ್ದು ದೇಹ ತುಂಡಾಗಿದೆ.

ಘಟನಾ ಸ್ಥಳಕ್ಕೆ ಐಜಿಪಿ ಚಂದ್ರಶೇಖರ್, ರಾಮನಗರ ಎಸ್ಪಿ ಗಿರೀಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. 'ಮೃತ ಮಹೇಶ್ ಗಣಿಗಾರಿಕೆಗೆ ಬೇಕಾದ ಸಾಮಗ್ರಿಗಳನ್ನು ಸರಬರಾಜು ಮಾಡುವ ಕೆಲಸ ಮಾಡುತ್ತಿದ್ದರು. ಆದರೆ ಸ್ಫೋಟಕ ಸಾಮಗ್ರಿ ಸಾಗಣೆಗೆ ಅನುಮತಿ ಪಡೆದಿರಲಿಲ್ಲ' ಎಂದು ಎಸ್ಪಿ ಗಿರೀಶ್ ಮಾಹಿತಿ ನೀಡಿದರು.

'ಕ್ವಾರಿಯಿಂದ ಒಂದೂವರೆ ಕಿ.ಮೀ. ದೂರದಲ್ಲಿ ಮಧ್ಯಾಹ್ನ 3.30ರ ಸುಮಾರಿಗೆ ಈ ಸ್ಫೋಟ ಸಂಭವಿಸಿದೆ. ಸ್ಫೋಟದ ತೀವ್ರತೆ ನೋಡಿದರೆ ಕಾರಿನೊಳಗೆ ಸ್ಫೋಟಕ ಇದ್ದಿರಬಹುದು. ತನಿಖೆ ಪ್ರಗತಿಯಲ್ಲಿದೆ' ಎಂದು ವಿವರಿಸಿದರು.

# ಯಲಬುರ್ಗಾ: ಧಾರಾಕಾರ ಮಳೆ

ಯಲಬುರ್ಗಾ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಬಂಡಿಹಾಳ ಮತ್ತು ಸುತ್ತಲಿನ ಪ್ರದೇಶದಲ್ಲಿ ಸೋಮವಾರ ಮಧ್ಯಾಹ್ನದಿಂದ ಸಂಜೆವರೆಗೂ ಧಾರಾಕಾರ ಮಳೆ ಸುರಿಯಿತು.

ಗ್ರಾಮದ ಹಳ್ಳ ಭರ್ತಿಯಾಗಿ ರಭಸವಾಗಿ ಹರಿದಿದ್ದರಿಂದ ಸಂಚಾರ ಸ್ಥಗಿತಗೊಂಡಿತ್ತು. ಬೇರೆ ಗ್ರಾಮಗಳಿಂದ ಆಗಮಿಸಿದ್ದ ಕೂಲಿ ಕಾರ್ಮಿಕರನ್ನು ಗ್ರಾಮಸ್ಥರು ಹಗ್ಗಕಟ್ಟಿ ಮತ್ತೊಂದು ದಡಕ್ಕೆ ಸಾಗಿಸಿ ಮನೆಗೆ ಕಳುಹಿಸಿದರು.



ಯಲಬುರ್ಗಾ ತಾಲ್ಲೂಕು ಬಂಡಿಹಾಳ ಗ್ರಾಮ ಹೊರವಲಯದಲ್ಲಿ ಹರಿಯುವ ಹಳ್ಳದಲ್ಲಿ ಕಾರ್ಮಿಕರು ಹಗ್ಗದ ಸಹಾಯದಿಂದ ದಡ ಸೇರಿದರು

**ಹುಬ್ಬಳ್ಳಿ, ಶಿವಮೊಗ್ಗ ಸೇರಿ ವಿವಿಧೆಡೆ ಮಳೆ:** ಶಿವಮೊಗ್ಗ/ಹುಬ್ಬಳ್ಳಿ: ಸೋಮವಾರ ಹೊಸಪೇಟೆ, ಬಾಗಲಕೋಟೆ, ಹುಬ್ಬಳ್ಳಿ ಸೇರಿದಂತೆ ಸೋಮವಾರ ಹಲವೆಡೆ ಮಳೆಯಾಗಿದೆ. ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ.

ಶಿವಮೊಗ್ಗ, ಹೊಸಪೇಟೆ, ಹುಬ್ಬಳ್ಳಿ ಸೇರಿ ವಿವಿಧೆಡೆ ಮತ್ತು ಶಿವಮೊಗ್ಗ ಜಿಲ್ಲೆಯ ಜಿಲ್ಲೆಯಲ್ಲಿ ಮಳೆ ಪ್ರಮಾಣ ತಗ್ಗಿದೆ. ಹೊಸನಗರ, ಸಾಗರ, ತೀರ್ಥಹಳ್ಳಿಯಲ್ಲಿ ಉತ್ತಮ ಮಳೆಯಾಗಿದೆ.

**ಹುಬ್ಬಳ್ಳಿ ವರದಿ:** ಹೊಸಪೇಟೆಯಲ್ಲಿ ಸುರಿದ ಭಾರಿ ಮಳೆಗೆ ನಗರದ ಪ್ರಮುಖ ರಸ್ತೆಗಳು ಜಲಾವೃತಗೊಂಡಿದ್ದವು. ಬಾಗಲಕೋಟೆ ನವನಗರದಲ್ಲಿ ಬಿರುಸಿನ ಮಳೆಯಾಗಿದ್ದು ವಿದ್ಯುತ್ ಪೂರೈಕೆ ಸಂಪೂರ್ಣ ಕಡಿತಗೊಂಡಿದೆ. ಹುಬ್ಬಳ್ಳಿ ನಗರದಲ್ಲಿಯೂ ಉತ್ತಮ, ಧಾರವಾಡದಲ್ಲಿ ತುಂತುರು ಮಳೆಯಾಗಿದೆ. ಗದಗ, ಬೆಳಗಾವಿ ಹಾಗೂ ಶಿರಸಿಯಲ್ಲಿ ಆಗಾಗ ಮಳೆಯಾಯಿತು.

## ಸಂಕ್ಷಿಪ್ತ ಸುದ್ದಿ

### ಮಲೇಷ್ಯಾ ಪ್ರಧಾನಿ ರಾಜೀನಾಮೆ

ಕ್ವಾಲಾಲಂಪುರ (ಎಎಫ್‌ಪಿ): 'ಮಲೇಷ್ಯಾ ಪ್ರಧಾನಿ ಮುಹಿದ್ದೀನ್ ಯಾಸೀನ್ ನೇತೃತ್ವದ ಸಚಿವ ಸಂಪುಟವು ಸೋಮವಾರ ತನ್ನ ರಾಜೀನಾಮೆ ಪತ್ರವನ್ನು ರಾಜನಿಗೆ ಸಲ್ಲಿಸಿದೆ' ಎಂದು ವಿಜ್ಞಾನ ಸಚಿವ ಖೈರಿ ಜಮಾಲುದ್ದೀನ್ ಅವರು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

ಯಾಸೀನ್ ಅವರ ಉತ್ತರಾಧಿಕಾರಿಯಾಗಿ ಯಾರು ಆಯ್ಕೆಯಾಗಲಿದ್ದಾರೆ ಎಂಬ ಬಗ್ಗೆ ಯಾವುದೇ ಸ್ಪಷ್ಟ ಚಿತ್ರಣ ಲಭ್ಯವಿಲ್ಲ. ಆದರೆ, ಕೋವಿಡ್ ಪಿಡುಗು ಮತ್ತು ಆರ್ಥಿಕ ಕುಸಿತದ ನಡುವೆ ಚುನಾವಣೆ ನಡೆಯುವ ಸಾಧ್ಯತೆಗಳು ಕಡಿಮೆ ಇದೆ ಎನ್ನಲಾಗಿದೆ.

### ಮೆಲ್ಬರ್ನ್: ಸೆ.2ರವರೆಗೆ ಕರ್ಫ್ಯೂ

ಮೆಲ್ಬರ್ನ್ (ಎಎಫ್‌ಪಿ): ಕೋವಿಡ್ ಸಾಂಕ್ರಾಮಿಕದ ಡೆಲ್ಟಾ ರೂಪಾಂತರ ತಳಿಯ ಸೋಂಕು ಉಲ್ಬಣವಾಗುತ್ತಿರುವ ಹಿನ್ನೆಲೆಯಲ್ಲಿ ಸೌತ್‌ವೇಲ್ಸ್, ಸಿಡ್ನಿ ನಂತರ, ಆಸ್ಟ್ರೇಲಿಯಾದ ಎರಡನೇ ಬಹುದೊಡ್ಡ ನಗರ ಮೆಲ್ಬರ್ನ್‌ನಲ್ಲಿ ಸೋಮವಾರದಿಂದ ಕರ್ಫ್ಯೂ ಘೋಷಿಸಲಾಗಿದೆ. ಕೊರೊನಾ ಸೋಂಕು ನಿಯಂತ್ರಿಸಲು ಅಧಿಕಾರಿಗಳು ಭಾನುವಾರ ರಾತ್ರಿ ದಿಢೀರನೆ ಕರ್ಫ್ಯೂ ಘೋಷಿಸಿದ್ದರಿಂದ ಮೆಲ್ಬರ್ನ್ ನಗರದ 50 ಲಕ್ಷಕ್ಕೂ ಹೆಚ್ಚು ನಿವಾಸಿಗಳು ಸೋಮವಾರದಿಂದ ಮನೆಯಲ್ಲೇ ಇರಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ಅಗತ್ಯ ಸೇವೆಗಳಿಗಾಗಿ ಕೆಲಸ ಮಾಡುವವರು ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

### ಜಾಂಬಿಯಾ: ಅಧ್ಯಕ್ಷೀಯ ಚುನಾವಣೆ– ಹಿಚಿಲೆಮಾಗೆ ಜಯ

ಲುಸಾಕಾ (ಎಎಫ್‌ಪಿ): ಜಾಂಬಿಯಾದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಉದ್ಯಮಿ ಹಾಗೂ ವಿರೋಧಪಕ್ಷದ ನಾಯಕ ಹಕ್ಕೆಂಡೆ ಹಿಚಿಲೆಮಾ ಅವರು ಸೋಮವಾರ ಭರ್ಜರಿ ಜಯ ಗಳಿಸಿದ್ದಾರೆ.



ಬೋರ್ಝುಕ್ಟರ್ ಪಟ್ಟಣದಲ್ಲಿ ಭಾನುವಾರ ಪ್ರವಾಹದಿಂದಾಗಿ ರಸ್ತೆಗಳಲ್ಲಿದ್ದ ವಾಹನಗಳು ಅವಶೇಷಗಳಡಿ ಸಿಲುಕಿರುವ ದೃಶ್ಯ

### ಟರ್ಕಿಯಲ್ಲಿ ಪ್ರವಾಹ: ಸತ್ತವರ ಸಂಖ್ಯೆ 70ಕ್ಕೆ ಏರಿಕೆ

ಇಸ್ತಾಂಬುಲ್ (ರಾಯಿಟರ್ಸ್): ಟರ್ಕಿಯ ಕಪ್ಪು ಸಮುದ್ರದ ಪ್ರಾಂತ್ಯಗಳಲ್ಲಿರುವ ಪಟ್ಟಣಗಳಲ್ಲಿ ಉಂಟಾದ ಪ್ರವಾಹದಿಂದಾಗಿ ಸತ್ತವರ ಸಂಖ್ಯೆ 70ಕ್ಕೆ ಏರಿದ್ದು, ಇನ್ನೂ 47 ಮಂದಿ ನಾಪತ್ತೆಯಾಗಿದ್ದಾರೆ. ತುರ್ತು ಪರಿಹಾರ ಕಾರ್ಯಾಚರಣೆ ತಂಡ ನಾಪತ್ತೆಯಾದವರಿಗಾಗಿ ಶೋಧ ಮುಂದುವರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಹೈಟಿ ಭೂಕಂಪ: ಸತ್ತವರ ಸಂಖ್ಯೆ 1,279ಕ್ಕೆ ಏರಿಕೆ

ಲೆಸ್ ಕೆಯೆಸ್, ಹೈಟಿ (ಎಪಿ): ಹೈಟಿಯಲ್ಲಿ ಸಂಭವಿಸಿದ ಭೂಕಂಪದಲ್ಲಿ ಸತ್ತವರ ಸಂಖ್ಯೆ 1,297ಕ್ಕೆ ಏರಿದ್ದು, 5,700 ಮಂದಿ ಗಾಯಗೊಂಡಿದ್ದಾರೆ. ಅಸಂಖ್ಯ ಕುಟುಂಬಗಳು ಅತಂತ್ರವಾಗಿವೆ. ತೀವ್ರ ಭೂಕಂಪನದಿಂದಾಗಿ ಅಂದಾಜು 7,000 ಮನೆಗಳು ಕುಸಿದಿವೆ. 5,000ಕ್ಕೂ ಅಧಿಕ ಮನೆಗಳು ಜಖಂಗೊಂಡಿವೆ. ಆಸ್ಪತ್ರೆಗಳು, ಶಾಲಾ ಕಟ್ಟಡ, ಕಚೇರಿಗಳು, ಚರ್ಚ್‌ಗಳು ಕೂಡಾ ಕುಸಿದಿರುವ ಅಥವಾ ಜಖಂಗೊಂಡಿರುವ ಕಟ್ಟಡಗಳಲ್ಲಿ ಸೇರಿವೆ. ರಕ್ಷಣಾ ಕಾರ್ಯ ಚುರುಕಿನಿಂದ ಸಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## 5 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ಉತ್ತರ ಒಳನಾಡಿನಲ್ಲಿ ಮುಂಗಾರು ಚುರುಕುಗೊಂಡಿರುವುದರಿಂದ ಆಗಸ್ಟ್ 17, 18ರಂದು ಈ ಭಾಗದ ಕೆಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರಒಳನಾಡಿನ ಬಾಗಲಕೋಟೆ, ಬೀದರ್, ಕಲಬುರ್ಗಿ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗುವ ಸಾಧ್ಯತೆ ಇರುವುದರಿಂದ ಎರಡೂ ದಿನ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ದಕ್ಷಿಣ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮಳೆ ತಗ್ಗಿದ್ದು, ಕೆಲವೆಡೆ ಸಾಧಾರಣ ಮಳೆಯಾಗಬಹುದು.

**ಮಳೆ–ಎಲ್ಲಿ, ಎಷ್ಟು?:** ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ ಸೋಮವಾರ 7 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಇಂಡಿ 5, ಸುಳ್ಯ 3, ಉಡುಪಿ, ಕಾರ್ಕಳ, ಮಡಿಕೇರಿ 2, ಕಾರವಾರ, ಸಂಡೂರಿನಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ರಾಯಚೂರು, ಕಲಬುರ್ಗಿಯಲ್ಲಿ ತಲಾ 34 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ, ಬೀದರ್, ಚಿಕ್ಕಮಗಳೂರು, ಹಾಸನದಲ್ಲಿ ತಲಾ 18 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 120.36 | 3,227 | 5,545 |
| ಹಾರಂಗಿ | 2,859 | 2,857.81 | 5,387 | 2,100 |
| ಕಬಿನಿ | 2284 | 2,283.28 | 5,300 | 2,400 |
| ಹೇಮಾವತಿ | 2,922 | 2,920 | 3,309 | 4,705 |
| ಲಿಂಗನಮಕ್ಕಿ | 1,819 | 1,812.30 | 9,245 | - |
| ಸೂಪಾ (ಮೀ) | 564 | 554.55 | 4,008 | 3,151 |
| ಮಾಣಿ | 594.36 | 585.32 | 3,462 | - |
| ತುಂಗಭದ್ರಾ | 1,633 | 1,632.92 | 15,558 | 14,814 |
| ಮಲಪ್ರಭಾ | 2,079.50 | 2,077.40 | 2,245 | 694 |
| ಘಟಪ್ರಭಾ | 2,175 | 2,175 | 5,123 | 5,123 |
| ಭದ್ರಾ | 186 | 184.11 | 5,889 | 4,396 |
| ಆಲಮಟ್ಟಿ (ಮೀ) | 519.6 | 519.56 | 20,380 | 28,507 |
| ನಾರಾಯಣಪುರ (ಮೀ) | 492.25 | 491.48 | 15,000 | 14,600 |

* ನೆಲಮಟ್ಟದಿಂದ





ಅಫ್ಗಾನಿಸ್ತಾನದಿಂದ ಹೊರಗೆ ಹೋಗುವ ಸಲುವಾಗಿ ಕಾಬೂಲ್‌ನ ಹಮೀದ್ ಕರ್ಜೈ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಸೋಮವಾರ ಜನರು ಧಾವಿಸಿ ಬಂದರು (ಚಿತ್ರ:1) ಕಾಬೂಲ್‌ನ ಜನ್‌ಬಾಕ್ ಸ್ಕ್ವೇರ್‌ನಲ್ಲಿ ಸೋಮವಾರ ಕಾವಲು ಕಾಯುತ್ತಿದ್ದ ತಾಲಿಬಾನ್ ಉಗ್ರರು (ಚಿತ್ರ:2) ಕಾಬೂಲ್ ಬೀದಿಗಳಲ್ಲಿ ಗಸ್ತು ತಿರುಗುತ್ತಿರುವ ತಾಲಿಬಾನ್ ಉಗ್ರರು (ಚಿತ್ರ:3) – ಎಎಫ್‌ಪಿ ಚಿತ್ರಗಳು

# ತಾಲಿಬಾನ್ ಪ್ರಾಬಲ್ಯ: ಅಮೆರಿಕ ವೈಫಲ್ಯ?

ಲಂಡನ್/ದುಬೈ/ವಾಷಿಂಗ್ಟನ್ (ರಾಯಿಟರ್ಸ್/ಎಪಿ/ ಎಎಫ್‌ಪಿ): ಅಫ್ಗಾನಿಸ್ತಾನದಲ್ಲಿ ಎರಡು ದಶಕಗಳಿಂದ ರಕ್ಷಣೆಯ ಗೋಡೆಯಂತಿದ್ದ ಅಮೆರಿಕವು ತನ್ನ ಸೇನೆಯನ್ನು ಅಲ್ಲಿಂದ ಹಿಂತೆಗೆದುಕೊಳ್ಳುವ ಐತಿಹಾಸಿಕ ನಿರ್ಣಯ ತೆಗೆದುಕೊಂಡಿದ್ದು ವೈಫಲ್ಯವೂ ಹೌದು ಎನ್ನುತ್ತಿದೆ ಅಂತರರಾಷ್ಟ್ರೀಯ ಸಮುದಾಯ. ಈಗಿನ ಪರಿಸ್ಥಿತಿಗೆ ಅಮೆರಿಕ ಕಾರಣ ಎಂಬ ಅರ್ಥದಲ್ಲಿ ಇರಾನ್, ಬ್ರಿಟನ್, ಜರ್ಮನಿ ಮೊದಲಾದ ದೇಶಗಳು ಮಾತನಾಡಿವೆ.

ಅಫ್ಗಾನಿಸ್ತಾನದಲ್ಲಿ ಅಮೆರಿಕದ ಸೇನಾ ವೈಫಲ್ಯದಿಂದ ದೇಶದಲ್ಲಿ ಶಾಶ್ವತ ಶಾಂತಿ ಸ್ಥಾಪನೆಗೆ ಅವಕಾಶ ಸಿಕ್ಕದೆ ಎಂದು ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಸೋಮವಾರ ಹೇಳಿದ್ದಾರೆ.

‘ಅಮೆರಿಕವು ತನ್ನ ಸೇನೆ ವಾಪಸ್ ಪಡೆದಿದ್ದು ಮತ್ತು ಅದರ ಹಿಂದೆಯೇ ಎದುರಾದ ಸೋಲು, ಅಫ್ಗಾನಿಸ್ತಾನದಲ್ಲಿ ಜೀವನ, ಭದ್ರತೆ ಮತ್ತು ಸುದೀರ್ಘ ಶಾಂತಿ ಪುನಃಸ್ಥಾಪಿಸಲು ಒಂದು ಅವಕಾಶವಾಗಿ ಪರಿಣಮಿಸಬೇಕು’ ಎಂದು ರೈಸಿ ಹೇಳಿದ್ದಾರೆ ಎಂದು ಇರಾನ್ ಸರ್ಕಾರಿ ಸ್ವಾಮ್ಯದ ಸುದ್ದಿ ವಾಹಿನಿ ವರದಿ ಮಾಡಿದೆ.

ಅಮೆರಿಕ ಪಡೆಗಳ ವಿರುದ್ಧ ತಾಲಿಬಾನ್ ಹೋರಾಟಗಾರರಿಗೆ ಇರಾನ್ ರಹಸ್ಯ ನೆರವು ನೀಡಿದೆ ಎಂದು ಈ ಹಿಂದೆ ಅಮೆರಿಕ ಆರೋಪಿಸಿತ್ತು. ಎಲ್ಲಾ ಜನಾಂಗೀಯ ಗುಂಪುಗಳು ಮತ್ತು ಪಂಗಡಗಳನ್ನು ಒಳಗೊಂಡ ಅಫ್ಗನ್ ಸರ್ಕಾರವನ್ನು ಬೆಂಬಲಿಸುವ ಇರಾನ್, ಅಮೆರಿಕದ ಆರೋಪವನ್ನು ಸ್ಪಷ್ಟವಾಗಿ ನಿರಾಕರಿಸಿತ್ತು.

ಅಫ್ಗಾನಿಸ್ತಾನವನ್ನು ತೊರೆಯುವ ಜೋ ಬೈಡನ್ ಅವರ ನಿರ್ಧಾರದಿಂದ ತಾಲಿಬಾನ್ ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಾಯಿತು ಎಂದು ಬ್ರಿಟನ್ ರಕ್ಷಣಾ ಸಚಿವ ಬೆನ್ ವ್ಯಾಲೇಸ್ ಆರೋಪಿಸಿದ್ದಾರೆ. ಅಫ್ಗನ್‌ನಲ್ಲಿ ತಾಲಿಬಾನ್ ಪ್ರಾಬಲ್ಯ ಪಡೆದ ಹಿನ್ನೆಲೆಯಲ್ಲಿ ಮತ್ತೆ ನ್ಯಾಟೊ ಪಡೆಗಳನ್ನು ರವಾನಿಸುವ ಸಾಧ್ಯತೆಗಳ ಬಗ್ಗೆ ಚರ್ಚೆಯಾಗುತ್ತಿದೆ. ಆದರೆ ಮತ್ತೆ ಅಫ್ಗನ್‌ಗೆ ಸೇನೆ ಕಳುಹಿಸುವುದಿಲ್ಲ ಎಂದು ಬ್ರಿಟನ್ ಸೋಮವಾರ ಸ್ಪಷ್ಟಪಡಿಸಿದೆ.

ಅಫ್ಗಾನಿಸ್ತಾನದಿಂದ ಸೇನಾ ವಾಪಸಾತಿಯನ್ನು ಅಮೆರಿಕ ಘೋಷಿಸಿದ್ದು ತನ್ನ ಆಂತರಿಕ ರಾಜಕೀಯ ಕಾರಣಗಳಿಂದ ಎಂದು ಜರ್ಮನಿ ಚಾನ್ಸೆಲರ್ ಏಂಜೆಲಾ ಮರ್ಕೆಲ್ ಅವರು ಹೇಳಿದ್ದಾರೆ. ಸುಮಾರು ಎರಡು ದಶಕಗಳಿಂದ ಭದ್ರತೆಯ ಹೊಣೆ ಹೊತ್ತಿದ್ದ ನ್ಯಾಟೊ ಪಡೆಗಳನ್ನು ಹೊರ ಕಳಿಸುವುದು ಅಂತಿಮವಾಗಿ ಅಮೆರಿಕದ ನಿರ್ಧಾರವಾಗಿತ್ತು ಎಂದು ಅವರು ಹೇಳಿದ್ದಾರೆ.

‘ಅಮೆರಿಕವು ಅಫ್ಗನ್‌ನಲ್ಲಿ ಉಳಿದರೆ ಮಾತ್ರ ನಾವು ನಮ್ಮ ಸೇನೆಯನ್ನು ಅಲ್ಲಿ ಮುಂದುವರಿಸುತ್ತೇವೆ ಎಂದು ಅಮೆರಿಕಕ್ಕೆ ಅನೇಕ ಬಾರಿ ಸ್ಪಷ್ಟಪಡಿಸಿದ್ದೆವು’ ಎಂದು ಮರ್ಕೆಲ್ ಹೇಳಿದ್ದಾರೆ. ಸೇನಾ ವಾಪಸಾತಿಯಿಂದ ತಾಲಿಬಾನ್ ಮತ್ತೆ ಪ್ರವರ್ಧಮಾನಕ್ಕೆ ಬರಲು ಕಾರಣವಾಯಿತು ಎಂದು ಅವರು ವಿಶ್ಲೇಷಿಸಿದ್ದಾರೆ.



ಕಾಬೂಲ್‌ನಲ್ಲಿರುವ ಅಫ್ಗನ್ ಅರಮನೆಯಿಂದ ಅಧ್ಯಕ್ಷ ಅಶ್ರಫ್ ಘನಿ ಅವರು ಪಲಾಯನ ಮಾಡಿದ ಬಳಿಕ ಅರಮನೆಯೊಳಗೆ ನುಗ್ಗಿದ ತಾಲಿಬಾನ್ ಉಗ್ರರು

–ಪಿಟಿಐ ಚಿತ್ರ

## ಅಮೆರಿಕದ ನಿರೀಕ್ಷೆ ತಲೆಕೆಳಗಾಗಿಸಿದ ತಾಲಿಬಾನ್

ತಾಲಿಬಾನ್ ಸಂಘಟನೆಯು ಅಫ್ಗಾನಿಸ್ತಾನವನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡ ವೇಗಕ್ಕೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಹಾಗೂ ಉನ್ನತ ಅಧಿಕಾರಿಗಳು ದಿಗ್ಭ್ರಮೆಗೊಂಡಿದ್ದಾರೆ. ಅಷ್ಟು ಸುಲಭವಾಗಿ ಅಫ್ಗನ್ ಸರ್ಕಾರ ಪತನವಾಗಿದ್ದು, ಮತ್ತು ಆನಂತರ ಉಂಟಾದ ಗಲಭೆಗಳು ಅಮೆರಿಕ ಸೇನೆಯ ಅತ್ಯುಚ್ಛ ನಾಯಕರೂ ಆಗಿರುವ ಬೈಡನ್ ಅವರನ್ನು ಗಂಭೀರ ಪರೀಕ್ಷೆಗೆ ಒಡ್ಡಿದವು. ಇದು ಬೈಡನ್ ವೈಫಲ್ಯ ಎಂದು ರಿಪಬ್ಲಿಕನ್ ಸದಸ್ಯರು ನೇರವಾಗಿ ದೂರಿದ್ದಾರೆ.

ಅಮೆರಿಕದ ಸೇನೆಯನ್ನು ವಾಪಸ್ ಕರೆಸಿಕೊಂಡ ಬೆನ್ನಲ್ಲೇ, ಅಲ್ಲಿದ್ದ ತನ್ನ ರಾಜತಾಂತ್ರಿಕ ಸಿಬ್ಬಂದಿಯನ್ನು ಸುರಕ್ಷಿತವಾಗಿ ಕರೆತರಲು ಅಮೆರಿಕ ಏದುಸಿರುಬಿಡಬೇಕಾಯಿತು. ಅಫ್ಗನ್ ಸೇನೆಯ ದಿಢೀರ್ ವೈಫಲ್ಯ ಮತ್ತು ತಾಲಿಬಾನಿಗಳ ಚುರುಕಿನ ಆಕ್ರಮಣದಿಂದ ಅಮೆರಿಕ ವಿಚಲಿತಗೊಂಡಿದ್ದು ಸುಳ್ಳಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.

‘ತಾಲಿಬಾನಿಗಳಿಂದ ತಮ್ಮ ಪ್ರಜಾಪ್ರಭುತ್ವವನ್ನು ರಕ್ಷಿಸಲು ಹೋರಾಡುವ ‘ಆತ್ಮಸ್ಥೈರ್ಯವನ್ನು’ ಅಫ್ಗನ್ ಭದ್ರತಾ ಪಡೆಗಳಿಗೆ ನೀಡಲು ಅಮೆರಿಕಕ್ಕೆ ಸಾಧ್ಯವಾಗಲಿಲ್ಲ ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜಾಕ್ ಸಲಿವನ್ ಅವರು ಒಪ್ಪಿಕೊಂಡಿದ್ದಾರೆ.

## ಹಣದೊಂದಿಗೆ ಘನಿ ಪರಾರಿ

ಮಾಸ್ಕೊ (ಪಿಟಿಐ): ತಾಲಿಬಾನ್ ಕೈವಶವಾಗಿರುವ ಅಫ್ಗಾನಿಸ್ತಾನದಿಂದ ಅಧ್ಯಕ್ಷ ಅಶ್ರಫ್ ಘನಿ ಪರಾರಿಯಾಗಿದ್ದು, ಈ ವೇಳೆ ಹೆಲಿಕಾಪ್ಟರ್‌ನಲ್ಲಿ ಹಣವನ್ನು ತುಂಬಿಕೊಂಡು ಹೋಗಿದ್ದಾಗಿ ರಷ್ಯಾದ ಅಧಿಕೃತ ಮಾಧ್ಯಮವು ಸೋಮವಾರ ವರದಿ ಮಾಡಿದೆ.

ಕಾಬೂಲ್‌ನಲ್ಲಿರುವ ರಷ್ಯಾದ ರಾಜತಾಂತ್ರಿಕ ಸಿಬ್ಬಂದಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ ರಷ್ಯಾದ ಅಧಿಕೃತ ಸುದ್ದಿ ಏಜೆನ್ಸಿ ಟಿಎಎಸ್‌ಎಸ್ ವರದಿ ಮಾಡಿದ್ದು, ‘ನಾಲ್ಕು ಕಾರುಗಳು ಹಣದಿಂದ ಭರ್ತಿಯಾಗಿದ್ದವು. ಹಣ ತುಂಬಿದ್ದ ಮತ್ತೊಂದು ಚೀಲವನ್ನು ಹೆಲಿಕಾಪ್ಟರ್‌ನಲ್ಲಿ ಇಡಲು ಅವರು ಪ್ರಯತ್ನಿಸಿದರು. ಆದರೆ, ಎಲ್ಲ ಹಣವನ್ನೂ ಇಡಲು ಜಾಗ ಸಾಕಾಗಲಿಲ್ಲ. ಹೀಗಾಗಿ, ರನ್‌ವೇನಲ್ಲೇ ಒಂದಷ್ಟು ಹಣವನ್ನು ಬಿಟ್ಟುಹೋದರು’ ಎಂದು ಹೇಳಿದೆ.

ರಷ್ಯಾದ ರಾಜತಾಂತ್ರಿಕ ಮಿಷನ್‌ನ ವಕ್ತಾರರಾದ ನಿಖಿತಾ ಇಶಾಂಕೊ ಅವರನ್ನು ಉಲ್ಲೇಖಿಸಿ ರಷ್ಯಾದ ವೈರ್ ಸರ್ವೀಸ್ ಸ್ಪುಟ್ನಿಕ್ ವರದಿ ಮಾಡಿದ್ದು, ಕಾಬೂಲ್ ತೊರೆಯುತ್ತಿದ್ದ ಘನಿ ಅವರನ್ನು ಹಣ ತುಂಬಿಸಲಾಗಿದ್ದ ಕಾರುಗಳು ಹಿಂಬಾಲಿಸಿದ್ದಾಗಿ ಹೇಳಿದೆ.

ದೇಶದ ತೊರೆದ ನಂತರ ಮೊದಲ ಬಾರಿಗೆ, ಭಾನುವಾರ ಫೇಸ್‌ಬುಕ್ ಪೋಸ್ಟ್ ಮಾಡಿರುವ ಘನಿ, ದೇಶ ತೊರೆಯುವ ನಿರ್ಧಾರಕ್ಕೆ ಕಾರಣವನ್ನು ನೀಡಿದ್ದಾರೆ. ‘ನನ್ನ ಮುಂದೆ ಇದ್ದದ್ದು ಎರಡು ಕಠಿಣ ಆಯ್ಕೆಗಳು. ಒಂದು; ಅಧ್ಯಕ್ಷರ ಅರಮನೆಯನ್ನು ಪ್ರವೇಶಿಸಲು ಸಜ್ಜಾಗಿದ್ದ ಸಶಸ್ತ್ರ ತಾಲಿಬಾನ್ ಪಡೆಯನ್ನು ಎದುರಿಸುವುದು ಮತ್ತು ಇನ್ನೊಂದು; ಕಳೆದ ಇಪ್ಪತ್ತು ವರ್ಷಗಳಿಂದ ನಾನು ರಕ್ಷಿಸಿಕೊಂಡು ಬಂದಿದ್ದ ನನ್ನ ದೇಶವನ್ನು ತೊರೆಯುವುದು. ಆದರೆ, ತಾಲಿಬಾನ್ ಪಡೆಗೆ ಅಧ್ಯಕ್ಷರನ್ನು ಇಳಿಸುವುದು ಬೇಕಾಗಿತ್ತು. ಅದಕ್ಕಾಗಿ ಅವರು ಲೆಕ್ಕವಿಲ್ಲದಷ್ಟು ರಕ್ತಪಾತ ನಡೆಸುತ್ತಿದ್ದರು. ಅದನ್ನು ತಡೆಯುವುದಕ್ಕಾಗಿಯೇ ನಾನು ದೇಶ ತೊರೆಯುವ ನಿರ್ಧಾರಕ್ಕೆ ಬಂದೆ’ ಎಂದಿದ್ದಾರೆ.

ಘನಿ, ಸದ್ಯಕ್ಕೆ ತಜಕಿಸ್ತಾನದಲ್ಲಿ ಆಶ್ರಯ ಪಡೆದಿದ್ದಾರೆ ಎನ್ನಲಾಗಿದೆ.

## ದೇಶ ಬಿಡಲು ನೂಕುನುಗ್ಗಲು

ಒಂದನೇ ಪುಟದಿಂದ...

ತಮ್ಮ ಹೆಸರು ಬಹಿರಂಗವಾಗದರೆ ಇಲ್ಲಿ ಬದುಕುವ ಸಾಧ್ಯತೆಯೇ ಕಮರಿ ಹೋಗಬಹುದು ಎಂಬ ಆತಂಕವನ್ನೂ ಅವರು ವ್ಯಕ್ತಪಡಿಸಿದ್ದಾರೆ.

ವಿಮಾನ ನಿಲ್ದಾಣ ಪ್ರದೇಶವನ್ನು ನಿಯಂತ್ರಣಕ್ಕೆ ಪಡೆದುಕೊಂಡಿರುವುದಾಗಿ ಅಮೆರಿಕ ಸೇನೆಯು ಹೇಳಿದೆ. ರಾಜತಾಂತ್ರಿಕ ಕಚೇರಿಯಲ್ಲಿ ಕೆಲಸ ಮಾಡಿದವರನ್ನು ತೆರವು ಮಾಡಲು ನಿಲ್ದಾಣವನ್ನು ಬಳಸಿಕೊಳ್ಳಲಾಗುವುದು. 2001ರಲ್ಲಿ ತಾಲಿಬಾನ್ ಆಳ್ವಿಕೆಯನ್ನು ಹಿಮ್ಮೆಟ್ಟಿಸಲು ನೆರವಾದ ಅಫ್ಗಾನಿಸ್ತಾನೀಯರನ್ನು ಕೂಡ ದೇಶ ಬಿಟ್ಟು ತೆರಳಲು ಸಹಾಯ ಮಾಡಲಾಗುವುದು ಎಂದು ಅಮೆರಿಕ ಹೇಳಿದೆ.

‘ವಿಮಾನ ನಿಲ್ದಾಣಕ್ಕೆ ಬರಬೇಡಿ’ ಎಂದು ಕಾಬೂಲ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿಯು ಅಮೆರಿಕ ಮತ್ತು ಅಫ್ಗಾನಿಸ್ತಾನ ಪ್ರಜೆಗಳಿಗೆ ಟ್ವೀಟ್ ಮೂಲಕ ಸೂಚನೆ ನೀಡಿದೆ. ಹಾಗಿದ್ದರೂ ನೂರಾರು ಜನರು ವಿಮಾನ ನಿಲ್ದಾಣ ಪ್ರದೇಶದಲ್ಲಿ ಜಮಾಯಿಸಿದ್ದಾರೆ. ಟಿಕೆಟ್ ಆಗಲಿ, ವೀಸಾ ಆಗಲಿ ಅವರಲ್ಲಿ ಇಲ್ಲ, ದೇಶ ಬಿಟ್ಟು ಹೋಗಲು ಸಾಧ್ಯವಾಗಬಹುದು ಎಂಬ ಭರವಸೆಯಿಂದ ಅವರೆಲ್ಲರೂ ನಿಲ್ದಾಣದತ್ತ ಧಾವಿಸಿದ್ದಾರೆ.

ಅಫ್ಗಾನಿಸ್ತಾನ ಅಧ್ಯಕ್ಷ ಅಶ್ರಫ್ ಘನಿ ಅವರು ದೇಶ ತೊರೆದು ಪರಾರಿಯಾದ ಬಳಿಕ, ಕಾನೂನು–ಸುವ್ಯವಸ್ಥೆ ಕಾಯ್ದುಕೊಳ್ಳುವುದಕ್ಕಾಗಿ ನಗರ ಪ್ರವೇಶಿಸುವಂತೆ ತನ್ನ ಸೈನಿಕರಿಗೆ ತಾಲಿಬಾನ್ ಆದೇಶಿಸಿತ್ತು. ಅದಾದ ಬಳಿಕ ಜನರು ಭೀತರಾಗಿದ್ದಾರೆ.

# ಪರಿಸ್ಥಿತಿ ಮೇಲೆ ಭಾರತ ನಿಕಟ ನಿಗಾ

ನವದೆಹಲಿ: ಭಾರತದ ರಕ್ಷಣಾ ಪಡೆಗಳು, ವಿದೇಶಾಂಗ ನೀತಿ ಮತ್ತು ಗುಪ್ತಚರ ವಿಭಾಗದ ಹಿರಿಯ ಅಧಿಕಾರಿಗಳು ಸೋಮವಾರ ಸಭೆ ಸೇರಿ ಅಫ್ಗಾನಿಸ್ತಾನ ಪರಿಸ್ಥಿತಿಯ ಅವಲೋಕನ ನಡೆಸಿದ್ದಾರೆ.

ಭಾರತದ ರಾಯಭಾರ ಕಚೇರಿ ಸಿಬ್ಬಂದಿ, ಭದ್ರತಾ ಸಿಬ್ಬಂದಿ ಸೇರಿ ಸುಮಾರು 200 ಭಾರತೀಯರು ಈಗಲೂ ಅಫ್ಗಾನಿಸ್ತಾನದಲ್ಲಿ ಇದ್ದಾರೆ. ಅವರನ್ನು ಅಲ್ಲಿಂದ ಕರೆತರುವುದು ಭಾರತದ ಆದ್ಯತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಕಾಬೂಲ್ ವಿಮಾನ ನಿಲ್ದಾಣದಲ್ಲಿನ ಗೊಂದಲದಿಂದಾಗಿ ತೆರವು ಕಾರ್ಯಾಚರಣೆ ನಡೆದಿಲ್ಲ. ಸಿ–17 ಗ್ಲೋಬ್‌ಮಾಸ್ಟರ್ ಸೇನಾ ವಿಮಾನಗಳನ್ನು ಸನ್ನದ್ಧ ಸ್ಥಿತಿಯಲ್ಲಿರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಭಾರತದ ರಾಯಭಾರ ಕಚೇರಿ ಮತ್ತು ಇತರೆಡೆಗಳಲ್ಲಿ ಇರುವ ಭಾರತೀಯರನ್ನು ಕಾಬೂಲ್ ವಿಮಾನ ನಿಲ್ದಾಣಕ್ಕೆ ಕರೆತರುವುದು ಕೂಡ ಈಗ ಅಪಾಯಕಾರಿಯಾಗಿದೆ ಎಂದು ಹೇಳಲಾಗಿದೆ.

ಹಿಂದೂ, ಸಿಖ್ ಸಮುದಾಯದ ನೂರಾರು ಮಂದಿ, ಭಾರತದ ವೀಸಾಕ್ಕೆ ಅರ್ಜಿ ಸಲ್ಲಿಸಿರುವ ಹಲವು ಮಂದಿಯನ್ನೂ ಭಾರತಕ್ಕೆ ಕರೆ ತರುವ ಬಗ್ಗೆ ಚಿಂತನೆ ನಡೆದಿದೆ ಎನ್ನಲಾಗಿದೆ.

ಅಫ್ಗಾನಿಸ್ತಾನದಲ್ಲಿ ತಾಲಿಬಾನ್‌ನ ಅತಿ ವೇಗದ ಕಾರ್ಯಾಚರಣೆಯು ಭಾರತ ಸೇರಿ ಹಲವು ದೇಶಗಳಿಗೆ ಅಚ್ಚರಿ ಉಂಟು ಮಾಡಿದೆ. ‘ನಿಜವಾಗಿಯೂ ನಾವು ಈ ಪರಿಸ್ಥಿತಿಯನ್ನು ನಿರೀಕ್ಷಿಸಿರಲಿಲ್ಲ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅಲ್ಲಿ 500ಕ್ಕೂ ಹೆಚ್ಚು ಯೋಜನೆಗಳಲ್ಲಿ ಭಾರತ ತೊಡಗಿಸಿಕೊಂಡಿದೆ. ಸುಮಾರು ₹22 ಸಾವಿರ ಕೋಟಿಗೂ ಹೆಚ್ಚು ಮೊತ್ತವನ್ನು ಭಾರತವು ಅಲ್ಲಿ ಹೂಡಿಕೆ ಮಾಡಿದೆ.

**ಸನ್ನದ್ಧ ಸ್ಥಿತಿ:** ಅಫ್ಗಾನಿಸ್ತಾನದ ಬೆಳವಣಿಗೆ ಮೇಲೆ ಕಣ್ಣಿರಿಸಲಾಗಿದೆ. ಯಾವುದೇ ಪರಿಸ್ಥಿತಿ ಎದುರಿಸುವ ಸನ್ನದ್ಧತೆ ಇದೆ ಎಂದು ಗಡಿ ರಕ್ಷಣಾ ಪಡೆಯ (ಬಿಎಸ್‌ಎಫ್) ಮಹಾ ನಿರ್ದೇಶಕ ಎಸ್.ಎಸ್. ದೇಸ್ವಾಲ್ ಅವರು ಸೋಮವಾರ ಹೇಳಿದ್ದಾರೆ. ಅಫ್ಗಾನಿಸ್ತಾನದ ವಿದ್ಯಮಾನವು ಆ ದೇಶದ ಆಂತರಿಕ ವಿಚಾರ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಬಿಎಸ್‌ಎಫ್‌ನ ನೂರು ಯೋಧರ ‘ಸ್ವಾತಂತ್ರ್ಯ ಸೈಕಲ್ ಜಾಥಾ’ಕ್ಕೆ ಚಾಲನೆ ಕೊಡಲು ಅವರು ಜಮ್ಮುವಿಗೆ ಭೇಟಿಕೊಟ್ಟಿದ್ದರು.

**ಏಳುಸಾವು:** ಕಾಬೂಲ್‌ನಲ್ಲಿ ಸೋಮವಾರ ಏಳು ಜನರು ಮೃತಪಟ್ಟಿದ್ದಾರೆ ಎಂದು ಅಮೆರಿಕದ ಸೇನೆಯ ಅಧಿಕಾರಿಗಳು ತಿಳಿಸಿದ್ದಾರೆ. ಅಮೆರಿಕ ಸೇನಾ ವಿಮಾನದ ಮೇಲೆ ಕೆಲವರು ಹತ್ತಿದ್ದರು. ವಿಮಾನ ಹಾರಿದಾಗ ಅವರಲ್ಲಿ ಕೆಲವರು ಕೆಲ ಬಿದ್ದು ಮೃತಪಟ್ಟಿದ್ದಾರೆ.

## ಗೆಲುವಿನ ನಗೆ ಬೀರಿದ ಬರದರ್



ಲಂಡನ್ (ಪಿಟಿಐ): ಅಮೆರಿಕದ ವಿನಂತಿಯಂತೆ ಮೂರು ವರ್ಷಗಳ ಹಿಂದೆ ಪಾಕಿಸ್ತಾನದ ಜೈಲಿನಿಂದ ಬಿಡುಗಡೆಯಾದ ಅಬ್ದುಲ್ ಘನಿ ಬರದರ್ ಈಗ ಅಫ್ಗಾನಿಸ್ತಾನ ಯುದ್ಧದ ವಿಜೇತನಾಗಿ ಹೊರ ಹೊಮ್ಮಿದ್ದಾನೆ ಎಂದು ಬ್ರಿಟನ್‌ನ ಮಾಧ್ಯಮಗಳು ವರದಿ ಮಾಡಿವೆ.

ಹೈಬತ್ ಉಲ್ಲಾ ಅಖುಂದ್ಜಾದಾ ತಾಲಿಬಾನ್‌ನ ಅತ್ಯುನ್ನತ ನಾಯಕ. ಬರದರ್, ಅದರ ರಾಜಕೀಯ ವಿಭಾಗದ ಮುಖ್ಯಸ್ಥ. ಜನರಿಗೆ ಹೆಚ್ಚು ಕಾಣಿಸಿಕೊಂಡಿರುವ ಮುಖ ಈತನದ್ದು ಮಾತ್ರ. ಕತಾರ್‌ನ ದೋಹಾದಲ್ಲಿದ್ದ ಈಗ ಭಾನುವಾರ ಸಂಜೆಯೇ ಕಾಬೂಲ್‌ನತ್ತ ಹೊರಟಿದ್ದಾನೆ ಎನ್ನಲಾಗಿದೆ.

ಅಫ್ಗಾನಿಸ್ತಾನವು ತಾಲಿಬಾನ್ ವಶವಾದ ಬಳಿಕ ಈತ ಹೇಳಿಕೆಯನ್ನೂ ನೀಡಿದ್ದಾನೆ. ಇದು ಆರಂಭ, ಮುಂದೆ ದೇಶ ಸೇವೆಮಾಡಬೇಕಿದೆ ಎಂದು ಈತ ಹೇಳಿದ್ದಾಗಿ ದಿ ಗಾರ್ಡಿಯನ್ ಪತ್ರಿಕೆ ವರದಿ ಮಾಡಿದೆ.

ಬರದರ್ ನಿರಂತರ ಸಂಘರ್ಷದಲ್ಲಿಯೇ ಇದ್ದವನು. 1968ರಲ್ಲಿ ಉರುಜ್ಗನ್ ಪ್ರಾಂತ್ಯದಲ್ಲಿ ಜನಿಸಿದ ಈತ 1980ರ ದಶಕದಲ್ಲಿ ರಷ್ಯಾ ವಿರುದ್ಧ ಅಫ್ಗನ್ ಮುಜಾಹಿದೀನ್ ಪರವಾಗಿ ಹೋರಾಡಿದ್ದ. 1992ರಲ್ಲಿ ರಷ್ಯಾ ಹೊರ ನಡೆದ ಬಳಿಕ ಕಂದಹಾರ್‌ನಲ್ಲಿ ಮದರಸವೊಂದನ್ನು ಆರಂಭಿಸಿದ್ದ. ತನ್ನ ಸೋದರ ಸಂಬಂಧಿ ಮುಲ್ಲಾ ಮುಹಮ್ಮದ್ ಉಮರ್ ಜತೆಗೂಡಿ ಈತ ತಾಲಿಬಾನ್ ಸ್ಥಾಪಿಸಿದ.

ತಾಲಿಬಾನ್ 20 ವರ್ಷ ಅಜ್ಞಾತವಾಗಿದ್ದಾಗ ಅದರ ಸೇನಾ ಕಮಾಂಡರ್ ಮತ್ತು ರಾಜಕೀಯ ವಿಭಾಗದ ಮುಖ್ಯಸ್ಥನಾಗಿ ಈತ ಇದ್ದ ಎನ್ನಲಾಗಿದೆ.

## ದಾಸ್ಯದ ಸಂಕೋಲೆ ಕಳಚಿದೆ: ಪಾಕ್

ಅಫ್ಗಾನಿಸ್ತಾನವನ್ನು ಕೈವಶ ಪಡೆದಿರುವ ತಾಲಿಬಾನ್ ಸರ್ಕಾರಕ್ಕೆ ಪಾಕಿಸ್ತಾನ ಮಾನ್ಯತೆ ನೀಡುವ ಸಾಧ್ಯತೆ ಇದೆ. ಅಫ್ಗಾನಿಸ್ತಾನವು ‘ದಾಸ್ಯದ ಸಂಕೋಲೆ ಕಳಚಿದೆ’ ಎಂದು ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಹೇಳಿದ್ದಾರೆ.

ಅಫ್ಗಾನಿಸ್ತಾನದ ಬೆಳವಣಿಗೆಗಳನ್ನು ಪರೋಕ್ಷವಾಗಿ ಉಲ್ಲೇಖಿಸಿದ ಅವರು ಜನರು ದಾಸ್ಯದ ಸಂಕೋಲೆ ಕಿತ್ತೆಸೆದಿದ್ದಾರೆ ಎಂದರು. ಅಫ್ಘಾನಿಸ್ತಾನದ ಪ್ರಜಾಸತ್ತಾತ್ಮಕ ಸರ್ಕಾರವನ್ನು ಕಿತ್ತೊಗೆದ ತಾಲಿಬಾನ್‌ಗೆ ಪಾಕಿಸ್ತಾನವು ಬೆಂಬಲ ನೀಡಿದೆ ಎಂಬ ಆರೋಪ ಇದೆ.

ಅಫ್ಗಾನಿಸ್ತಾನದಲ್ಲಿ ಎಲ್ಲರನ್ನೂ ಒಳಗೊಂಡ ಸರ್ಕಾರ ಇರಬೇಕು ಎಂಬುದು ಪಾಕಿಸ್ತಾನದ ಅಧಿಕೃತ ನಿಲುವು. ಅಧಿಕಾರ ಹಸ್ತಾಂತರವು ಸುಗಮವಾಗಿ ನಡೆಯಲು ಈ ಹಿಂದೆಯೇ ಪಾಕಿಸ್ತಾನವು ಅಫ್ಗಾನಿಸ್ತಾನ ನಾಯಕರ ಸಭೆಯನ್ನೂ ಆಯೋಜಿಸಿತ್ತು.



ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ಅತಿಥಿಗೃಹದಲ್ಲಿರುವ ಅಫ್ಗಾನಿಸ್ತಾನದ ವಿದ್ಯಾರ್ಥಿಗಳು

## ಕುಟುಂಬದವರ ಸುರಕ್ಷತೆ ಬಗ್ಗೆ ಆತಂಕ!

ಧಾರವಾಡ: ‘ಅಫ್ಗಾನಿಸ್ತಾನ ಈಗ ತಾಲಿಬಾನ್ ಬಂಡುಕೋರರ ಕೈವಶದಲ್ಲಿದೆ. ಅಲ್ಲಿರುವ ನಮ್ಮ ಕುಟುಂಬದ ಸುರಕ್ಷತೆ ಬಗ್ಗೆ ಚಿಂತೆಯಾಗುತ್ತಿದೆ’ ಎಂದು ಇಲ್ಲಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ಅಫ್ಗಾನ್ ವಿದ್ಯಾರ್ಥಿಗಳು ಕಳವಳ ವ್ಯಕ್ತಪಡಿಸಿದರು.

ಕೃಷಿ ವಿಷಯ ಕುರಿತು ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳಾಗಿರುವ ಅವರು, ‘ಇಲ್ಲಿ ನಾವು ಸುರಕ್ಷಿತವಾಗಿದ್ದೇವೆ. ಆದರೆ ಅಲ್ಲಿ ಏನಾಗುತ್ತಿದೆಯೋ ಎಂಬ ಆತಂಕ ಕಾಡುತ್ತಿದೆ’ ಎಂದು ತಮ್ಮ ಮನದಾಳವನ್ನು ಬಿಚ್ಚಿಟ್ಟರು.

ಈ ವಿದ್ಯಾರ್ಥಿಗಳೊಂದಿಗೆ ಕುಲಪತಿ ಡಾ. ಎಂ.ಬಿ.ಚೆಟ್ಟಿ ಸೋಮವಾರ ಮಾತನಾಡಿ ಅವರಿಗೆ ಧೈರ್ಯ ತುಂಬಿದರು.

ಅಫ್ಗಾನಿಸ್ತಾನದ ಒಟ್ಟು 15 ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಿದ್ದಾರೆ. ಇವರಲ್ಲಿ 4 ಜನ ಸಂಶೋಧನಾ ವಿದ್ಯಾರ್ಥಿಗಳು. ಉಳಿದವರು ಸ್ನಾತಕೋತ್ತರ ಕೋರ್ಸ್ ಕಲಿಯುತ್ತಿದ್ದಾರೆ. ಕೊರೊನಾ ಸಂದರ್ಭದಲ್ಲಿ ಐವರು ವಿದ್ಯಾರ್ಥಿಗಳು ಸ್ವದೇಶಕ್ಕೆ ಮರಳಿದ್ದಾರೆ. ಅಲ್ಲಿಂದಲೇ ಅವರು ಆನ್‌ಲೈನ್ ತರಗತಿಗಳಲ್ಲಿ ಪಾಲ್ಗೊಂಡಿದ್ದರು.

ಮಾಧ್ಯಮದವರೊಂದಿಗೆ ಅಫ್ಗಾನ್ ವಿದ್ಯಾರ್ಥಿ ಪಾಮೀರ್ ಪ್ರತಿಕ್ರಿಯಿಸಿ, ‘ದೇಶದ ಪ್ರಜೆಗಳಿಗೆ ಯಾವುದೇ ತೊಂದರೆ ಕೊಡುವುದಿಲ್ಲ ಎಂಬ ತಾಲಿಬಾನಿಗಳ ಹೇಳಿಕೆ ಸಮಾಧಾನ ತಂದಿದೆ’ ಎಂದರು.

ಮತ್ತೊಬ್ಬ ವಿದ್ಯಾರ್ಥಿ ನಸ್ರತ್ ಮಾತನಾಡಿ, ‘ಚುನಾಯಿತ ಸರ್ಕಾರ ಅಲ್ಲಿತ್ತು. ಎಲ್ಲವೂ ಸರಿಯಾಗಿ ನಡೆಯುತ್ತಿತ್ತು. ಆದರೆ ಇಂಥ ಪರಿಸ್ಥಿತಿ ಬರುತ್ತದೆ ಎಂಬ ಕಲ್ಪನೆಯೂ ಇರಲಿಲ್ಲ’ ಎಂದರು.

## ಓಡಿ ಬಚಾವಾದೆ: ಭಾರತಕ್ಕೆ ಬಂದ ಅಫ್ಗನ್ ಅಧಿಕಾರಿ

ನವದೆಹಲಿ (ಪಿಟಿಐ): ‘ನಾನು ಓಡಿ ಬರಲೇಬೇಕಿತ್ತು. ಇಲ್ಲದಿದ್ದರೆ ತಾಲಿಬಾನ್ ನನ್ನನ್ನು ಕೊಂದೇ ಬಿಡುತ್ತಿತ್ತು. ಇಲ್ಲಿಗೆ ಎಲ್ಲವೂ ಮುಗಿಯಿತು’ ಹೀಗೆಂದು ಅಫ್ಗಾನಿಸ್ತಾನದ ಗುಪ್ತಚರ ಇಲಾಖೆ ಅಧಿಕಾರಿ ಆಸಿಫ್ ಕಣ್ಣೀರಿಡುತ್ತಾ ಅಸ್ಪಷ್ಟ ಹಿಂದಿಯಲ್ಲಿ ಹೇಳಿದರು.

ಭಾನುವಾರ ಕಾಬೂಲ್‌ನಿಂದ ಬಂದ ಕಡೆಯ ವಿಮಾನ ಏರಿ ಪ್ರಾಣ ಉಳಿಸಿಕೊಳ್ಳಲು ಭಾರತಕ್ಕೆ ಬಂದ ಅಫ್ಗಾನಿಸ್ತಾನ ಪ್ರಜೆಗಳಲ್ಲಿ ಆಸಿಫ್ ಕೂಡಾ ಒಬ್ಬರು.

ಅವರ ದೇಶವಾಸಿ ಒಬ್ಬರು ಆಸಿಫ್‌ಗೆ ದೆಹಲಿಯ ಲಾಜ್‌ಪತ್ ನಗರದಲ್ಲಿ ದಿನಕ್ಕೆ ₹500 ಬಾಡಿಗೆಗೆ ಕೊಠಡಿಯೊಂದನ್ನು ಕೊಡಿಸಿದ್ದಾರೆ. ‘ನಾನು ₹200ರಿಂದ ₹300ರ ಒಳಗೆ ಸಿಗುವ ಬಾಡಿಗೆ ಕೊಠಡಿಯನ್ನು ಹುಡುಕುತ್ತೇನೆ’ ಎಂದು ಆಸಿಫ್ ಹೇಳಿದರು. ಅವರು ಊಟ ಮಾಡಿದ್ದಾರೆಯೇ ಎಂದು ಸುದ್ದಿಗಾರರು ಪ್ರಶ್ನೆ ಕೇಳುತ್ತಿದ್ದಂತೆ ಕಣ್ಣೀರು ಹಾಕಿದರು.

ತಮ್ಮ ಗುರುತನ್ನು ಆಸಿಫ್ ಎಂದಷ್ಟೇ ಹೇಳಲು ಇಚ್ಛಿಸಿದ ಅವರು, ಅಫ್ಗಾನಿಸ್ತಾನದ ನ್ಯಾಷನಲ್ ಡೈರೆಕ್ಟರೇಟ್ ಆಫ್ ಸೆಕ್ಯುರಿಟಿಯ (ಎನ್‌ಡಿಎಸ್) ಅಧಿಕಾರಿ. ‘ಸರ್ಕಾರದ ವಿರುದ್ಧ ದಂಗೆ ಏಳಬೇಕು. ಇಲ್ಲದಿದ್ದರೆ ನಿಮ್ಮನ್ನು ಕೊಲ್ಲುತ್ತೇವೆ ಎಂದು ತಾಲಿಬಾನ್ ನಮಗೆ ನೋಟಿಸ್ ನೀಡಿತ್ತು. ತಾಲಿಬಾನ್ ನಮ್ಮನ್ನು ಹಿಡಿದು ಕೊಲ್ಲುತ್ತಿದೆ. ಅಧ್ಯಕ್ಷ ಅಶ್ರಫ್ ಘನಿ ದೇಶ ತೊರೆದ ಬಳಿಕ ನಾವು ನಂಬಿಕೆಯನ್ನು ಕಳೆದುಕೊಂಡೆವು. ನಾವು ವಾಪಸ್ಸು ಹೋಗುತ್ತೇವೆ ಎಂಬ ಭರವಸೆ ಇಲ್ಲ. ನನ್ನ ಕುಟುಂಬ ಕಾಬೂಲ್‌ನ ನಮ್ಮ ಮನೆಯಲ್ಲಿ ಅವಿತು ಕುಳಿತಿದೆ. ಅವರ ಜೊತೆ ಸಂಪರ್ಕ ಸಾಧಿಸಲು ಆಗುತ್ತಿಲ್ಲ’ ಎಂದು ಹೇಳಿದರು.

# ಪೆಗಾಸಸ್ ಬಳಸಿಲ್ಲ ಎಂದು ದೃಢಪಡಿಸುವಿರೇ: ‘ಸುಪ್ರೀಂ’ ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧ ವರ್ಗಗಳ ಜನರ ಮೇಲೆ ಬೇಹುಗಾರಿಕೆ ನಡೆಸಲು ಪೆಗಾಸಸ್ ಕುತಂತ್ರಾಂಶವನ್ನು ಬಳಸಿದೆ ಅಥವಾ ಬಳಸಿಲ್ಲ ಎಂಬ ವಿಚಾರವನ್ನು ನ್ಯಾಯಾಲಯದ ಮುಂದೆ ದೃಢಪಡಿಸುವ ಬಯಕೆಯ ಇದೆಯೇ ಎಂದು ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಗೂಢಚರ್ಯೆ ನಡೆಸಿಲ್ಲ. ಆದರೆ, ಅದಕ್ಕೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಪರಿಶೀಲಿಸಲು ತಜ್ಞರ ಸಮಿತಿ ರಚಿಸಲಾಗುವುದು ಎಂದು ಕೇಂದ್ರ ಸರ್ಕಾರವು ಸಲ್ಲಿಸಿರುವ ಎರಡು ಪುಟಗಳ ಪ್ರಮಾಣ ಪತ್ರವು ಅರ್ಜಿದಾರರಿಗೆ ತೃಪ್ತಿ ತಂದಿಲ್ಲ ಎಂಬುದು ಗಮನಕ್ಕೆ ಬಂದಿದೆ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು ಸೋಮವಾರ ಹೇಳಿದೆ.

‘ಪ್ರಕರಣದ ವಿಚಾರಣೆಯು ನಾಳೆಯೂ (ಮಂಗಳವಾರ) ಮುಂದುವರಿಯಲಿದೆ. ಇನ್ನೊಂದು ವಿವರವಾದ ಪ್ರಮಾಣಪತ್ರ ಸಲ್ಲಿಸುವ ಇಚ್ಛೆ ಇದೆಯೇ? ಹಾಗಿದ್ದರೆ ನಮ್ಮ ಗಮನಕ್ಕೆ ತನ್ನಿ. ಇಲ್ಲ ಎಂದಾದರೆ ವಿಚಾರಣೆ ಮುಂದುವರಿಸಬಹುದು. ಪ್ರಮಾಣಪತ್ರ ಸಲ್ಲಿಕೆಗೆ ಸರ್ಕಾರಕ್ಕೆ ಇಚ್ಛೆ ಇಲ್ಲ ಎಂದಾದರೆ ಬಲವಂತ ಮಾಡಲಾಗದು’ ಎಂದು ಪೀಠವು ಹೇಳಿತು.

ಸಾಮಾಜಿಕ ಹೋರಾಟಗಾರರು, ರಾಜಕಾರಣಿಗಳು, ಪತ್ರಕರ್ತರು, ನ್ಯಾಯಾಂಗದ ಸದಸ್ಯರು ಮುಂತಾದವರ ಮೇಲೆ ಬೇಹುಗಾರಿಕೆ ನಡೆಸಲಾಗಿದೆ ಎಂಬ ಆರೋಪವನ್ನು ಸರ್ಕಾರವು ಸ್ಪಷ್ಟವಾಗಿ ತಳ್ಳಿ ಹಾಕಿದೆ. ಆದರೆ, ಈ ವಿಚಾರದಲ್ಲಿ ಸ್ಥಾಪಿತ ಹಿತಾಸಕ್ತಿಗಳ ಅಪಪ್ರಚಾರವನ್ನು ಬಯಲು ಮಾಡುವುದಕ್ಕಾಗಿ ಪರಿಣತರ ಸಮಿತಿ ರಚಿಸಲಾಗುವುದು ಎಂದು ತಿಳಿಸಿದೆ.

ಬೇಹುಗಾರಿಕೆಯು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರ. ಹಾಗಾಗಿ, ಪ್ರಮಾಣಪತ್ರದ ಮೂಲಕ ಎಲ್ಲವನ್ನೂ ಹೇಳಲು ಸಾಧ್ಯವಿಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. ಬೇಹುಗಾರಿಕೆ ನಡೆಸಿಲ್ಲ ಎಂದು ಸರ್ಕಾರವು ಪ್ರಮಾಣಪತ್ರ ಸಲ್ಲಿಸಿದರೆ ಅರ್ಜಿದಾರರು ತಮ್ಮ ಅರ್ಜಿಗಳನ್ನು ವಾಪಸ್ ಪಡೆಯುತ್ತಾರೆಯೇ ಎಂದು ಪ್ರಶ್ನಿಸಿದರು.

ಪೆಗಾಸಸ್ ಕುತಂತ್ರಾಂಶವನ್ನು ಸರ್ಕಾರ ಅಥವಾ ಅದರ ಸಂಸ್ಥೆಗಳು ಎಂದಾದರೂ ಬಳಸಿವೆಯೇ ಎಂಬ ಪ್ರಶ್ನೆಗೆ ಉತ್ತರ ನೀಡಲು ಸರ್ಕಾರ ಹಿಂದೇಟು ಹಾಕಿದೆ. ಈ ವಿಚಾರದಲ್ಲಿ ತಾವು ನಿರಪರಾಧಿ ಎಂಬುದನ್ನು ಸರ್ಕಾರವು ಸಾಬೀತು ಮಾಡುವಂತೆ ಸೂಚಿಸಬೇಕು ಎಂದು ಅರ್ಜಿದಾರ ಎನ್. ರಾಮ್ ಮತ್ತು ಇತರರ ಪರ ವಕೀಲರಾದ ಕಪಿಲ್ ಸಿಬಲ್, ಶ್ಯಾಮ್ ದಿವಾನ್, ರಾಕೇಶ್ ದ್ವಿವೇದಿ ಹೇಳಿದರು.

ಪೆಗಾಸಸ್ ಕುತಂತ್ರಾಂಶವನ್ನು ಬಳಸಿಯೇ ಇಲ್ಲ ಎಂದು ಸರ್ಕಾರವು ಪ್ರಮಾಣ ಮಾಡಬೇಕು ಎಂದು ಸಿಬಲ್ ಆಗ್ರಹಿಸಿದರು.

# ಟಿಎಂಸಿ ಸೇರಿದ ಸುಶ್ಮಿತಾ ದೇವ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕಿ ಸುಶ್ಮಿತಾ ದೇವ್ ಸೋಮವಾರ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ (ಟಿಎಂಸಿ) ಸೇರ್ಪಡೆಯಾದರು.



ಸುಶ್ಮಿತಾ ದೇವ್

ಟಿಎಂಸಿಯ ಹಿರಿಯ ನಾಯಕರಾದ ಅಭಿಷೇಕ್ ಬ್ಯಾನರ್ಜಿ ಮತ್ತು ಡೆರೆಕ್ ಒ ಬ್ರಿಯನ್ ಅವರ ಉಪಸ್ಥಿತಿಯಲ್ಲಿ ಕೋಲ್ಕತ್ತದಲ್ಲಿ ಅವರು ಟಿಎಂಸಿ ಸೇರಿದರು.

ಸುಶ್ಮಿತಾ ಅವರ ಸೇರ್ಪಡೆ ಕುರಿತು ಟ್ವಿಟರ್ ಮೂಲಕ ಘೋಷಣೆ ಮಾಡಿರುವ ಟಿಎಂಸಿ, ‘ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸುಶ್ಮಿತಾ ದೇವ್ ಅವರನ್ನು ತೃಣಮೂಲ ಕುಟುಂಬಕ್ಕೆ ಹಾರ್ದಿಕವಾಗಿ ಸ್ವಾಗತಿಸುತ್ತೇವೆ’ ಎಂದಿದೆ.

ಕಾಂಗ್ರೆಸ್‌ನ ರಾಷ್ಟ್ರ ಮಟ್ಟದ ವಕ್ತಾರೆ ಆಗಿದ್ದ ಸುಶ್ಮಿತಾ ಮಾಜಿ ಸಂಸದೆ ಕೂಡಾ ಹೌದು. ಅವರು ತಮ್ಮ ರಾಜೀನಾಮೆ ಪತ್ರವನ್ನು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ನೀಡಿದ್ದಾರೆ. ‘ಕಾಂಗ್ರೆಸ್ ಜೊತೆಗಿನ ಮೂರು ದಶಕಗಳ ನನ್ನ ಒಡನಾಟವನ್ನು ನಾನು ನೆನೆಯುತ್ತೇನೆ. ಸಾರ್ವಜನಿಕ ಜೀವನದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುತ್ತಿದ್ದೇನೆ. ನಿಮ್ಮ ಶುಭ ಹಾರೈಕೆ ನನಗೆ ಇರುತ್ತದೆ ಎಂದು ನಾನು ನಂಬಿದ್ದೇನೆ’ ಎಂದು ಅವರು ಪತ್ರದಲ್ಲಿ ಬರೆದಿದ್ದಾರೆ. ಆದರೆ ರಾಜೀನಾಮೆಗೆ ಕಾರಣವನ್ನು ಅವರು ನೀಡಿಲ್ಲ ಎನ್ನಲಾಗಿದೆ.

ಟಿಎಂಸಿ ಸೇರ್ಪಡೆ ಬಳಿಕ ವಿಡಿಯೊ ಮೂಲಕ ತಮ್ಮ ಹೇಳಿಕೆ ಪ್ರಕಟಿಸಿರುವ ಅವರು, ‘ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಟಿಎಂಸಿ ಭವಿಷ್ಯದ ಕುರಿತು ಅತ್ಯುತ್ತಮ ದೃಷ್ಟಿಕೋನ ಹೊಂದಿದ್ದಾರೆ. ನನ್ನಿಂದ ಟಿಎಂಸಿಗೆ ಸಹಾಯ ಆಗುತ್ತದೆ ಎಂಬ ವಿಶ್ವಾಸ ನನಗಿದೆ. ಅಭಿಷೇಕ್ ಬ್ಯಾನರ್ಜಿ ಅವರನ್ನು ಭೇಟಿಯಾದೆ. ಅವರ ಜೊತೆ ಉತ್ತಮ ಮಾತುಕತೆ ನಡೆಯಿತು. ಅವರಿಗೆ ಪಕ್ಷದ ಭವಿಷ್ಯದ ಕುರಿತು ಸ್ಪಷ್ಟತೆ ಇದೆ. ದೆಹಲಿಗೆ ಬಂದ ಬಳಿಕ ಈ ಕುರಿತು ಎಲ್ಲರ ಪ್ರಶ್ನೆಗಳಿಗೆ ಉತ್ತರಿಸುತ್ತೇನೆ’ ಎಂದಿದ್ದಾರೆ.

ದೆಹಲಿಯ 9 ವರ್ಷ ವಯಸ್ಸಿನ ಅತ್ಯಾಚಾರ ಸಂತ್ರಸ್ತೆಯ ಪೋಷಕರ ಜೊತೆ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಇದ್ದ ಫೋಟೊವನ್ನು ಟ್ವಿಟರ್‌ನಲ್ಲಿ ಸುಶ್ಮಿತಾ ಹಂಚಿಕೊಂಡಿದ್ದರು. ಅದಾದ ಬಳಿಕ ಅವರ ಟ್ವಿಟರ್ ಖಾತೆ ತಾತ್ಕಾಲಿಕವಾಗಿ ಸ್ಥಗಿತವಾಗಿತ್ತು.

## ‘ಕಾಂಗ್ರೆಸ್ ಕಣ್ಣುಮುಚ್ಚಿ ನಡೆಯುತ್ತಿದೆ’

ಸುಶ್ಮಿತಾ ರಾಜಿನಾಮೆ ಕುರಿತು ಕಾಂಗ್ರೆಸ್ ಹಿರಿಯ ನಾಯಕ ಕಪಿಲ್ ಸಿಬಲ್ ಬೇಸರ ವ್ಯಕ್ತಪಡಿಸಿದ್ದಾರೆ. ‘ಸುಶ್ಮಿತಾ ದೇವ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಯುವ ನಾಯಕರು ಪಕ್ಷವನ್ನು ತೊರೆದಾಗ ನಮ್ಮಂಥ ಹಿರಿಯರನ್ನು ದೂರಲಾಗುತ್ತದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ. ಪಕ್ಷ ಕಣ್ಣು ಮುಚ್ಚಿ ನಡೆಯುತ್ತಿದೆ. ತನಗೆ ಇದಾವುದೂ ಕಾಣುತ್ತಿಲ್ಲ ಎಂಬಂತೆ ಇದೆ ಎಂದಿದ್ದಾರೆ.

‘ವಿಪಕ್ಷಗಳನ್ನು ಒಟ್ಟು ಸೇರಿಸಲು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ತೆಗೆದುಕೊಳ್ಳುತ್ತಿರುವ ಶ್ರಮ ಕುರಿತು ನನಗೆ ಸಂತೋಷವಿದೆ. ಆದರೆ ನಮ್ಮ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಯತ್ನಗಳು ಮುಂದುವರಿಯಬೇಕು. ಕಾಂಗ್ರೆಸ್ ಪಕ್ಷವನ್ನು ಬಲಪಡಿಸಲು ನಾವೆಲ್ಲರೂ ಶ್ರಮವಹಿಸುತ್ತೇವೆ’ ಎಂದರು.

‘ನಾನು ಮಾರ್ಗಕ್ಕೆ ಅಡ್ಡಲಾಗಿ ನಿಂತಿದ್ದೇನೆ ಎಂದು ಸೋನಿಯಾ ಗಾಂಧಿ ಅವರಿಗೆ ಅನಿಸಿದರೆ ಅವರು ನನ್ನನ್ನು ಪಕ್ಷದಿಂದ ಕೈಬಿಡಲಿ. ಆದರೆ ಕಾಂಗ್ರೆಸ್ ಬಲಪಡಿಸಲುವಲ್ಲಿ ನನ್ನ ಪ್ರಯತ್ನವನ್ನು ನಿಲ್ಲಿಸುವುದಿಲ್ಲ. ವಿಪಕ್ಷಗಳ ಒಕ್ಕೂಟದಲ್ಲಿ ಕಾಂಗ್ರೆಸನ್ನು ಮುಂಚೂಣಿಯಲ್ಲಿ ನಿಲ್ಲಿಸುವುದು ನನ್ನ ಗುರಿ. ಕಾಂಗ್ರೆಸ್ ಪಕ್ಷವನ್ನು ಬಲಪಡಿಸದೇ ವಿಪಕ್ಷಗಳ ಒಗ್ಗಟ್ಟು ಸಾಧ್ಯವಿಲ್ಲ’ ಎಂದರು.

ಕಾಂಗ್ರೆಸ್ ಬಲಗೊಳ್ಳದಿದ್ದರೆ ಅಥವಾ ಪುನರುಜ್ಜೀವನ ಪಡೆಯದಿದ್ದರೆ ವಿಪಕ್ಷಗಳ ಒಕ್ಕೂಟ ಸಾಧ್ಯವಾಗುವುದಿಲ್ಲ. ವಿಪಕ್ಷಗಳ ಒಕ್ಕೂಟದಲ್ಲಿ ಕಾಂಗ್ರೆಸ್‌ಗೆ ಇರುವ ಪ್ರಾಮುಖ್ಯವನ್ನು ಪಕ್ಷ ಅರಿತುಕೊಳ್ಳುತ್ತದೆ ಎಂಬ ವಿಶ್ವಾಸವಿದೆ ಎಂದರು.

**ಸೋನಿಯಾ ಗಾಂಧಿ ಅವರು ಸುಶ್ಮಿತಾರನ್ನು ಯಾವಾಗಲೂ ಶ್ಲಾಘಿಸುತ್ತಿದ್ದರು. ರಾಜಕೀಯ ಕುರಿತು ನಿರ್ಧಾರ ತೆಗೆದುಕೊಳ್ಳುವಷ್ಟು ಸುಶ್ಮಿತಾ ಪ್ರಬುದ್ಧರಿದ್ದಾರೆ.**

**ರಣದೀಪ್ ಸುರ್ಜೇವಾಲಾ**
ಕಾಂಗ್ರೆಸ್ ಪ್ರಧಾನ ವಕ್ತಾರ

# ಅರ್ಧ ದಿನವಷ್ಟೇ ಭೌತಿಕ ತರಗತಿ

ಒಂದನೇ ಪುಟದಿಂದ...

- ವಿದ್ಯಾರ್ಥಿಗಳ ಸಂಖ್ಯೆ ಮತ್ತು ಶಿಕ್ಷಕರ ಸಂಖ್ಯೆ ಆಧರಿಸಿ ವೇಳಾ ಪಟ್ಟಿಯನ್ನು ಅಗತ್ಯಕ್ಕೆ ಅನುಗುಣವಾಗಿ ಪರಿಷ್ಕರಿಸಿ 9 ಮತ್ತು 10 ನೇ ತರಗತಿಗಳನ್ನು 15 ರಿಂದ 20 ಸಂಖ್ಯೆಯ ವಿದ್ಯಾರ್ಥಿಗಳ ತಂಡಗಳಾಗಿ ಮಾಡಿಕೊಂಡು ಭೌತಿಕ ತರಗತಿಗಳನ್ನು ನಡೆಸಬೇಕು
- ಊಟದ ವಿರಾಮದ ನಂತರ ಪ್ರೌಢ ಶಾಲೆಗಳ ಶಿಕ್ಷಕರು 8 ನೇ ತರಗತಿ ವಿದ್ಯಾರ್ಥಿಗಳಿಗೆ ಪರ್ಯಾಯ ವಿಧಾನದಲ್ಲಿ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಗಳನ್ನು ನಡೆಸಬೇಕು

## ಆರಂಭಕ್ಕೆ ಮುನ್ನ ಒಂದು ವಾರ ಸ್ವಚ್ಛತೆ

ಸುಮಾರು ಒಂದೂವರೆ ವರ್ಷಗಳಿಂದ ಶಾಲೆಗಳನ್ನು ತೆರೆಯದಿರುವ ಕಾರಣ ಇಡೀ ಶಾಲೆಯನ್ನು ಆರಂಭದ ಒಂದು ವಾರ ಪ್ರತಿದಿನ ಸಮಗ್ರವಾಗಿ ಸ್ವಚ್ಛಗೊಳಿಸಿ ಸೋಂಕು ಮುಕ್ತಗೊಳಿಸಬೇಕು ಎಂದು ಸರ್ಕಾರ ಆದೇಶಿಸಿದೆ.

- ಶಾಲೆಯ ಇಡೀ ಆವರಣ, ಶಾಲಾ ಕಾಂಪೌಂಡ್, ಕಟ್ಟಡದ ಮೇಲ್ಛಾವಣಿಯನ್ನು ಸೋಂಕು ನಿವಾರಣ ದ್ರಾವಣದಿಂದ ತೊಳೆದು ಸ್ವಚ್ಛಗೊಳಿಸಬೇಕು
- ತರಗತಿ ಕೋಣೆಗಳು, ಮುಖ್ಯಶಿಕ್ಷಕರು ಹಾಗೂ ಶಿಕ್ಷಕರ ಕೊಠಡಿ, ಪ್ರಯೋಗಾಲಯ, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್, ಕ್ರೀಡಾ ಕೊಠಡಿ, ಸಭಾಂಗಣ, ಪೀಠೋಪಕರಣಗಳು, ಅಕ್ಷರ ದಾಸೋಹ ಅಡುಗೆ ಮನೆ, ಧಾನ್ಯಗಳ ದಾಸ್ತಾನು ಕೋಣೆ, ಶೌಚಾಲಯಗಳನ್ನು ಎಸ್‌ಒಪಿಯಲ್ಲಿ ನಿಗದಿ ಮಾಡಿರುವ ರಾಸಾಯಿಕ ದ್ರಾವಣ ಬಳಸಿಯೇ ಸ್ವಚ್ಛಗೊಳಿಸಬೇಕು
- ವಿದ್ಯಾರ್ಥಿಗಳು ಶಾಲೆಗೆ ಬರುವ ಸಮಯದಿಂದ ಮನೆಗೆ ತೆರಳುವವರೆಗೆ ಪ್ರತಿ ಹಂತದಲ್ಲೂ ಅಂತರ ಕಾಯ್ದುಕೊಳ್ಳಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು.
- ವಿದ್ಯಾರ್ಥಿಗೆ ಕೆಮ್ಮು, ನೆಗಡಿ ಇತ್ಯಾದಿ ಲಕ್ಷಣಗಳಿದ್ದಲ್ಲಿ, ಐಸೋಲೇಷನ್ ಕೊಠಡಿಯಲ್ಲಿ ತಾತ್ಕಲಿಕವಾಗಿ ಇರಿಸಿ ಪಾಲಕರ ಮೂಲಕ ಮನೆಗೆ ಕಳಿಸಬೇಕು

## ಅಫ್ಗಾನಿಸ್ತಾನ: ಪ್ರಾತಿನಿಧಿಕ ಸರ್ಕಾರ ಸ್ಥಾಪನೆಗೆ ವಿಶ್ವಸಂಸ್ಥೆ ಕರೆ

ವಿಶ್ವಸಂಸ್ಥೆ (ಪಿಟಿಐ): ಅಫ್ಗಾನಿಸ್ತಾನದಲ್ಲಿ ಹೊಸ, ಒಗ್ಗಟ್ಟಿನ, ಮಹಿಳಾ ಪ್ರತಿನಿಧಿಗಳನ್ನೊಳಗೊಂಡ ಪ್ರಾತಿನಿಧಿಕ ಸರ್ಕಾರವನ್ನು ಮಾತುಕತೆ ಮೂಲಕ ಸ್ಥಾಪಿಸಬೇಕು ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸೋಮವಾರ ಕರೆ ನೀಡಿದೆ.


15 ರಾಷ್ಟ್ರಗಳ ಕೌನ್ಸಿಲ್ ಸದಸ್ಯರು ತುರ್ತು ಸಭೆ ನಡೆಸಿ, ಅಫ್ಗಾನಿಸ್ತಾನದ ಪರಿಸ್ಥಿತಿ ಕುರಿತು ಚರ್ಚೆ ನಡೆಸಿದರು. ತಾಲಿಬಾನ್ ಹಿಡಿತ ಸಾಧಿಸಿದ ನಂತರ ಅಫ್ಗಾನಿಸ್ತಾನದ ಅಧ್ಯಕ್ಷ ಅಶ್ರಫ್ ಘನಿ ದೇಶ ಬಿಟ್ಟು ಓಡಿಹೋಗಿರುವುದು, ವಿಮಾನ ನಿಲ್ದಾಣದಲ್ಲಿ ಅವ್ಯವಸ್ಥೆ, ಅನಿಶ್ಚಿತತೆ ಕುರಿತು ಚರ್ಚೆ ನಡೆಸಲಾಯಿತು.

ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಸಭೆಯನ್ನುದ್ದೇಶಿಸಿ ಮಾತನಾಡಿ, ‘ಅಫ್ಗಾನಿಸ್ತಾನದಲ್ಲಿ ಮಾನವ ಹಕ್ಕುಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ಸಮುದಾಯ ಒಗ್ಗೂಡಬೇಕು’ ಎಂದು ಅವರು ಹೇಳಿದರು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಆಗಸ್ಟ್ ತಿಂಗಳಿನಲ್ಲಿ ಭಾರತ ಅಧ್ಯಕ್ಷತೆ ವಹಿಸಿದೆ. ಹತ್ತು ದಿನಗಳ ಅವಧಿಯಲ್ಲಿ ಎರಡನೇ ಬಾರಿಗೆ ಸೋಮವಾರ ಸಭೆ ನಡೆಸಿ ಅಫ್ಗಾನಿಸ್ತಾನದ ಪರಿಸ್ಥಿತಿಯನ್ನು ಸಭೆಯಲ್ಲಿ ಚರ್ಚಿಸಲಾಯಿತು.

### ಒಂಬತ್ತನೇ ವಿಕೆಟ್‌ಗೆ ಅಜೇಯ 89 ರನ್‌ಗಳ ಜೊತೆಯಾಟ; ಶಮಿ ಅರ್ಧಶತಕದ ಸೊಬಗು

# ಭಾರತಕ್ಕೆ ಬೌಲರ್‌ಗಳ ಜಯದ ಕಾಣಿಕೆ



ಲಂಡನ್ (ಪಿಟಿಐ): ಸೋಲಿನತ್ತ ಸಾಗಿದ್ದ ತಂಡಕ್ಕೆ ಅಮೋಘ ಜೊತೆಯಾಟದ ಮೂಲಕ ಮರುಜೀವ ತುಂಬಿದ ಮೊಹಮ್ಮದ್ ಶಮಿ ಮತ್ತು ಜಸ್‌ಪ್ರೀತ್ ಬೂಮ್ರಾ ನಂತರ ಬೌಲಿಂಗ್‌ನಲ್ಲೂ ಭರ್ಜರಿ ದಾಳಿ ಮಾಡಿದರು. ವೇಗಿಗಳಾದ ಮೊಹಮ್ಮದ್ ಸಿರಾಜ್ ಮತ್ತು ಇಶಾಂತ್ ಶರ್ಮಾ ಕೂಡ ಮಿಂಚಿದರು. ಇದರ ಪರಿಣಾಮ ಇಂಗ್ಲೆಂಡ್ ಎದುರಿನ ಎರಡನೇ ಟೆಸ್ಟ್‌ನಲ್ಲಿ ಭಾರತ ತಂಡ 151 ರನ್‌ಗಳ ಅಮೋಘ ಗೆಲುವು ಸಾಧಿಸಿದೆ.

ಇಂಗ್ಲೆಂಡ್‌ಗೆ ಮೊದಲ ಇನಿಂಗ್ಸ್‌ನಲ್ಲಿ 27 ರನ್‌ಗಳ ಮುನ್ನಡೆ ಬಿಟ್ಟುಕೊಟ್ಟಿದ್ದ ಭಾರತ ನಾಲ್ಕನೇ ದಿನವಾದ ಭಾನುವಾರದ ಅಂತ್ಯಕ್ಕೆ 181 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಸೋಮವಾರ ನಾಲ್ಕನೇ ಓವರ್‌ನಲ್ಲಿ ರಿಷಭ್ ಪಂತ್ ವಿಕೆಟ್ ಕಳೆದುಕೊಂಡಾಗ ಸೋಲಿನ ಸುಳಿಯಲ್ಲಿ ಸಿಲುಕಿತ್ತು.

ಆದರೆ ನಂತರ ಪರಿಸ್ಥಿತಿ ಸಂಪೂರ್ಣ ಬದಲಾಯಿತು. ಮೊಹಮ್ಮದ್ ಶಮಿ ಕ್ರೀಸ್‌ಗೆ ಬಂದು ನಿಧಾನವಾಗಿ ರನ್ ಗಳಿಸಲು ತೊಡಗಿದರು. ಇಶಾಂತ್ ಶರ್ಮಾ ಮರಳಿದ ನಂತರ ಜಸ್‌ಪ್ರೀತ್ ಅವರು ಶಮಿ ಜೊತೆಗೂಡಿದರು. ಲಯ ಕಂಡುಕೊಂಡ ನಂತರ ಇಬ್ಬರೂ ಎದುರಾಳಿ ಬೌಲರ್‌ಗಳನ್ನು ನಿರಾತಂಕವಾಗಿ ಎದುರಿಸತೊಡಗಿದರು. ಇಬ್ಬರ ಜೊತೆಯಾಟದಿಂದ 50 ರನ್‌ಗಳು ಸೇರಿದ ಬೆನ್ನಲ್ಲೇ ಶಮಿ ಅರ್ಧಶತಕವನ್ನೂ ಪೂರೈಸಿದರು. ಮೋಯಿನ್ ಅಲಿ ಅವರ ಸತತ ಎರಡು ಎಸೆತಗಳಲ್ಲಿ ಕ್ರಮವಾಗಿ ಬೌಂಡರಿ ಮತ್ತು ಸಿಕ್ಸರ್ ಸಿಡಿಸುವ ಮೂಲಕ ಅವರು ಚೊಚ್ಚಲ ಅರ್ಧಶತಕದ ಸಂಭ್ರಮದಲ್ಲಿ ತೇಲಿದರು. ಭೋಜನ ವಿರಾಮದ ವರೆಗೂ ಇವರಿಬ್ಬರು ಆತಿಥೇಯ ಬೌಲರ್‌ಗಳನ್ನು ಕಾಡಿದರು.

ವಿರಾಮದ ನಂತರ, ತಂಡದ ಮೊತ್ತ 298 ರನ್ ಆಗಿದ್ದಾಗ ಇನಿಂಗ್ಸ್ ಡಿಕ್ಲೇರ್ ಮಾಡಲು ವಿರಾಟ್ ಕೊಹ್ಲಿ ನಿರ್ಧರಿಸಿದರು. ಶಮಿ ಮತ್ತು ಬೂಮ್ರಾ ಅಜೇಯರಾಗಿ ನಗೆಸೂಸುತ್ತ ಡ್ರೆಸಿಂಗ್ ಕೊಠಡಿ ಕಡೆಗೆ ಹೆಜ್ಜೆ ಹಾಕಿದರು.

**ವೇಗದ ಬೌಲಿಂಗ್ ಪೆಟ್ಟು:** 272 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್‌ಗೆ ಭಾರತದ ವೇಗಿಗಳು ಆರಂಭದಲ್ಲೇ ಪೆಟ್ಟು ನೀಡಿದರು. ಒಂದು ರನ್ ಗಳಿಸಿದ್ದಾಗ ಆರಂಭಿಕ ಬ್ಯಾಟ್ಸ್‌ಮನ್‌ಗಳಾದ ರೋರಿ ಬರ್ನ್ಸ್ ಮತ್ತು ಡಾಮ್ ಸಿಬ್ಲಿ ಅವರನ್ನು ಕ್ರಮವಾಗಿ ಬೂಮ್ರಾ ಮತ್ತು ಶಮಿ ವಾಪಸ್ ಕಳುಹಿಸಿದರು. ನಂತರ ಇಶಾಂತ್ ಶರ್ಮಾ ಪರಾಕ್ರಮ ಮೆರೆದರು. ಚಹಾ ವಿರಾಮಕ್ಕೆ ಮೊದಲು ಹಬೀಬ್ ಹಸೀಬ್ ಮತ್ತು ಜಾನಿ ಬೇಸ್ಟೊ ಅವರು ಶರ್ಮಾಗೆ ಬಲಿಯಾದರು. ಜೋ ರೂಟ್ ಅವರು ವಿರಾಮದ ನಂತರ ಮರಳಿದರು. 90 ರನ್ ಗಳಿಸುವಷ್ಟರಲ್ಲಿ ಏಳು ವಿಕೆಟ್ ಕಳೆದುಕೊಂಡ ತಂಡಕ್ಕೆ ಜೋಸ್ ಬಟ್ಲರ್ ಮತ್ತು ಒಲಿ ರಾಬಿನ್ಸನ್ 30 ರನ್‌ಗಳ ಜೊತೆಯಾಟದ ಮೂಲಕ ಭರವಸೆ ತುಂಬಿದರು. ಬಟ್ಲರ್ ವಿಕೆಟ್ ಪಡೆಯುವ ಮೂಲಕ ಸಿರಾಜ್ ಮಹತ್ವದ ತಿರುವು ನೀಡಿದರು. ಜೇಮ್ಸ್ ಆ್ಯಂಡರ್ಸನ್ ಅವರನ್ನೂ ಸಿರಾಜ್ ಔಟ್ ಮಾಡುವುದರೊಂದಿಗೆ ತಂಡ ವಿಜಯೋತ್ಸವದಲ್ಲಿ ಮಿಂದಿತು.

ಮೊದಲ ಇನಿಂಗ್ಸ್‌ನಲ್ಲಿ ಶತಕ ಸಿಡಿಸಿದ ಕೆ.ಎಲ್. ರಾಹುಲ್ ಅವರಿಗೆ ಪಂದ್ಯಶ್ರೇಷ್ಠ ಗೌರವ ಒಲಿಯಿತು.

ಲಾರ್ಡ್ಸ್‌ನಲ್ಲಿ ಭಾರತ ತಂಡಕ್ಕೆ ಇದು ಮೂರನೇ ಗೆಲುವು. 1986 ಹಾಗೂ 2014ರ ಸರಣಿಗಳಲ್ಲಿ ತಂಡಕ್ಕೆ ಗೆಲುವು ಒಲಿದಿತ್ತು.

**ಪಂದ್ಯದಲ್ಲಿ ಭಾರತದ ವೇಗಿಗಳ ಸಾಧನೆ**

| ಬೌಲರ್ | ವಿಕೆಟ್ | ರನ್ |
|---|---|---|
| ಮೊಹಮ್ಮದ್ ಶಮಿ | 3 | 56 |
| ಮೊಹಮ್ಮದ್ ಸಿರಾಜ್ | 8 | |
| ಜಸ್‌ಪ್ರೀತ್ ಬೂಮ್ರಾ | 3 | 34 |
| ಇಶಾಂತ್ ಶರ್ಮಾ | 5 | 24 |

ಅರ್ಧಶತಕ ಗಳಿಸಿದ ಮೊಹಮ್ಮದ್ ಶಮಿ ಸಂಭ್ರಮ – ಪಿಟಿಐ ಚಿತ್ರ

## ಸ್ಕೋರ್ ಕಾರ್ಡ್

**ಭಾರತ (ಮೊದಲ ಇನಿಂಗ್ಸ್) 364**
**ಇಂಗ್ಲೆಂಡ್ (ಮೊದಲ ಇನಿಂಗ್ಸ್) 391**
**ಭಾರತ (ಎರಡನೇ ಇನಿಂಗ್ಸ್) 8ಕ್ಕೆ 298 ಡಿಕ್ಲೇರ್ಡ್ (109.3 ಓವರ್)**
(ಭಾನುವಾರ 82 ಓವರ್‌ಗಳಲ್ಲಿ 6ಕ್ಕೆ 181)
ಪಂತ್ ಸಿ ಬಟ್ಲರ್ ಬಿ ರಾಬಿನ್ಸನ್ 22 (46 ಎ, 4x1), ಇಶಾಂತ್ ಎಲ್‌ಬಿಡಬ್ಲ್ಯು ರಾಬಿನ್ಸನ್ 16 (24 ಎ, 4x2), ಶಮಿ ಔಟಾಗದೆ 56 (70 ಎ, 4x6, 6x1), ಬೂಮ್ರಾ ಔಟಾಗದೆ 34 (64 ಎ, 4x3)
**ಇತರೆ:** (ಬೈ 2, ಲೆಗ್ ಬೈ 12, ನೋಬಾಲ್ 1) 15
**ವಿಕೆಟ್ ಪತನ:** 7-194 (ರಿಷಭ್ ಪಂತ್, 85.3), 8-209 (ಇಶಾಂತ್ ಶರ್ಮಾ, 89.3)
**ಬೌಲಿಂಗ್:** ಜೇಮ್ಸ್ ಆ್ಯಂಡರ್ಸನ್ 25.3–6–53–0, ಒಲಿ ರಾಬಿನ್ಸನ್ 17–6–45–2, ಮಾರ್ಕ್ ವುಡ್ 18–4–51–3, ಸ್ಯಾಮ್ ಕರನ್ 18–3–42–1, ಮೋಯಿನ್ ಅಲಿ 26–1–84–2, ಜೋ ರೂಟ್ 5–0–9–0
**ಇಂಗ್ಲೆಂಡ್ (ಎರಡನೇ ಇನಿಂಗ್ಸ್) 120 (51.5 ಓವರ್)**
ಬರ್ನ್ಸ್ ಸಿ ಸಿರಾಜ್ ಬಿ ಬೂಮ್ರಾ 0 (4 ಎ), ಸಿಬ್ಲಿ ಸಿ ಪಂತ್ ಬಿ ಶಮಿ 0 (4 ಎ), ಹಮೀದ್ ಎಲ್‌ಬಿಡಬ್ಲ್ಯು ಶರ್ಮಾ 9 (45 ಎ), ರೂಟ್ ಸಿ ಕೊಹ್ಲಿ ಬಿ ಬೂಮ್ರಾ 33 (60 ಎ, 4x5) ಬೇಸ್ಟೊ ಎಲ್‌ಬಿಡಬ್ಲ್ಯು ಶರ್ಮಾ 2 (24 ಎ), ಬಟ್ಲರ್ ಸಿ ಪಂತ್ ಬಿ ಸಿರಾಜ್ 25 (96 ಎ, 4x3), ಅಲಿ ಸಿ ಕೊಹ್ಲಿ ಬಿ ಸಿರಾಜ್ 13 (42 ಎ, 4x2), ಕರನ್ ಸಿ ಪಂತ್ ಬಿ ಸಿರಾಜ್ 0 (1 ಎ), ರಾಬಿನ್ಸನ್ ಎಲ್‌ಬಿಡಬ್ಲ್ಯು ಬೂಮ್ರಾ 9 (25 ಎ), ವುಡ್ ಔಟಾಗದೆ 0 (1ಎ), ಆ್ಯಂಡರ್ಸನ್ ಬಿ ಸಿರಾಜ್ 0 (3ಎ)
**ಇತರೆ:** (ಬೈ 17, ಲೆಗ್ ಬೈ 7, ನೋಬಾಲ್ 4, ವೈಡ್ 1) 29
**ವಿಕೆಟ್ ಪತನ:** 1-1 (ರೋರಿ ಬರ್ನ್ಸ್, 0.3), 2-1 (ಡಾಮ್ ಸಿಬ್ಲಿ, 1.4), 3-44 (ಹಸೀಬ್ ಹಮೀದ್, 15.3), 4-67 (ಜಾನಿ ಬೇಸ್ಟೊ, 21.6), 5-67 (ಜೋ ರೂಟ್, 22.3), 6-90 (ಮೋಯಿನ್ ಅಲಿ, 38.1), 7-90 (ಸ್ಯಾಮ್ ಕರನ್, 38.2), 8-120 (ಒಲಿ ರಾಬಿನ್ಸನ್, 50.5), 9-120 (ಜೋಸ್ ಬಟ್ಲರ್, 51.2), 10-120 (ಜೇಮ್ಸ್ ಆ್ಯಂಡರ್ಸನ್, 51.5)
**ಬೌಲಿಂಗ್:** ಜಸ್‌ಪ್ರೀತ್ ಬೂಮ್ರಾ 15–3–33–3, ಮೊಹಮ್ಮದ್ ಶಮಿ 10–5–13–1, ರವೀಂದ್ರ ಜಡೇಜ 6–3–5–0, ಮೊಹಮ್ಮದ್ ಸಿರಾಜ್ 10.5–3–32–4, ಇಶಾಂತ್ ಶರ್ಮಾ 10–3–13–2

**ಫಲಿತಾಂಶ: ಭಾರತಕ್ಕೆ 151 ರನ್‌ಗಳ ಜಯ ಸರಣಿಯಲ್ಲಿ 1–0 ಮುನ್ನಡೆ.**

## ಪ್ಯಾರಾಲಿಂಪಿಕ್ಸ್‌ಗೆ ಅಫ್ಗನ್ ಅಥ್ಲೀಟ್‌ಗಳಿಲ್ಲ

ಟೋಕಿಯೊ (ಎಎಫ್‌ಪಿ/ ರಾಯಿಟರ್ಸ್): ದೇಶದಲ್ಲಿ ಉಂಟಾಗಿರುವ ವಿಷಮ ಪರಿಸ್ಥಿತಿಯಿಂದಾಗಿ ಅಫ್ಗಾನಿಸ್ತಾನದ ಅಥ್ಲೀಟ್‌ಗಳು ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳದೇ ಇರಲು ನಿರ್ಧರಿಸಿದ್ದಾರೆ ಎಂದು ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ ಸೋಮವಾರ ತಿಳಿಸಿದೆ.

ಅಫ್ಗಾನಿಸ್ತಾನದಿಂದ ಟೇಕ್ವಾಂಡೊ ಪಟುಗಳಾದ ಜಕಿಯಾ ಖುದಾದದಿ ಮತ್ತು ಹೊಸೇನ್ ರಸೌಲಿ ಅವರು ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಬೇಕಾಗಿತ್ತು. ಈ ಪೈಕಿ 23 ವರ್ಷದ ಜಕಿಯಾ ದೇಶವನ್ನು ಪ್ರತಿನಿಧಿಸುವ ಮೊದಲ ಮಹಿಳೆ ಎನಿಸಿಕೊಂಡಿದ್ದರು.

ಆದರೆ ದೇಶದ ಆಡಳಿತವನ್ನು ತಾಲಿಬಾನ್ ತನ್ನ ವಶಕ್ಕೆ ತೆಗೆದುಕೊಂಡಿರುವುದರಿಂದ ಇವರಿಬ್ಬರು ಜಪಾನ್‌ಗೆ ಪ್ರಯಾಣ ಬೆಳೆಸಲು ಸಾಧ್ಯವಾಗುತ್ತಿಲ್ಲ ಎಂದು ಪ್ಯಾರಾಲಿಂಪಿಕ್ ಸಮಿತಿಯ ವಕ್ತಾರ ಕ್ರೇಗ್ ಸ್ಪೆನ್ಸ್ ತಿಳಿಸಿದ್ದಾರೆ.

ವ್ಹೀಲ್ ಚೇರ್, ಕೃತಕ ಅಂಗ ದುರಸ್ತಿ ಕ್ರೀಡಾಪಟುಗಳು ಧರಿಸುವ ಕೃತಕ ಅಂಗ, ಬಳಸುವ ವ್ಹೀಲ್ ಚೇರ್ ಹಾಗೂ ಇತರ ಉಪಕರಣಗಳ ದುರಸ್ತಿಗೆ ಆಯೋಜಕರು ಕ್ರೀಡಾಗ್ರಾಮದಲ್ಲಿ ಪ್ರತ್ಯೇಕ ಕೇಂದ್ರವನ್ನು ತೆರೆದಿದ್ದಾರೆ.

**ಪ್ರೇಕ್ಷಕರಿಗೆ ಪ್ರವೇಶವಿಲ್ಲ:** ಒಲಿಂಪಿಕ್ಸ್‌ನಂತೆ ಪ್ಯಾರಾಲಿಂಪಿಕ್ಸ್‌ಗೂ ಪ್ರೇಕ್ಷಕರನ್ನು ಬಿಡದೇ ಇರಲು ನಿರ್ಧರಿಸಲಾಗಿದೆ ಎಂದು ಟೋಕಿಯೊ ಮೇಯರ್ ತಿಳಿಸಿದ್ದಾರೆ. ಇದೇ 24ರಂದು ಪ್ಯಾರಾಲಿಂಪಿಕ್ಸ್ ಆರಂಭವಾಗಲಿದೆ. ಕೆಲವು ದೇಶದ ಪ್ರತಿನಿಧಿಗಳು ಈಗಾಗಲೇ ಜಪಾನ್ ತಲುಪಿದ್ದು ಅಭ್ಯಾಸ ಆರಂಭಿಸಿದ್ದಾರೆ. ಈ ನಡುವೆ ಎಲ್ಲ ಕ್ರಮಗಳ ನಡುವೆಯೂ ಕೊರೊನಾ ಪ್ರಕರಣಗಳು ಜಪಾನ್‌ನಲ್ಲಿ ಏರುಗತಿಯಲ್ಲೇ ಸಾಗುತ್ತಿವೆ. ಹೀಗಾಗಿ ಪ್ರೇಕ್ಷಕರಿಲ್ಲದೆ ಸ್ಪರ್ಧೆಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ.

### ಸುದ್ದಿ 2 ನಿಮಿಷ

## ವಿಶ್ವ ಜೂನಿಯರ್ ಕುಸ್ತಿ ಸೆಮಿಫೈನಲ್‌ಗೆ ಗೌರವ್



ಯೂಫಾ (ಪಿಟಿಐ): ಅಮೋಘ ಸಾಮರ್ಥ್ಯ ತೋರಿದ ಭಾರತದ ಗೌರವ್ ಬಲಿಯಾನ್ ಹಾಗೂ ದೀಪಕ್ ಅವರು ವಿಶ್ವ ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

79 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಗೌರವ್ ಎದುರಾಳಿಗಳನ್ನು ಸುಲಭವಾಗಿ ಚಿತ್ ಮಾಡಿ ಮುನ್ನಡೆದರು. ಮೊದಲ ಸುತ್ತಿನ ಬೌಟ್‌ನಲ್ಲಿ ತಜಿಕಿಸ್ತಾನದ ಅಬೂಬಕರ್ ಶುಕುರೊವ್ ಅವರನ್ನು ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಮಣಿಸಿದ ಅವರು, ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 5–2ರಿಂದ ರಷ್ಯಾದ ಅಲಿಕ್ ಬಡ್ತೇಯ್ ಎದುರು ಜಯ ಸಾಧಿಸಿದರು.

ನಾಲ್ಕರ ಘಟ್ಟದ ಬೌಟ್‌ನಲ್ಲಿ ಗೌರವ್, ಇರಾನ್‌ನ ಮೊಹಮ್ಮದ್ ಅಸ್ಗರ್ ನೊಕಿದಿಲಾರಿಮಿ ಎದುರು ಸೆಣಸುವರು. ಈ ವರ್ಷ ಜೂನ್‌ನಲ್ಲಿ ನಡೆದ ಯಾಸರ್ ದೋಗು ಟೂರ್ನಿಯಲ್ಲಿ ಅಸ್ಗರ್ ಅವರು ಸೀನಿಯರ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದರು.

ದೀಪಕ್ (97 ಕೆಜಿ ವಿಭಾಗ) ಅವರು 5–1ರಿಂದ ಬೆಲಾರಸ್‌ನ ಅಲಿಯಾಕ್ಸೆಯಿ ಪರ್ಕೊಮೆಂಕಾ ಎದುರು ಗೆದ್ದು ತಮ್ಮ ಅಭಿಯಾನ ಆರಂಭಿಸಿದರು. ಎಂಟರಘಟ್ಟದ ಹಣಾಹಣಿಯಲ್ಲಿ 9–4ರಿಂದ ಜಾರ್ಜಿಯಾದ ಲೂಕಾ ಕುಬ್ವಾ ಎದುರು ಜಯಿಸಿದರು.

ಮುಂದಿನ ಸುತ್ತಿನಲ್ಲಿ ದೀಪಕ್ ಅವರಿಗೆ ಅಮೆರಿಕದ ಬ್ಯಾಕ್ಸಟನ್ ಜೇಮ್ಸ್ ಅಮೋಸ್ ಸವಾಲು ಎದುರಾಗಿದೆ.

57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಶುಭಮನ್ ಕ್ವಾರ್ಟರ್‌ಫೈನಲ್‌ನಲ್ಲಿ ಮುಗ್ಗರಿಸಿದರು.

## ಕತ್ತು ನೋವು: ಆಯುರ್ವೇದ ಚಿಕಿತ್ಸೆ ಪಡೆಯಲಿರುವ ಸಜನ್ ಪ್ರಕಾಶ್

ನವದೆಹಲಿ (ಪಿಟಿಐ): ಭಾರತದ ಈಜುಪಟು ಸಜನ್ ಪ್ರಕಾಶ್ ಅವರು ತಮಗೆ ಬಾಧಿಸುತ್ತಿರುವ ಕತ್ತು ನೋವಿಗೆ ಎರಡು ವಾರಗಳ ಕಾಲ ಕೇರಳದಲ್ಲಿ ಆಯುರ್ವೇದಿಕ್ ಚಿಕಿತ್ಸೆ ಪಡೆಯಲಿದ್ದಾರೆ.

ಒಲಿಂಪಿಕ್ಸ್‌ಗೆ ‘ಎ’ ದರ್ಜೆಯ ಅರ್ಹತೆ ಗಳಿಸಿದ್ದ ಭಾರತದ ಮೊದಲ ಈಜುಪಟು ಎನಿಸಿಕೊಂಡಿರುವ ಸಜನ್ ಅವರಿಗೆ 2019ರಲ್ಲಿ ಕುತ್ತಿಗೆ ನೋವು ಬಾಧಿಸಿತ್ತು. ಸ್ಪರ್ಧೆಯೊಂದರಲ್ಲಿ ಪಾಲ್ಗೊಂಡಿದ್ದ ವೇಳೆ ಅವರ ದೇಹದ ಎಡಭಾಗದಲ್ಲೂ ನೋವು ಕಾಣಿಸಿಕೊಂಡಿತ್ತು.

‘ನಾನು ಎರಡು ವಾರಗಳ ಕಾಲ ಆಯುರ್ವೇದಿಕ್ ಚಿಕಿತ್ಸೆ ಪಡೆಯಲಿದ್ದೇನೆ. ಮಸಾಜ್ ಮತ್ತಿತರ ಹಂತಗಳನ್ನು ಈ ಚಿಕಿತ್ಸೆ ಹೊಂದಿದೆ. ಸ್ಪರ್ಧೆಗಳಿಗೆ ಶರೀರವನ್ನು ಮತ್ತೊಮ್ಮೆ ಸಜ್ಜುಗೊಳಿಸಿದಂತೆ ಈ ಚಿಕಿತ್ಸೆ ಇರಲಿದೆ’ ಎಂದು ಸಜನ್ ಹೇಳಿದ್ದಾರೆ.

## ‘ಪ್ಯಾರಾಲಿಂಪಿಕ್; ಚಿನ್ನ ಗೆದ್ದರೆ ₹ 5 ಕೋಟಿ’

ಪ್ರಜಾವಾಣಿ ವಾರ್ತೆ



ಕ್ರೀಡಾ ಸಚಿವ ನಾರಾಯಣಗೌಡ ಅವರು ಶಿಖರದಿಂದ ಸಾಗರದವರೆಗೆ ಸಾಹಸ ಯಾನದ ತಂಡಕ್ಕೆ ಹಸಿರು ನಿಶಾನೆ ತೋರಿದರು. ವಿಧಾನಪರಿಷತ್ ಸದಸ್ಯ ಗೋವಿಂದರಾಜು ಮತ್ತು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

ಬೆಂಗಳೂರು: ಟೋಕಿಯೊದಲ್ಲಿ ನಡೆಯುವ ಪ್ಯಾರಾಲಿಂಪಿಕ್‌ನಲ್ಲಿ ಭಾಗವಹಿಸಲಿರುವ ಶಕೀನ್ ಖಾತುನ್ ಮತ್ತು ನಿರಂಜನ್ ಮುಕುಂದ್ ಅವರಿಗೆ ರಾಜ್ಯ ಸರ್ಕಾರ ಪ್ರೋತ್ಸಾಹ ಧನವಾಗಿ ತಲಾ ₹10 ಲಕ್ಷ ನೀಡಿದೆ.


ಶಕೀನ್ ಅವರು ಪವರ್ ಲಿಫ್ಟಿಂಗ್ ಮತ್ತು ನಿರಂಜನ್ ಈಜಿನಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ವಿಧಾನಸೌಧದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಅವರು ಕ್ರೀಡಾಪಟುಗಳನ್ನು ಗೌರವಿಸಿ ಬೀಳ್ಕೊಟ್ಟರು.

ಪ್ಯಾರಾಲಿಂಪಿಕ್‌ನಲ್ಲಿ ಚಿನ್ನ ಗೆದ್ದರೆ ₹ 5 ಕೋಟಿ, ಬೆಳ್ಳಿ ಗೆದ್ದರೆ ₹3 ಕೋಟಿ ಮತ್ತು ಕಂಚಿನ ಪದಕ ಗೆದ್ದರೆ ₹2 ಕೋಟಿ ಬಹುಮಾನ ನೀಡಲಾಗುವುದು ಎಂದು ಸಚಿವರು ಪ್ರಕಟಿಸಿದರು.

‘ಶಿಖರದಿಂದ ಸಾಗರ’ ಸಾಹಸಯಾತ್ರೆಗೆ ಸಚಿವರು ಹಸಿರುನಿಶಾನೆ ತೋರಿಸಿದರು. ಭಾರತ ಪರ್ವತಾರೋಹಣ ಸಂಸ್ಥೆಯ ದಕ್ಷಿಣ ವಲಯ ಮತ್ತು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಸಹಯೋಗದೊಂದಿಗೆ ಈ ಯಾನ ನಡೆಯಲಿದೆ.

ವಿಧಾನಪರಿಷತ್ ಸದಸ್ಯ ಕೆ. ಗೋವಿಂದರಾಜು ಮತ್ತು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಇದ್ದರು.

## ವೆಸ್ಟ್ ಇಂಡೀಸ್‌ಗೆ ರೋಚಕ ಗೆಲುವು



ಕೆಮರ್ ರೋಚ್

ಕಿಂಗ್‌ಸ್ಟನ್, ಜಮೈಕಾ (ಎಪಿ): ಸೋಲಿನತ್ತ ಸಾಗುತ್ತಿದ್ದ ವೆಸ್ಟ್ ಇಂಡೀಸ್ ತಂಡಕ್ಕೆ ಬೌಲರ್ ಕೆಮರ್ ರೋಚ್ ಮತ್ತು ಯುವ ಆಟಗಾರ ಜೇಡನ್ ಸೀಲ್ಸ್ ಕೊನೆಯ ವಿಕೆಟ್‌ಗೆ 17 ರನ್ ಜೊತೆಯಾಟವಾಡಿ ಒಂದು ವಿಕೆಟ್ ಗೆಲುವು ತಂದು ಕೊಟ್ಟರು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಪಾಕಿಸ್ತಾನ: 217; ವೆಸ್ಟ್ ಇಂಡೀಸ್: 253; ಎರಡನೇ ಇನಿಂಗ್ಸ್: ಪಾಕಿಸ್ತಾನ: 203; ವೆಸ್ಟ್ ಇಂಡೀಸ್: 56.5 ಓವರ್‌ಗಳಲ್ಲಿ 9ಕ್ಕೆ 168 (ರಾಸ್ಟನ್ ಚೇಸ್ 22, ಜೆರ್ಮೈನ್ ಬ್ಲ್ಯಾಕ್‌ವುಡ್ 55, ಜೋಶುವಾ ಸಿಲ್ವಾ 13, ಕೆಮರ್ ರೋಚ್ ಔಟಾಗದೆ 30; ಶಹೀನ್ ಶಾ ಅಫ್ರಿದಿ 50ಕ್ಕೆ4, ಹಸನ್ ಅಲಿ 37ಕ್ಕೆ3, ಫಾಹೀನ್ ಅಶ್ರಫ್ 29ಕ್ಕೆ2).



ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಕ್ರೀಡಾಪಟುಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಸೋಮವಾರ ಏರ್ಪಡಿಸಿದ್ದ ಚಹಾ ಕೂಟದಲ್ಲಿ ನೀರಜ್ ಚೋಪ್ರಾ ಅವರು ಜಾವೆಲಿನ್ ಬಗ್ಗೆ ಮೋದಿ ಅವರಿಗೆ ಮಾಹಿತಿ ನೀಡಿದರು –ಪಿಟಿಐ ಚಿತ್ರ

## ಬ್ರಿಟಿಷ್ ಓಪನ್: ಅದಿತಿಗೆ ಅರ್ಹತೆ

ಕಾರ್ನೌಸ್ಟಿ (ಪಿಟಿಐ): ಭಾರತದ ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್ ಅವರು ಎಐಜಿ ಮಹಿಳಾ ಓಪನ್ ಟೂರ್ನಿಗೆ ಪ್ರವೇಶ ಗಿಟ್ಟಿಸಿದ್ದಾರೆ. ಇಲ್ಲಿ ನಡೆದ ಪಾನ್‌ಮೂರ್ ಓಪನ್‌ನಲ್ಲಿ ಸೋಮವಾರ ಎರಡನೇ ಸ್ಥಾನ ಗಳಿಸುವ ಮೂಲಕ ಅವರು ಈ ಅರ್ಹತೆ ಗಳಿಸಿದರು.

ಬ್ರಿಟಿಷ್ ಓಪನ್ ಟೂರ್ನಿಯು ಆಗಸ್ಟ್ 19ರಿಂದ 22ರವರೆಗೆ ನಡೆಯಲಿದೆ.

## ಬಾರ್ಸಿಲೋನಾಗೆ ಜಯ

ಮ್ಯಾಡ್ರಿಡ್ (ಎಪಿ): ತಂಡ ತೊರೆದು ಪ್ಯಾರಿಸ್ ಸೇಂಟ್ ಜರ್ಮೈನ್ ಸೇರಿದರೂ ಲಯೊನೆಲ್ ಮೆಸ್ಸಿ ಅವರನ್ನು ಅಭಿಮಾನಿಗಳು ನೆನೆಸಿಕೊಂಡರು. ಪಂದ್ಯದ 10ನೇ ನಿಮಿಷದಿಂದ ಅವರ ಹೆಸರನ್ನು ಹೇಳಿ ಕುಣಿದರು. ಇದರ ನಡುವೆ ರಿಯಲ್ ಸೊಡೀಡಡ್ ತಂಡವನ್ನು ಬಾರ್ಸಿಲೋನಾ ಮಣಿಸಿತು.

17 ವರ್ಷ ಜೊತೆ ಇದ್ದ ಮೆಸ್ಸಿ ತಂಡವನ್ನು ತೊರೆದ ನಂತರ ನಡೆದ ಬಾರ್ಸಿಲೋನಾ ತಂಡ ಭಾನುವಾರ ಮೊದಲ ಬಾರಿ ಕಣಕ್ಕೆ ಇಳಿದಿತ್ತು. ಸ್ಪ್ಯಾನಿಷ್ ಲೀಗ್‌ನ ಪಂದ್ಯದಲ್ಲಿ ತಂಡ ರಿಯಲ್ ಸೊಸೀಡಡ್ ವಿರುದ್ಧ 4–2ರ ಗೆಲುವು ದಾಖಲಿಸಿತು.

ಕ್ಯಾಂಪ್ ನೌ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ 20 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಸೇರಿದ್ದರು.

ಪಂದ್ಯದ 19ನೇ ನಿಮಿಷದಲ್ಲಿ ಪೀಕಿ ಹೆಡರ್ ಮೂಲಕ ಗಳಿಸಿದ ಗೋಲಿನೊಂದಿಗೆ ಬಾರ್ಸಿಲೋನಾ ಮುನ್ನಡೆ ಸಾಧಿಸಿತು. 59ನೇ ನಿಮಿಷದಲ್ಲಿ ಮಾರ್ಟಿನ್ ಬ್ರಾಥ್‌ವೇಟ್ 49 ಮತ್ತು 59ನೇ ನಿಮಿಷಗಳಲ್ಲಿ ಗೋಲು ತಂದುಕೊಟ್ಟರು. ಇಂಜುರಿ ಅವಧಿಯಲ್ಲಿ ಸರ್ಜಿ ರಾಬರ್ಟೊ ಗಳಿಸಿದ ಗೋಲಿಗೂ ಮಾರ್ಟಿನ್ ನೆರವಾದರು.

82ನೇ ನಿಮಿಷದಲ್ಲಿ ಫ್ರೀಕಿಕ್‌ನಲ್ಲಿ ಜೂಲನ್ ಲೊಬಿಟೆ ಸೊಸೀಡಡ್ ತಂಡಕ್ಕೆ ಮೊದಲ ಗೋಲು ಗಳಿಸಿಕೊಟ್ಟರೆ, 3 ನಿಮಿಷಗಳ ನಂತರ ಒಯರ್‌ಜಬಲ್ ಮತ್ತೊಂದು ಗೋಲು ಗಳಿಸಿದರು.

## ಜುಲೈನಲ್ಲಿ ತಾಳೆ ಎಣ್ಣೆ ಆಮದು ಇಳಿಕೆ

ನವದೆಹಲಿ (ಪಿಟಿಐ): ತಾಳೆ ಎಣ್ಣೆ ಆಮದು ಪ್ರಮಾಣವು ಕಳೆದ ವರ್ಷದ ಜುಲೈಗೆ ಹೋಲಿಸಿದರೆ ಈ ವರ್ಷದ ಜುಲೈನಲ್ಲಿ ಶೇಕಡ 43.55ರಷ್ಟು ಕಡಿಮೆ ಆಗಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ಸೋಮವಾರ ತಿಳಿಸಿದೆ.

ಈ ವರ್ಷದ ಜುಲೈನಲ್ಲಿ 4.65 ಲಕ್ಷ ಟನ್ ತಾಳೆ ಎಣ್ಣೆ ಆಮದಾಗಿದೆ. ಕಳೆದ ವರ್ಷದ ಜುಲೈನಲ್ಲಿ 8.24 ಲಕ್ಷ ಟನ್ ಆಮದಾಗಿತ್ತು.

**ಮುಂಬೈ ಧಾರಣೆ**

**ಶೇಂಗಾ**

16-8-2021

| | |
|---|---|
| ಜಾವಾ 70/80(ಹೊಸ) | 10100-10150 |
| ಜಾವಾ 80/90(ಹೊಸ) | 9200-9250 |
| ದಪ್ಪ ಮಧ್ಯಪ್ರದೇಶ(ಹೊಸ) | 9700-9750 |
| ದಪ್ಪ ಗುಜರಾತ್(ಹೊಸ) | 9450-9500 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1545 (1530) |
| ಒಂದು ವಾರದ ಡೆಲಿವರಿ | 1540 (1525) |
| ಸೋಯಾ ಕಚ್ಚಾ | 1385 (1385) |
| ಪಾಮ್ ವಾರದ ಡೆಲಿವರಿ | 1293 (1288) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1440 (1440) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ
46,900 (46,950)
ಬೆಳ್ಳಿ ಕೆ.ಜಿ 62,950 (63,500)

ಆವರಣದಲ್ಲಿ ಶನಿವಾರದ ಧಾರಣೆ

### ‘ತೈಲ ಬಾಂಡ್ ಪಾವತಿಗೆ ಹೆಚ್ಚಿನ ಮೊತ್ತ ಇರಿಸಬೇಕು’

# ಪೆಟ್ರೋಲ್, ಡೀಸೆಲ್ ಸುಂಕ ಕಡಿತ ಇಲ್ಲ: ನಿರ್ಮಲಾ ಸ್ಪಷ್ಟನೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಕಡಿತ ಮಾಡುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದ್ದಾರೆ. ಹಿಂದೆ ಪೆಟ್ರೋಲ್ ಮತ್ತು ಡೀಸೆಲ್‌ಗೆ ನೀಡಿದ್ದ ಸಬ್ಸಿಡಿಗೆ ಬದಲಾಗಿ ಪಾವತಿ ಮಾಡಬೇಕಿರುವ ಮೊತ್ತವು ಸುಂಕ ಕಡಿತಕ್ಕೆ ಅವಕಾಶ ಕೊಡುತ್ತಿಲ್ಲ ಎಂದು ಹೇಳಿದ್ದಾರೆ.

ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲವನ್ನು ಸಬ್ಸಿಡಿ ದರದಲ್ಲಿ ಮಾರಲಾಗುತ್ತಿತ್ತು. ಸಬ್ಸಿಡಿ ಮೊತ್ತವನ್ನು ಪಾವತಿಸುವ ಬದಲು ಆಗ ಕೇಂದ್ರವು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಿಗೆ ₹ 1.34 ಲಕ್ಷ ಕೋಟಿ ಮೊತ್ತದ ತೈಲ ಬಾಂಡ್ ನೀಡಿತು. ಆ ಬಾಂಡ್‌ನ ಅಸಲು ಹಾಗೂ ಬಡ್ಡಿಯ ಮೊತ್ತವನ್ನು ಈಗ ಪಾವತಿಸಲಾಗುತ್ತಿದೆ.


‘ತೈಲ ಬಾಂಡ್‌ಗೆ ಸಂಬಂಧಿಸಿದ ಮೊತ್ತವನ್ನು ಪಾವತಿಸುವ ಹೊರೆ ಇಲ್ಲದಿದ್ದರೆ ನಾನು ಈಗ ತೈಲೋತ್ಪನ್ನಗಳ ಮೇಲಿನ ಎಕ್ಸೈಸ್ ಸುಂಕವನ್ನು ಕಡಿಮೆ ಮಾಡುವ ಸ್ಥಿತಿಯಲ್ಲಿ ಇರುತ್ತಿದ್ದೆ’ ಎಂದು ನಿರ್ಮಲಾ ಅವರು ಸುದ್ದಿಗಾರರ ಬಳಿ ಹೇಳಿದರು. ‘ತೈಲ ಬಾಂಡ್ ವಿತರಿಸುವ ಮೂಲಕ ಹಿಂದಿನ ಸರ್ಕಾರವು ನಮ್ಮ ಕೆಲಸವನ್ನು ಕಷ್ಟಕರವಾಗಿಸಿದೆ. ತೈಲ ಬಾಂಡ್‌ಗಳಿಗೆ ಭಾರಿ ಮೊತ್ತ ತೆಗೆದಿರಿಸಬೇಕಾಗಿದೆ’ ಎಂದು ಅವರು ವಿವರಿಸಿದರು.

ಕಳೆದ ಏಳು ವರ್ಷಗಳಲ್ಲಿ ತೈಲ ಬಾಂಡ್‌ಗಳ ಮೇಲಿನ ಬಡ್ಡಿ ಪಾವತಿಯು ₹ 70,195 ಕೋಟಿ ಆಗಿದೆ ಎಂದರು. ತೈಲ ಬಾಂಡ್‌ನ ಅಸಲು ಮೊತ್ತ ₹ 1.34 ಲಕ್ಷ ಕೋಟಿ. ಅಸಲು ಮೊತ್ತದಲ್ಲಿ ₹ 3,500 ಕೋಟಿ ಮಾತ್ರ ಪಾವತಿ ಆಗಿದೆ. ಇನ್ನುಳಿದ ₹ 1.3 ಲಕ್ಷ ಕೋಟಿ ಮೊತ್ತವನ್ನು 2025–26ರೊಳಗೆ ಪಾವತಿಸಬೇಕಿದೆ ಎಂದು ತಿಳಿಸಿದರು. ‘ಗಮನಾರ್ಹ ಮೊತ್ತವು ಬಡ್ಡಿ ಹಾಗೂ ಅಸಲು ಪಾವತಿಗೆ ವಿನಿಯೋಗ ಆಗುತ್ತಿದೆ. ನನ್ನ ಮೇಲೆ ಅನ್ಯಾಯದ ಹೊರೆ ಬಿದ್ದಿದೆ’ ಎಂದು ಅಳಲು ತೋಡಿಕೊಂಡರು.

ಎಕ್ಸೈಸ್ ಸುಂಕದಲ್ಲಿ ಮಾಡಿದ ಹೆಚ್ಚಳದಿಂದ ಸಂಗ್ರಹವಾಗಿರುವ ಮೊತ್ತವು ತೈಲ ಕಂಪನಿಗಳಿಗೆ ಪಾವತಿಸಬೇಕಿರುವ ಮೊತ್ತಕ್ಕಿಂತ ಜಾಸ್ತಿ ಆಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯಿಂದ ಕೇಂದ್ರವು ಸಂಗ್ರಹಿಸಿರುವ ಮೊತ್ತವು ಮಾರ್ಚ್ 31ರವರೆಗೆ ₹ 3.35 ಲಕ್ಷ ಕೋಟಿ ಆಗಿತ್ತು ಎಂದು ಸರ್ಕಾರವು ಸಂಸತ್ತಿಗೆ ಈಚೆಗೆ ತಿಳಿಸಿದೆ. ಹಿಂದಿನ ವರ್ಷದಲ್ಲಿ ಸಂಗ್ರಹವಾದ ಮೊತ್ತ ₹ 1.78 ಲಕ್ಷ ಕೋಟಿ ಆಗಿತ್ತು.

ರಾಜ್ಯ ಸರ್ಕಾರಗಳು ಒಪ್ಪಿಗೆ ನೀಡಿದರೆ ಪೆಟ್ರೋಲ್ ಮತ್ತು ಡೀಸೆಲ್‌ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬಹುದು ಎಂದು ನಿರ್ಮಲಾ ಹೇಳಿದರು.

**ತೈಲ ಬಾಂಡ್‌ಗಳಿಗೆ ಯಾವ ವರ್ಷ, ಎಷ್ಟು ಪಾವತಿ?**




(ತೈಲ ಬಾಂಡ್‌ಗಾಗಿ ಕೇಂದ್ರವು ಪಾವತಿಸಬೇಕಿರುವ ಮೊತ್ತ ಇದು. ಮೊತ್ತವನ್ನು ಕೋಟಿ ರೂಪಾಯಿಗಳಲ್ಲಿ ನೀಡಲಾಗಿದೆ)

## ಕೋವಿಡ್ ಪೂರ್ವದ ಸ್ಥಿತಿಗೆ ವಾಣಿಜ್ಯ ಚಟುವಟಿಕೆ: ನೊಮುರ

ಮುಂಬೈ (ಪಿಟಿಐ): ದೇಶದಲ್ಲಿ ವಾಣಿಜ್ಯ ಚಟುವಟಿಕೆಗಳು ಸತತ ಎರಡು ವಾರಗಳಿಂದ ಏರುಗತಿಯಲ್ಲಿ ಸಾಗಿವೆ. ಆಗಸ್ಟ್ 15ಕ್ಕೆ ಕೊನೆಗೊಂಡ ವಾರದಲ್ಲಿ ಕೋವಿಡ್ ಪೂರ್ವದ ಮಟ್ಟವನ್ನು ದಾಟಿವೆ ಎಂದು ಜಪಾನ್ ಮೂಲದ ಬ್ರೋಕರೇಜ್ ಸಂಸ್ಥೆ ನೊಮುರ ಹೇಳಿದೆ. 2020ರ ಮಾರ್ಚ್‌ನಲ್ಲಿ ಕೋವಿಡ್ ಅಪ್ಪಳಿಸಿದಾಗಿನಿಂದ ಚಟುವಟಿಕೆಗಳು ಈ ಮಟ್ಟವನ್ನು ತಲುಪಿದ್ದು ಇದೇ ಮೊದಲು.

ನೊಮುರ ಇಂಡಿಯಾ ವಾಣಿಜ್ಯ ಪುನರಾರಂಭ ಸೂಚ್ಯಂಕವು (ಎನ್‌ಐಬಿಆರ್‌ಐ) ದೇಶದ ವಾಣಿಜ್ಯ ಚಟುವಟಿಕೆಗಳನ್ನು ಕೋವಿಡ್ ಪೂರ್ವದ ಸ್ಥಿತಿಯೊಂದಿಗೆ ಪ್ರತಿ ವಾರವೂ ಹೋಲಿಕೆ ಮಾಡಿ ನೋಡುತ್ತದೆ. ಈ ಸೂಚ್ಯಂಕವು ಆಗಸ್ಟ್ 15ಕ್ಕೆ ಕೊನೆಗೊಂಡ ವಾರದಲ್ಲಿ 101.2ಕ್ಕೆ ತಲುಪಿದೆ. ಅದರ ಹಿಂದಿನ ವಾರದಲ್ಲಿ ಇದು 99.6ರಲ್ಲಿ ಇತ್ತು.

ಹಿಂದಿನ ವರ್ಷ ರಾಷ್ಟ್ರಮಟ್ಟದಲ್ಲಿ ಲಾಕ್‌ಡೌನ್ ಜಾರಿಗೆ ಬಂದ ನಂತರ, ಏಪ್ರಿಲ್‌ನಲ್ಲಿ ಸೂಚ್ಯಂಕವು ತೀವ್ರ ಕುಸಿತ ಕಂಡಿತ್ತು. ನಂತರದಲ್ಲಿ ಸ್ಥಿರವಾದ ಬೆಳವಣಿಗೆ ಕಂಡಿತ್ತು.

‘ಎರಡನೆಯ ಅಲೆಯ ನಂತರದಲ್ಲಿ ಸೂಚ್ಯಂಕವು ಬಹಳ ವೇಗವಾಗಿ ಏರಿಕೆ ಕಂಡಿದೆ. ಮೊದಲ ಅಲೆಯ ನಂತರ 100ರ ಸಮೀಪ ಬರಲು ಸೂಚ್ಯಂಕಕ್ಕೆ ಸರಿಸುಮಾರು 10 ತಿಂಗಳು ಬೇಕಾಗಿತ್ತು. ಆದರೆ, ಎರಡನೆಯ ಅಲೆಯ ನಂತರ ಮೂರೇ ತಿಂಗಳಿನಲ್ಲಿ ಸೂಚ್ಯಂಕವು 100ರ ಗಡಿಯನ್ನು ದಾಟಿದೆ’ ಎಂದು ನೊಮುರ ಸಂಸ್ಥೆ ಹೇಳಿದೆ.


**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 600-6500 |
| ನಡುಗೋಲು | 700-750 |
| ರಾಶಿ | 800-850 |
| ರಾಶಿ ಉತ್ತಮ | 900-950 |
| ಜರಡಿ | 1000-1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 800-850 |
| ಹಸಿರು ಉತ್ತಮ | 1000-1050 |
| ಹಸಿರು ಅತಿ ಉತ್ತಮ | 1300-1400 |
| ಕಾಳು ಮೆಣಸು | 380 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 22500-40500 |
| ಹಳತು | 42500-50500 |
| **ಕುಮಟ** | |
| ಚಿಪ್ಪು | 32569-34569 |
| ಕೋಕ | 22109-32509 |
| ಫ್ಯಾಕ್ಟರಿ | 16099-20989 |
| ಹಳೆಚಾಲಿ | 43569-43729 |
| ಹೊಸಚಾಲಿ | 38899-40599 |
| **ಪುತ್ತೂರು** | |
| ಕೋಕ | 10500-26000 |
| ಹೊಸತು | 21500-46000 |
| **ಸಿದ್ದಾಪುರ** | |
| ಬಿಳಿಗೋಟು | 26699-35099 |
| ಕೋಕ | 21900-33799 |
| ಚಾಲಿ | 35099-41099 |
| ಕೆಂಪುಗೋಟು | 30199-31199 |
| ರಾಶಿ | 37890-42099 |
| ತಟ್ಟಿಬೆಟ್ಟೆ | 33409-34869 |
| **ಯಲ್ಲಾಪುರ** | |
| ಬಿಳಿಗೋಟು | 31212-35199 |
| ಕೋಕ | 22900-31512 |
| ಚಾಲಿ | 36289-41149 |
| ಕೆಂಪುಗೋಟು | 27069-32103 |
| ರಾಶಿ | 40699-46779 |
| ತಟ್ಟಿಬೆಟ್ಟೆ | 34969-39490 |
| **ಶಿವಮೊಗ್ಗ ಎಪಿಎಂಸಿ** | |
| ಬೆಟ್ಟೆ | 45400-47599 |
| ರಾಶಿ | 38899-44299 |
| ಸರಕು | 48000-74620 |
| ಗೊರಬಲು | 17110-36089 |
| **ಸಾಗರ** | |
| ಬಿಳಿಗೋಟು | 27099-34399 |
| ಕೋಕ | 22899-34399 |
| ಚಾಲಿ | 34889-40009 |
| ಕೆಂಪುಗೋಟು | 34199-36309 |
| ರಾಶಿ | 38570-44069 |
| ಸಿಪ್ಪೆಗೋಟು | 15700-22962 |
| **ರಾಮನಗರ ರೇಷ್ಮೆ ಧಾರಣೆ** | |
| ಮಿಶ್ರತಳಿ (ಸಿ.ಬಿ) | 288-489 |
| ದ್ವಿತಳಿ (ಬಿ.ವಿ) | 321-534 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 13850 | 13000 | 12650 | 186.55 ಸೆಂಟ್ಸ್ |
| ಎಸಿ | 6150 | 4800 | 5100 | |
| ಆರ್‌ಪಿ | 6150 | 5950 | 6100 | ಲಂಡನ್ |
| ಆರ್‌ಸಿ | 3405 | 3400 | 3475 | 1849 ಡಾಲರ್ಸ್ |

**ಷೇರುಪೇಟೆ ವಹಿವಾಟು** 145




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 16,529 |
| ಇಂದಿನ ಅಂತ್ಯ | 16,563 |
| ▲ | 34 |
| ದಿನದ ಗರಿಷ್ಠ | 16,589 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| **ಬೆಂಗಳೂರು** | |
| 100 ಮೊಟ್ಟೆಗೆ | ₹435 |
| 12 ಮೊಟ್ಟೆಗೆ | ₹60 |
| **ಮೈಸೂರು** | |
| 100 ಮೊಟ್ಟೆಗೆ | ₹435 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1535 (1520) |
| ಸೋಯಾ (ರಿಫೈನ್ಡ್) | ₹1400 (1415) |
| ಸೂರ್ಯಕಾಂತಿ (ರಿಫೈನ್ಡ್) | ₹1500(1490) |
| ಪಾಮೋಲಿನ್ | ₹1295 (1290) |

### ಜುಲೈನಲ್ಲಿ ಶೇ 11.16ಕ್ಕೆ ಇಳಿಕೆ: ವಾಣಿಜ್ಯ ಸಚಿವಾಲಯದ ಮಾಹಿತಿ

# ತುಸು ತಗ್ಗಿದ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಆಧರಿಸಿದ ಹಣದುಬ್ಬರವು ಜುಲೈನಲ್ಲಿ ಶೇಕಡ 11.16ರಷ್ಟಾಗಿದೆ. ಜೂನ್‌ನಲ್ಲಿ ಇದ್ದ ಶೇ 12.07ಕ್ಕೆ ಹೋಲಿಸಿದರೆ ತುಸು ಇಳಿಕೆ ಕಂಡಿದೆ. ಆಹಾರ ವಸ್ತುಗಳ ಬೆಲೆಯೇರಿಕೆಯು ತುಸು ತಗ್ಗಿರುವುದರಿಂದ ಒಟ್ಟಾರೆ ಹಣದುಬ್ಬರದಲ್ಲಿ ಅಲ್ಪ ಇಳಿಕೆ ಕಂಡುಬಂದಿದೆ.

ಮೇ ತಿಂಗಳಿನಲ್ಲಿ ಸಾರ್ವಕಾಲಿಕ ದಾಖಲೆಯ ಮಟ್ಟವಾದ ಶೇ 12.94ಕ್ಕೆ ತಲುಪಿತ್ತು. ಇದಕ್ಕೆ ಹೋಲಿಸಿದರೆ ಜೂನ್ ಮತ್ತು ಜುಲೈನಲ್ಲಿ ಸಗಟು ಹಣದುಬ್ಬರವು ಇಳಿಮುಖವಾಗಿದೆಯಾದರೂ ಎರಡಂಕಿ ಮಟ್ಟದಲ್ಲಿಯೇ ಇದೆ. ಸಗಟು ಹಣದುಬ್ಬರವು 2020ರ ಜುಲೈನಲ್ಲಿ ಶೇ (–) 0.25ರಷ್ಟಿತ್ತು.


ಈ ವರ್ಷದ ಜುಲೈನಲ್ಲಿ ಹಣದುಬ್ಬರ ದರವು ಗರಿಷ್ಠ ಮಟ್ಟದಲ್ಲಿ ಇರಲು ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ, ತಯಾರಿಕಾ ಉತ್ಪನ್ನಗಳು, ಆಹಾರ ಉತ್ಪನ್ನಗಳು, ಜವಳಿ, ರಾಸಾಯನಿಕ ಮತ್ತು ಅದರ ಉತ್ಪನ್ನಗಳ ಬೆಲೆ ಏರಿಕೆಯೇ ಪ್ರಮುಖ ಕಾರಣ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಆಹಾರ ಹಣದುಬ್ಬರ ಸತತ ಮೂರನೇ ತಿಂಗಳಿನಲ್ಲಿಯೂ ಇಳಿಕೆ ಕಂಡಿದೆ. ಜೂನ್‌ನಲ್ಲಿ ಶೇ 3.09ರಷ್ಟು ಇದ್ದಿದ್ದು ಜುಲೈನಲ್ಲಿ ಶೂನ್ಯಕ್ಕೆ ಇಳಿದಿದೆ. ಆದರೆ, ಈರುಳ್ಳಿ ಹಣದುಬ್ಬರವು ಶೇ 72.01ರಷ್ಟಿದೆ. ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲದ ಹಣದುಬ್ಬರವು ಶೇ 36.34ರಿಂದ ಶೇ 40.28ಕ್ಕೆ ಏರಿದೆ. ತಯಾರಿಕಾ ವಸ್ತುಗಳ ಹಣದುಬ್ಬರವು ಶೇ 10.88ರಿಂದ ಶೇ 11.20ಕ್ಕೆ ಹೆಚ್ಚಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಚಿಲ್ಲರೆ ಹಣದುಬ್ಬರದ ಅಂಕಿ–ಅಂಶಗಳನ್ನು ಪರಿಗಣಿಸಿ ಬಡ್ಡಿದರ ಪರಾಮರ್ಶೆ ನಡೆಸುತ್ತದೆ. ಕಳೆದ ವಾರ ನಡೆಸಿದ್ದ ಸಭೆಯಲ್ಲಿ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿತ್ತು. 2021–22ರಲ್ಲಿ ಚಿಲ್ಲರೆ ಹಣದುಬ್ಬರವು ಶೇ 5.7ರ ಮಟ್ಟದಲ್ಲಿ ಇರಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ.

ಕಳೆದ ವಾರ ಬಿಡುಗಡೆ ಆಗಿರುವ ಮಾಹಿತಿಯ ಪ್ರಕಾರ, ಚಿಲ್ಲರೆ ಹಣದುಬ್ಬರವು ಜುಲೈನಲ್ಲಿ ಶೇ 5.59ರಷ್ಟಿದೆ. ಜೂನ್‌ನಲ್ಲಿ ಇದ್ದ ಶೇ 6.26ರಷ್ಟಕ್ಕೆ ಹೋಲಿಸಿದರೆ ಇಳಿಕೆ ಆಗಿದೆ.

**ಸಗಟು ಹಣದುಬ್ಬರ (%)**




## ಹೊಸ ಎತ್ತರದಲ್ಲಿ ಷೇರುಪೇಟೆ ವಹಿವಾಟು ಅಂತ್ಯ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸೋಮವಾರ ಹೊಸ ಎತ್ತರ ತಲುಪಿ ವಹಿವಾಟು ಅಂತ್ಯಗೊಳಿಸಿವೆ. ರಿಲಯನ್ಸ್, ಎಚ್‌ಡಿಎಫ್‌ಸಿ, ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳು ಉತ್ತಮ ವಹಿವಾಟು ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 145 ಅಂಶ ಹೆಚ್ಚಾಗಿ 55,582 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 34 ಅಂಶ ಹೆಚ್ಚಾಗಿ 16,563 ಅಂಶಗಳಿಗೆ ತಲುಪಿತು. ಸೆನ್ಸೆಕ್ಸ್‌ನಲ್ಲಿ ಟಾಟಾ ಸ್ಟೀಲ್ ಷೇರು ಶೇಕಡ 4ರಷ್ಟು ಗರಿಷ್ಠ ಗಳಿಕೆ ಕಂಡಿತು.

ಷೇರುಪೇಟೆ ವಹಿವಾಟು ಆರಂಭದಲ್ಲಿ ಮಂದಗತಿಯಲ್ಲಿತ್ತು. ಆ ಬಳಿಕ ರಿಲಯನ್ಸ್, ಲೋಹ ಹಾಗೂ ಹಣಕಾಸು ವಲಯಗಳ ಷೇರುಗಳು ಉತ್ತಮ ಖರೀದಿಗೆ ಒಳಗಾಗಿದ್ದರಿಂದ ಅಲ್ಪ ಏರಿಕೆಯೊಂದಿಗೆ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯವಾಯಿತು ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.